ಸೋಮವಾರ, ಸೆಪ್ಟೆಂಬರ್ 13, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 255 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ಇಂದಿನ ಉದ್ಯೋಗಕ್ಷೇತ್ರದಲ್ಲಿ ಬೇಡಿಕೆ ಹೆಚ್ಚಿಸಿಕೊಂಡು ಸ್ಥಿರತೆ ಕಾಪಾಡಿಕೊಳ್ಳಲು ವಿದ್ಯಾರ್ಥಿಗಳು ಕೆಲವು ಕೌಶಲಗಳನ್ನು ರೂಢಿಸಿಕೊಳ್ಳುವುದು ಅನಿವಾರ್ಯವಾಗಿದೆ



ತಾಂತ್ರಿಕ ದೋಷ: ಪಾರ್ಕಿಂಗ್ ಜಾಗಕ್ಕೆ ಮರಳಿದ ವಿಮಾನ 3A
ಸ್ವಿಸ್ ಬ್ಯಾಂಕ್: ಭಾರತೀಯರ ಖಾತೆ ವಿವರ ತಿಂಗಳಾಂತ್ಯಕ್ಕೆ ಲಭ್ಯ 9
ಅನುಭವ ಮಂಟಪ ಮುಕ್ತ ಮಾರುಕಟ್ಟೆ ಕೃಷಿ ಸಂಕಟಕ್ಕೆ ಕೊಡದು ಮುಕ್ತಿ
ಕ್ರೀಡಾಂಗಣದಲ್ಲಿ ರೌಡಿ ಅರವಿಂದ್ ಹತ್ಯೆ 3A

ಬೆಂಗಳೂರು ಗ್ರಾಮಾಂತರ ಗರಿಷ್ಠ ಶೇ 39.66; ಚಿತ್ರದುರ್ಗ ಕನಿಷ್ಠ ಶೇ 2.25

ಶಾಸಕರ ‘ನಿಧಿ’: ಸಿಎಂ ಅತೃಪ್ತಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯ ಸರ್ಕಾರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ (ಶಾಸಕರ ನಿಧಿ) ನಿಗದಿಪಡಿಸಿದ ವಾರ್ಷಿಕ ₹ 2 ಕೋಟಿ ಅನುದಾನ ಪಡೆದುಕೊಳ್ಳಲು ಪ್ರತಿ ವಿಧಾನಮಂಡಲ ಅಧಿವೇಶನಗಳಲ್ಲಿ ಪಕ್ಷಾತೀತವಾಗಿ ಧ್ವನಿ ಎತ್ತುವ ಶಾಸಕರು, ಹೀಗೆ ಮಂಜೂರಾದ ಹಣವನ್ನು ಕ್ಷೇತ್ರದ ಅಭಿವೃದ್ಧಿಗೆ ಬಳಕೆ ಮಾಡುವ ವಿಷಯದಲ್ಲಿ ಭಾರಿ ಹಿಂದುಳಿದಿದ್ದಾರೆ.

ಇದೀಗ ಸ್ವತಃ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈ ಬಗ್ಗೆ ವಿಧಾನಸಭೆ ಮತ್ತು ವಿಧಾನ ಪರಿಷತ್ ಸದಸ್ಯರಿಗೆ ಪತ್ರ ಬರೆದು, ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಜುಲೈ 2021ರವರೆಗೆ ಸರಾಸರಿ ಶೇ 17.21ರಷ್ಟು ಮಾತ್ರ ಆರ್ಥಿಕ ಪ್ರಗತಿ ಆಗಿರುವುದನ್ನು ನಾನು ಗಮನಿಸಿದ್ದೇನೆ. ಜಿಲ್ಲಾವಾರು ವಿವರವನ್ನೂ ನೀಡಿದ್ದೇನೆ. ಎಲ್ಲ ಜಿಲ್ಲಾಧಿಕಾರಿಗಳ ಪಿ.ಡಿ. (ವೈಯಕ್ತಿಕ ಠೇವಣಿ) ಖಾತೆಯಲ್ಲಿ ಪ್ರಸ್ತುತ ಒಟ್ಟು ₹938.15 ಕೋಟಿ ಅನುದಾನ ಲಭ್ಯವಿದೆ’ ಎಂದು ಸೆ. 6ರಂದು ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಬಿಡುಗಡೆ ಆಗಿರುವ ಅನುದಾನದ ಕುಂಠಿತ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ಜಿಲ್ಲಾಧಿಕಾರಿಗಳ ಜೊತೆ ಸಮನ್ವಯ ಸಾಧಿಸಿ ಉತ್ತಮ ಪ್ರಗತಿ ಸಾಧಿಸಬೇಕು

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ
(ಶಾಸಕರಿಗೆ ಬರೆದ ಪತ್ರದಲ್ಲಿ)

ಪ್ರಜಾವಾಣಿ ವಿಶೇಷ

‘ಅತೀ ಹೆಚ್ಚು ಪ್ರಗತಿ ಬೆಂಗಳೂರು ಗ್ರಾಮಾಂತರ, ಅತೀ ಕಡಿಮೆ ಚಿತ್ರದುರ್ಗ ಜಿಲ್ಲೆಯಲ್ಲಿ ಆಗಿದೆ. ಪ್ರತಿಯೊಬ್ಬ ಶಾಸಕರ ಖಾತೆಯಲ್ಲಿ ಲಭ್ಯ ಇರುವ ಅನುದಾನ ಮತ್ತು ಖರ್ಚು ಆಗಿರುವ ಮೊತ್ತದ ಮಾಹಿತಿಯನ್ನೂ ಈ ಪತ್ರದ ಜೊತೆಗೆ ನಿಮಗೆ ನೀಡಿದ್ದೇನೆ. ಈ ಪೈಕಿ, ಧಾರವಾಡದ ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ಅವರ ಕ್ಷೇತ್ರದಲ್ಲಿ ಅತೀ ಹೆಚ್ಚು ಶೇ 63.03 ಪ್ರಗತಿ ಆಗಿದೆ. ಆದರೆ, ಚಿತ್ರದುರ್ಗ, ಹೊಸದುರ್ಗ, ಹೊಳಲ್ಕೆರೆ, ಚಳ್ಳಕೆರೆ ಕ್ಷೇತ್ರಗಳಲ್ಲಿನ ಪ್ರಗತಿ ಶೂನ್ಯ’ ಎಂದೂ ಮುಖ್ಯಮಂತ್ರಿ ಉಲ್ಲೇಖಿಸಿದ್ದಾರೆ.

ಅತೀ ಕಡಿಮೆ ವೆಚ್ಚವಾದ 5 ಜಿಲ್ಲೆ

ಜಿಲ್ಲೆ	ಶೇಕಡಾ
ಚಿತ್ರದುರ್ಗ	2.25
ಕಲಬುರ್ಗಿ	7.15
ವಿಜಯಪುರ	8.98
ಬಳ್ಳಾರಿ	10.25
ಕೊಪ್ಪಳ	11.63

ಅತೀ ಹೆಚ್ಚು ವೆಚ್ಚವಾದ 5 ಜಿಲ್ಲೆ

ಜಿಲ್ಲೆ	ಶೇಕಡಾ
ಬೆಂಗಳೂರು ಗ್ರಾಮಾಂತರ	39.66
ಉಡುಪಿ	38.72
ಕೋಲಾರ	36.39
ಕೊಡಗು	31.91
ಹಾಸನ	31.69

8ನೇ ಪುಟ ನೋಡಿ

ಇಂದಿನಿಂದ ಅಧಿವೇಶನ

ಧರಣಿ, ಗದ್ದಲ ಇಲ್ಲ: ಮಾತಿನ ‘ಕುಸ್ತಿ’

ಬೆಂಗಳೂರು: ಬೆಲೆ ಏರಿಕೆ, ಕಾನೂನು ಸುವ್ಯವಸ್ಥೆ, ರಾಷ್ಟ್ರೀಯ ಶಿಕ್ಷಣ ನೀತಿ, ಕೋವಿಡ್ ನಿಯಂತ್ರಣ ಮತ್ತು ಸಚಿವರ ಭ್ರಷ್ಟಾಚಾರ ಆರೋಪಗಳ ಕುರಿತು ಸೋಮವಾರದಿಂದ ಆರಂಭವಾಗುವ ವಿಧಾನ ಮಂಡಲದ ಅಧಿವೇಶನದಲ್ಲಿ ಪ್ರಸ್ತಾಪಿಸಿ ಸರ್ಕಾರದ ಹೆಡೆಮುರಿ ಕಟ್ಟಲು ಪ್ರಮುಖ ವಿರೋಧಪಕ್ಷಗಳು ತಯಾರಿ ನಡೆಸಿವೆ.

ಕಾಂಗ್ರೆಸ್ ಈ ಬಾರಿ ತನ್ನ ಕಾರ್ಯತಂತ್ರವನ್ನು ಬದಲಿಸಿದ್ದು, ಧರಣಿ, ಸಭಾತ್ಯಾಗ ಮತ್ತು ಕಲಾಪಕ್ಕೆ ಅಡ್ಡಿಪಡಿಸುವ ಹಾದಿಯನ್ನು ಬಿಟ್ಟು ಆರೋಗ್ಯಕರ ಚರ್ಚೆಯ ಮೂಲಕವೇ ಸರ್ಕಾರಕ್ಕೆ ಚಾಟಿ ಬೀಸಲು ಸಿದ್ಧತೆ ನಡೆಸಿದೆ. ಜೆಡಿಎಸ್ ತನ್ನ ರಣನೀತಿ ಏನೆಂಬುದನ್ನು ಸ್ಪಷ್ಟಪಡಿಸಿಲ್ಲ.

8ನೇ ಪುಟ ನೋಡಿ

ಗುಜರಾತ್: ಭೂಪೇಂದ್ರಗೆ ಮುಖ್ಯಮಂತ್ರಿ ಹುದ್ದೆ

ಗಾಂಧಿನಗರ (ಪಿಟಿಐ): ಬಿಜೆಪಿ ಶಾಸಕ ಭೂಪೇಂದ್ರ ಪಟೇಲ್ (59) ಅವರು ಗುಜರಾತ್‌ನ ನೂತನ ಮುಖ್ಯಮಂತ್ರಿ ಆಗಲಿದ್ದಾರೆ. ಶಾಸಕಾಂಗ ಪಕ್ಷದ ನಾಯಕರಾಗಿ ಸರ್ವಾನುಮತದಿಂದ ಅವರು ಭಾನುವಾರ ಆಯ್ಕೆ ಆದರು. ಮುಖ್ಯಮಂತ್ರಿ ಸ್ಥಾನಕ್ಕೆ ಶನಿವಾರ ರಾಜೀನಾಮೆ ನೀಡಿದ ವಿಜಯ ರೂಪಾಣಿ ಅವರು ಭೂಪೇಂದ್ರ ಅವರ ಹೆಸರು ಸೂಚಿಸಿದರು. ರೂಪಾಣಿ ಅವರ ಅನಿರೀಕ್ಷಿತ ರಾಜೀನಾಮೆ ರಾಜಕೀಯ ವಲಯದಲ್ಲಿ ಅಚ್ಚರಿಗೆ ಕಾರಣವಾಗಿತ್ತು.

ಬಿಜೆಪಿಯ 112 ಶಾಸಕರ ಪೈಕಿ ಹೆಚ್ಚಿನವರು ಶಾಸಕಾಂಗ ಪಕ್ಷದ ಸಭೆಯಲ್ಲಿ ಹಾಜರಿದ್ದರು ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಇನ್ನೊಂದು ಸುದ್ದಿ 7

ಗಾರ್ಮೆಂಟ್ಸ್ ಕಾರ್ಮಿಕರ ಬದುಕು ಮೂರಾಬಟ್ಟೆ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಗಾರ್ಮೆಂಟ್ಸ್ ಉದ್ಯಮಗಳ ಕಾರ್ಮಿಕರಲ್ಲಿ ಹಲವರ ಬದುಕು ಕೋವಿಡ್ ಅಡಕತ್ತರಿಯಲ್ಲಿ ಸಿಲುಕಿ ಅಕ್ಷರಶಃ ಚಿಂದಿಯಾಗಿದೆ. ಬೆಂಗಳೂರು, ಮೈಸೂರು, ರಾಮನಗರ ಸೇರಿ ಇತರ ಪ್ರಮುಖ ನಗರಗಳಲ್ಲಿ ಗಾರ್ಮೆಂಟ್ಸ್ ಉದ್ಯಮ ನೆಚ್ಚಿಕೊಂಡವರ ಬದುಕು ಮೂರಾಬಟ್ಟೆಯಾಗಿದೆ.

2020ರ ಮಾರ್ಚ್‌ನಲ್ಲಿ ಬೆಂಗಳೂರಿನಲ್ಲಿ ವ್ಯಾಪಿಸುತ್ತಿದ್ದ ಕೋವಿಡ್‌ನಿಂದ ತಪ್ಪಿಸಿಕೊಂಡರೆ ಸಾಕು ಎಂದು ಹಲವರು ದಿಢೀರ್ ಮನೆ ಖಾಲಿ ಮಾಡಿ ಹಳ್ಳಿಗಳಿಗೆ ತೆರಳಿದ್ದರು. ಹೀಗೇ ತೊರೆದವರಲ್ಲಿ ಗಾರ್ಮೆಂಟ್ಸ್ ಕಾರ್ಖಾನೆಗಳ ಕಾರ್ಮಿಕರೂ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಹಳ್ಳಿಯಲ್ಲಿ ಬದುಕು ದುಸ್ತರವಾಗಿ ಬೆಂಗಳೂರಿಗೆ ಬಂದು ಹೊಸ ಬದುಕು ಕಟ್ಟಿಕೊಂಡಿದ್ದವರು ಮತ್ತೆ ಅದೇ ಸ್ಥಿತಿಗೆ ಮರಳಬೇಕಾಯಿತು.

ಲಾಕ್‌ಡೌನ್ ತೆರವಾದ ಬಳಿಕ ಕೆಲವರು ವಾಪಸ್ ಬಂದಿದ್ದರೆ, ಬಹುತೇಕ ಮಂದಿ ಇನ್ನೂ ಬೆಂಗಳೂರಿನತ್ತ ಮುಖ ಮಾಡಿಯೇ ಇಲ್ಲ. ವಾಪಸ್ ಬಾರದವರಲ್ಲಿ ಕೆಲವರು ಹಳ್ಳಿಯಲ್ಲೇ ಬದುಕು ಕಟ್ಟಿಕೊಂಡಿದ್ದರೆ, ಮತ್ತೆ ಕೆಲವರ ಬದುಕು ಈಗಲೂ ತೂಗುಯ್ಯಾಲೆಯಲ್ಲೇ ಇದೆ.

ಗಾರ್ಮೆಂಟ್ಸ್ ಕಾರ್ಖಾನೆ

ಬದುಕು ಬೀದಿಗೆ ತಂದ ಕೋವಿಡ್

ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ತಳ ಸಮುದಾಯಗಳ ಬದುಕು ನೆಲಕಚ್ಚಿತ್ತು. ಈಗ ಪರಿಸ್ಥಿತಿ ಕೊಂಚ ಸುಧಾರಿಸಿದ್ದರೂ ಅವರ ಬದುಕಿನ ಸ್ಥಿತಿಗತಿ ಹೇಗಿದೆ ಎಂಬುದರ ಮೇಲೆ ಬೆಳಕು ಚೆಲ್ಲುವ ಸರಣಿ ವರದಿಗಳು ಇಂದಿನಿಂದ ಪ್ರಕಟವಾಗಲಿವೆ.

9ನೇ ಪುಟ ನೋಡಿ

ಎಮಾ ರಡುಕಾನು ಅಮೆರಿಕ ಓಪನ್ ಚಾಂಪಿಯನ್

ನ್ಯೂಯಾರ್ಕ್: ಬ್ರಿಟನ್‌ನ ಎಮಾ ರಡುಕಾನು ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡಿದ್ದಾರೆ. ಫೈನಲ್ ಪಂದ್ಯದಲ್ಲಿ ಅವರು ಕೆನಡಾದ ಲೇಯ್ಲಾ ಫರ್ನಾಂಡಸ್ ವಿರುದ್ಧ 6–4, 6–3 ರಲ್ಲಿ ಗೆದ್ದರು. ಅರ್ಹತಾ ಸುತ್ತಿನಿಂದ ಬಂದು ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಗೆದ್ದ ಮೊದಲ ಟೆನಿಸ್ ಪಟು ಆಗಿದ್ದಾರೆ ಎಮಾ. 11

ಭೀಕರ ಅಪಘಾತ: ಎಂಟು ಸಾವು

ಚಿಂತಾಮಣಿ (ಚಿಕ್ಕಬಳ್ಳಾಪುರ): ಚಿಂತಾಮಣಿ–ಮದನಪಲ್ಲಿ ರಸ್ತೆಯ ಮರಿನಾಯಕನಹಳ್ಳಿ ಬಳಿ ಭಾನುವಾರ ಸಿಮೆಂಟ್ ಲಾರಿ ಮತ್ತು ಜೀಪ್ ನಡುವೆ ಸಂಭವಿಸಿದ ಅಪಘಾತದಲ್ಲಿ ಎಂಟು ಮಂದಿ ಮೃತಪಟ್ಟಿದ್ದಾರೆ. 8

ಚಿನಕುರಳಿ

ಪ್ರಕಾಶ್ ಶೆಟ್ಟಿ

ನಗರದ ಸುರಕ್ಷತಾ ವ್ಯವಸ್ಥೆಗೆ ಬಲ ತುಂಬಿದ 'ಸುಬಾಹು' • ಜಿಪಿಎಸ್, ಕೃತಕ ಬುದ್ಧಿಮತ್ತೆ ಆಧಾರಿತ ತಂತ್ರಜ್ಞಾನ ಬಳಕೆ

ಪೊಲೀಸರ ಗಸ್ತು 'ಇ–ಬೀಟ್' ಶಿಸ್ತು

• ಸಂತೋಷ ಜಿಗಳಿಕೊಪ್ಪ

ಮುಖ್ಯಾಂಶಗಳು

- ವಿಜಯನಗರ ಠಾಣೆಯಲ್ಲಿ ಮೊದಲ ಪ್ರಯೋಗ
- ಉತ್ತರ ವಿಭಾಗದಲ್ಲಿ ಸಂಪೂರ್ಣ ಜಾರಿ
- ಎಲ್ಲ ಠಾಣೆಗಳಿಗೂ ವಿಸ್ತರಿಸಲು ಚಿಂತನೆ

ಬೆಂಗಳೂರು: ಠಾಣೆಯ ವ್ಯಾಪ್ತಿಯಲ್ಲಿ ಅಪರಾಧ ಕೃತ್ಯ ತಡೆಯುವ ಉದ್ದೇಶದಿಂದ ನಿಗದಿಪಡಿಸುವ ಸ್ಥಳಗಳಲ್ಲಿ ಗಸ್ತು ತಿರುಗದೇ ನಿರ್ಲಕ್ಷ್ಯ ವಹಿಸುವ ಪೊಲೀಸರ ವರ್ತನೆಗೆ ಲಗಾಮು ಹಾಕಲು ಹಾಗೂ ಸಾರ್ವಜನಿಕರ ಸುರಕ್ಷತೆ ಹೆಚ್ಚಿಸಲು ನಗರದಲ್ಲಿ 'ಇ-ಬೀಟ್' ವ್ಯವಸ್ಥೆ ರೂಪಿಸಲಾಗಿದೆ. ಗಸ್ತು ಕಾರ್ಯವನ್ನು ಪೊಲೀಸ್ ಸಿಬ್ಬಂದಿ ಶಿಸ್ತು-ಬದ್ಧವಾಗಿ ನಿರ್ವಹಿಸುತ್ತಿದ್ದಾರೋ ಇಲ್ಲವೋ ಎಂಬುದನ್ನು ಖಾತರಿಪಡಿಸಿಕೊಳ್ಳಲು ಈ ವ್ಯವಸ್ಥೆ ನೆರವಾಗುತ್ತಿದೆ.

'ಠಾಣೆ ವತಿಯಿಂದಲೇ ನಿಗದಿಪಡಿಸುವ 'ಗಸ್ತು ಸ್ಥಳ'ಗಳಲ್ಲಿ ಪೊಲೀಸರು ಗಸ್ತು ತಿರುಗುತ್ತಿಲ್ಲ. ಗಸ್ತು ಪುಸ್ತಕವಿದ್ದರೂ, 15 ದಿನ ಅಥವಾ ತಿಂಗಳಿಗೊಮ್ಮೆ ಬಂದು ಸಹಿ ಮಾಡಿ ಹೋಗುತ್ತಾರೆ. ಇದರಿಂದಾಗಿ ಅಪರಾಧ ಕೃತ್ಯಗಳು ಹೆಚ್ಚಾಗುತ್ತಿವೆ' ಎಂಬ ಸಾರ್ವಜನಿಕರ ಆರೋಪದಿಂದ ಮುಕ್ತರಾಗಲು ಬೆಂಗಳೂರು ಪೊಲೀಸ್ ಕಮಿಷನರೇಟ್, 'ಇ-ಬೀಟ್' ಜಾರಿಗೆ ತಂದಿದೆ. ಇದಕ್ಕೆ 'ಸುಬಾಹು ಇ-ಬೀಟ್' ಎಂದು ಹೆಸರಿಸಲಾಗಿದೆ.

ನಗರದ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಆಗ್ನೇಯ, ಈಶಾನ್ಯ ಹಾಗೂ ವೈಟ್‌ಫೀಲ್ಡ್ ವಿಭಾಗಗಳಲ್ಲಿ ತಲಾ ಒಂದೊಂದು ಠಾಣೆ ವ್ಯಾಪ್ತಿಯಲ್ಲಿ ಪ್ರಾಯೋಗಿಕವಾಗಿ ಆರಂಭಿಸಲಾಗಿದ್ದ ವ್ಯವಸ್ಥೆ ಯಶಸ್ಸು ಕಂಡಿದೆ. ಇದೇ ಕಾರಣಕ್ಕೆ ಉತ್ತರ ವಿಭಾಗದಲ್ಲಿ 'ಇ-ಬೀಟ್' ವ್ಯವಸ್ಥೆಯನ್ನು ಸಂಪೂರ್ಣವಾಗಿ ಅಳವಡಿಸಿಕೊಳ್ಳಲಾಗಿದ್ದು, ಸಾರ್ವಜನಿಕರೂ ಈ ವ್ಯವಸ್ಥೆಗೆ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಹೊಸ ತಂತ್ರಜ್ಞಾನ ಹಾಗೂ ಆ್ಯಪ್ ಆಧರಿತವಾದ 'ಇ-ಬೀಟ್', ಗಸ್ತು ತಿರುಗುವ ಪ್ರತಿಯೊಬ್ಬ ಸಿಬ್ಬಂದಿಯ ಕೆಲಸದ ವೈಖರಿಯನ್ನು ದಾಖಲಿಸಿಟ್ಟುಕೊಳ್ಳುತ್ತದೆ. ನಿಗದಿತ ಗಸ್ತು ಸ್ಥಳಕ್ಕೆ ಸಿಬ್ಬಂದಿ ಹೋಗಿದ್ದರೆ ? ಎಷ್ಟು ಗಂಟೆಗೆ ಹೋಗಿದ್ದರು ? ಎಷ್ಟು ಸಮಯ ಸ್ಥಳದಲ್ಲಿದ್ದರು ? ಯಾರನ್ನು ಮಾತನಾಡಿಸಿದರು ? ಫೋಟೊ ಏನಾದರೂ ಅಪ್‌ಲೋಡ್ ಮಾಡಿದ್ದಾರೆಯೇ? ಹೀಗೆ... ನಾನಾ ಪ್ರಶ್ನೆಗಳಿಗೆ 'ಇ-ಬೀಟ್' ಉತ್ತರ ನೀಡುತ್ತದೆ.

ನಿಗದಿತ ಗಸ್ತು ಸ್ಥಳಕ್ಕೆ ಹೋಗದೆ, ಹೋಗಿರುವುದಾಗಿ ಸುಳ್ಳು ಹೇಳುವ ಸಿಬ್ಬಂದಿಯನ್ನು ಪತ್ತೆ ಹಚ್ಚಲು ಇ-ಬೀಟ್ ನೆರವಾಗಿದೆ. ವ್ಯವಸ್ಥೆಯಿಂದ ಸಿಗುವ ಪುರಾವೆಗಳನ್ನು ಆಧರಿಸಿ ತಪ್ಪಿತಸ್ಥ ಪೊಲೀಸರ ವಿರುದ್ಧ ಹಿರಿಯ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿದ್ದಾರೆ. ಪುರಾವೆ ಲಭ್ಯವಾಗುವ ಭಯದಲ್ಲಿ ಪ್ರತಿಯೊಬ್ಬ ಸಿಬ್ಬಂದಿಯೂ ತಮಗೆ ಗೊತ್ತುಪಡಿಸಿದ ಪ್ರದೇಶಗಳಲ್ಲಿ ಗಸ್ತು ಕಾರ್ಯವನ್ನು ಚಾಚೂತಪ್ಪದೇ ನಡೆಸುತ್ತಿದ್ದಾರೆ.

'ಗಸ್ತು ಸ್ಥಳವನ್ನು ಗುರುತಿಸಿ, ಅಲ್ಲಿ ಪುಸ್ತಕ ಇರಿಸುವ ವ್ಯವಸ್ಥೆ ಇತ್ತು. ಗಸ್ತು ತಿರುಗುವ ಸಿಬ್ಬಂದಿ ಪುಸ್ತಕದಲ್ಲಿ ಸಹಿ ಮಾಡಿ ಬರಬೇಕಿತ್ತು. ಮನಸ್ಸಿಗೆ ಬಂದಾಗಷ್ಟೇ ಬಹುತೇಕ ಸಿಬ್ಬಂದಿ ಸ್ಥಳಕ್ಕೆ ಹೋಗಿ ಬರುತ್ತಿದ್ದರು. ಕೆಲವರು ತಿಂಗಳಿಗೊಮ್ಮೆ ಸಹಿ ಮಾಡುವುದಕ್ಕಷ್ಟೇ ಸ್ಥಳಕ್ಕೆ ಹೋಗುತ್ತಿದ್ದರು. ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲು ಯಾವುದೇ ಪುರಾವೆ ಸಿಗುತ್ತಿರಲಿಲ್ಲ' ಎಂದು ಉತ್ತರ ವಿಭಾಗದ ಡಿಸಿಪಿ ಧರ್ಮೇಂದ್ರ ಕುಮಾರ್ ಮೀನಾ ಹೇಳಿದರು.

'ಜಿಪಿಎಸ್ ಟ್ರ್ಯಾಕಿಂಗ್ ಹಾಗೂ ಕೃತಕ ಬುದ್ಧಿಮತ್ತೆ (ಎಐ) ಒಳಗೊಂಡ 'ಇ-ಬೀಟ್' ವ್ಯವಸ್ಥೆ ಜಾರಿಗೆ ತರಲಾಗಿದೆ. ಇದು, ಪ್ರತಿಯೊಬ್ಬ ಸಿಬ್ಬಂದಿಯ ಗಸ್ತಿನ ಬಗ್ಗೆ ಖಚಿತ ಮಾಹಿತಿ ನೀಡಲಿದೆ. ಯಾರಾದರೂ ಸುಳ್ಳು ಹೇಳಿದರೆ, ಅಂಥ ಸಿಬ್ಬಂದಿ ವಿರುದ್ಧ ಕ್ರಮ ಜರುಗಿಸಲು ಪುರಾವೆ ಒದಗಿಸಲಿದೆ. ನಮ್ಮ ವಿಭಾಗದಲ್ಲಿ 2,000 ಗಸ್ತು ಸ್ಥಳಗಳನ್ನು ಗುರುತಿಸಲಾಗಿದೆ. ಠಾಣೆವಾರು ಗಸ್ತು ತಿರುಗಿದ ಸಿಬ್ಬಂದಿಗಳ ಮಾಹಿತಿ ಕ್ಷಣ ಮಾತ್ರದಲ್ಲಿ ನನಗೆ ಬರುತ್ತದೆ' ಎಂದೂ ತಿಳಿಸಿದರು.

ಕಾನೂನು ಸುವ್ಯವಸ್ಥೆ ಕಾಪಾಡಿ ಅಪರಾಧಗಳನ್ನು ನಿಯಂತ್ರಿಸಲು 'ಇ-ಬೀಟ್' ಸಹಕಾರಿ. ನಗರದ ಎಲ್ಲ ಠಾಣೆ ವ್ಯಾಪ್ತಿಯಲ್ಲಿ ಈ ವ್ಯವಸ್ಥೆ ವಿಸ್ತರಿಸಲು ಚಿಂತನೆ ನಡೆದಿದೆ

ಕಮಲ್ ಪಂತ್, ಬೆಂಗಳೂರು ಪೊಲೀಸ್ ಕಮಿಷನರ್

'ಗಸ್ತು ತಿರುಗದೇ ಸಿಕ್ಕಿಬೀಳುವ ಸಿಬ್ಬಂದಿಗೆ ಕಾರಣ ಕೇಳಿ ನೋಟಿಸ್ ನೀಡಲಾಗುವುದು. ಅವರ ಉತ್ತರ ಸಮರ್ಪಕವಾಗಿರದಿದ್ದರೆ, ಶಿಸ್ತು ಕ್ರಮ ಕೈಗೊಳ್ಳಲಾಗುವುದು' ಎಂದೂ ಹೇಳಿದರು.

'ಕ್ಯೂ ಆರ್' ಕೋಡ್‌ನಿಂದ ಆರಂಭ: ಗಸ್ತು ಸ್ಥಳದಲ್ಲಿರುವ ಪುಸ್ತಕದಲ್ಲಿ ಸಹಿ ಮಾಡಿ ಬರುವ ಹಳೇ ವ್ಯವಸ್ಥೆಯನ್ನು ಬದಲಾಯಿಸಲು ಪೊಲೀಸ್ ಇಲಾಖೆಯಲ್ಲಿ ಚಿಂತನೆ ಆರಂಭವಾಗಿತ್ತು. ಇದರ ಫಲವಾಗಿ 'ಸುಬಾಹು ಇ-ಬೀಟ್' ಹುಟ್ಟಿಕೊಂಡಿತು.

'ಸುಬಾಹು ಇ-ಬೀಟ್' ಆ್ಯಪ್ ಸಿದ್ಧಪಡಿಸಿ, ಕೆಲ ಠಾಣೆ ವ್ಯಾಪ್ತಿಯ ಸಿಬ್ಬಂದಿ ಮೊಬೈಲ್‌ನಲ್ಲಿ ಇನ್‌ಸ್ಟಾಲ್ ಮಾಡಿಸಲಾಗಿತ್ತು. ಗಸ್ತು ಸ್ಥಳಕ್ಕೆ ಹೋಗುತ್ತಿದ್ದ ಸಿಬ್ಬಂದಿ, ಅಲ್ಲಿರುತ್ತಿದ್ದ 'ಕ್ಯೂಆರ್' ಕೋಡ್ ಅನ್ನು ಆ್ಯಪ್‌ನಲ್ಲಿ ಸ್ಕ್ಯಾನ್ ಮಾಡುತ್ತಿದ್ದರು. ಸ್ಥಳಕ್ಕೆ ಹೋದ ಮಾಹಿತಿ, ಠಾಣಾಧಿಕಾರಿ ಮೊಬೈಲ್‌ಗೆ ಬರುತ್ತಿತ್ತು. ಇದರಲ್ಲೂ ಕೆಲ ನ್ಯೂನ್ಯತೆಗಳು ಕಂಡುಬಂದವು. ಹೀಗಾಗಿ, ಕೆಲ ಸುಧಾರಣೆ ಮಾಡಿ ಜಿಪಿಎಸ್ ಟ್ರ್ಯಾಕಿಂಗ್ ಹಾಗೂ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ 'ಇ-ಬೀಟ್' ವ್ಯವಸ್ಥೆ ರೂಪಿಸಲಾಗಿದೆ. ಇದು, ಗಸ್ತಿನ ಮೇಲ್ವಿಚಾರಣೆಯ ಶೇ 100ರಷ್ಟು ಫಲಿತಾಂಶ ನೀಡುತ್ತಿದೆ'.

'ಬೆಂಗಳೂರಿನ ವಿಜಯನಗರ ಠಾಣೆಯಲ್ಲಿ ಮೊದಲ ಬಾರಿಗೆ 'ಸುಬಾಹು ಇ-ಬೀಟ್' ಪರಿಚಯಿಸಲಾಗಿತ್ತು. ಅದಾದ ನಂತರ, ನಗರದ ಪ್ರತಿ ವಿಭಾಗದ ಒಂದೊಂದು ಠಾಣೆಯಲ್ಲಿ 'ಇ-ಬೀಟ್' ಶುರುವಾಯಿತು. ಚಾಮರಾಜನಗರ, ತುಮಕೂರು, ದಾವಣಗೆರೆ, ಕೊಡಗು ಜಿಲ್ಲೆಯಲ್ಲೂ ಪ್ರಾಯೋಗಿಕ ವ್ಯವಸ್ಥೆ ಜಾರಿಯಾಯಿತು. ಅಲ್ಲಿಯೂ ಉತ್ತಮ ಸ್ಪಂದನೆ ಸಿಕ್ಕಿತು' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ವಿವರಿಸಿದರು.

'ನಮ್ಮ ಸಿಬ್ಬಂದಿ ಕೆಲಸದ ಮೇಲೆ ಕಣ್ಣಿಡಲು ಹಾಗೂ ಗಸ್ತಿನಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು 'ಇ-ಬೀಟ್' ಸಹಕಾರಿ. ಪ್ರತಿಯೊಬ್ಬ ಸಿಬ್ಬಂದಿಗೂ ಇಂತಿಷ್ಟು ಗಸ್ತು ಸ್ಥಳಗಳನ್ನು ನಿಗದಿಪಡಿಸಲಾಗುವುದು. ಅವರು ಸ್ಥಳಕ್ಕೆ ಹೋಗಿ ಬಂದ ಮಾಹಿತಿ ದಾಖಲಾಗುತ್ತದೆ. ಫೋಟೊ ಅಪ್‌ಲೋಡ್ ಮಾಡಲು ಸಹ ಅವಕಾಶವಿದೆ' ಎಂದು ತಿಳಿಸಿದರು.

ಅಪರಾಧ ತಡೆಗೆ ಅಸ್ತ್ರ: 'ನಿತ್ಯವೂ ಪೊಲೀಸರು ಗಸ್ತು ತಿರುಗಿದರೆ, ಅಪರಾಧ ಕೃತ್ಯ ಎಸಗುವವರಿಗೆ ಎಚ್ಚರಿಕೆ ಸಂದೇಶ ರವಾನಿಸಿದಂತಾಗುತ್ತದೆ. ಪೊಲೀಸರು ಬಂದು ಹೋಗುತ್ತಾರೆಂಬುದು ತಿಳಿದರೆ, ಬಹುತೇಕರು ಕೃತ್ಯ ಎಸಗುವುದರಿಂದ ಹಿಂದೆ ಸರಿಯುತ್ತಾರೆ' ಎಂದೂ ಅಧಿಕಾರಿ ಹೇಳಿದರು.

'ಇ–ಬೀಟ್' ವ್ಯವಸ್ಥೆಯಲ್ಲಿ ದಾಖಲಾದ ಗಸ್ತಿನ ವಿವರ

'10 ನಿಮಿಷ ಮಾತುಕತೆ ಕಡ್ಡಾಯ'

'ವೃದ್ಧರು, ಒಂಟಿ ಮಹಿಳೆಯರು ಹಾಗೂ ಅಸುರಕ್ಷತೆ ಭಾವ ಕಾಡುವ ವ್ಯಕ್ತಿಗಳ ಬಗ್ಗೆ ಠಾಣೆವಾರು ನೋಂದಣಿ ಆರಂಭಿಸಲಾಗಿದೆ. ಅಂಥವರ ಮನೆಗಳ ಜಿಪಿಎಸ್ ಟ್ರ್ಯಾಕಿಂಗ್ ಅನ್ನು 'ಇ-ಬೀಟ್' ವ್ಯವಸ್ಥೆಗೆ ಅಳವಡಿಸಲಾಗುವುದು' ಎಂದು ಬೆಂಗಳೂರು ಪೊಲೀಸ್ ಕಮಾಂಡೊ ಕೇಂದ್ರದ ಡಿಸಿಪಿ ಇಶಾ ಪಂತ್ ಹೇಳಿದರು. 'ಪ್ರತಿಯೊಂದು ಜಿಪಿಎಸ್ ಸ್ಥಳಗಳಿಗೆ ಸಿಬ್ಬಂದಿ ಹೋಗಿ ಬರಬೇಕು. ಸ್ಥಳದಲ್ಲಿದ್ದವರ ಜೊತೆ 10 ನಿಮಿಷ ಕಡ್ಡಾಯವಾಗಿ ಮಾತನಾಡಿ ಸಮಸ್ಯೆ ಆಲಿಸಬೇಕು. ಆ ರೀತಿ ಮಾಡಿದರೆ ಮಾತ್ರ ಗಸ್ತು ಹೋಗಿದ್ದು ಖಚಿತವಾಗುತ್ತದೆ. ಇಲ್ಲದಿದ್ದರೆ, ಗಸ್ತು ಹೋಗಿಲ್ಲವೆಂದು ನಮೂದಾಗುತ್ತದೆ' ಎಂದೂ ತಿಳಿಸಿದರು.

ನಗರದ ಠಾಣೆಗಳ ವಿವರ

166	ನಗರದಲ್ಲಿರುವ ಒಟ್ಟು ಠಾಣೆಗಳು
7	ಒಟ್ಟು ವಿಭಾಗಗಳು
111	ಕಾನೂನು ಮತ್ತು ಸುವ್ಯವಸ್ಥೆ ಠಾಣೆಗಳು
44	ಸಂಚಾರ ಠಾಣೆಗಳು
8	ಸೆನ್ ಠಾಣೆಗಳು
1	ಸೈಬರ್ ಮುಖ್ಯ ಠಾಣೆ
2	ಮಹಿಳಾ ಠಾಣೆಗಳು

'ನಿತ್ಯವೂ ಪೊಲೀಸರನ್ನು ನೋಡುತ್ತಿದ್ದೇವೆ'

'ಮನೆ ಬಳಿ ಗಸ್ತು ಸ್ಥಳವಿದ್ದರೂ ಪೊಲೀಸರು ಬರುತ್ತಿರಲಿಲ್ಲ. 'ಇ-ಬೀಟ್' ಬಂದಾಗಿನಿಂದ ಪೊಲೀಸರು ತಪ್ಪದೇ ಬಂದು ಹೋಗುತ್ತಿದ್ದಾರೆ. ಅವರನ್ನು ನಿತ್ಯವೂ ನೋಡುತ್ತಿದ್ದು, ಏನಾದರೂ ಸಮಸ್ಯೆ ಇದ್ದರೆ ದಾಖಲಿಸಿಕೊಂಡು ಹೋಗುತ್ತಿದ್ದಾರೆ' ಎಂದು ಮಲ್ಲೇಶ್ವರದ ನಿವಾಸಿ ರಾಮಚಂದ್ರ ಹೇಳಿದರು.

ಜಾಲಹಳ್ಳಿ ನಿವಾಸಿ ಎಸ್. ವೀರೇಶ್, 'ನಮ್ಮದು ಆಭರಣ ಮಳಿಗೆ ಇದ್ದು, ಸಮೀಪದಲ್ಲೇ ಗಸ್ತು ಸ್ಥಳ ನಿಗದಿಪಡಿಸಲಾಗಿದೆ. ಈ ಹಿಂದೆ 15 ದಿನಕ್ಕೊಮ್ಮೆ ಸಿಬ್ಬಂದಿ ಸ್ಥಳಕ್ಕೆ ಬಂದು ಹೋಗುತ್ತಿದ್ದರು. ಇದನ್ನು ಪ್ರಶ್ನಿಸಿದರೆ, ನಿತ್ಯವೂ ಬಂದು ಹೋಗುತ್ತಿರುವುದಾಗಿ ಸುಳ್ಳು ಹೇಳುತ್ತಿದ್ದರು. ಇದೀಗ 'ಇ-ಬೀಟ್' ಬಂದಿದೆ. ಹಿರಿಯ ಅಧಿಕಾರಿಗಳಿಗೆ ದೂರು ನೀಡುತ್ತಿದ್ದಂತೆ, ಪುರಾವೆ ಸಮೇತ ಸಿಬ್ಬಂದಿ ಸಿಕ್ಕಿಬೀಳುತ್ತಿದ್ದಾರೆ' ಎಂದರು.

'ಕಳ್ಳತನ ತಡೆಗೂ ಆ್ಯಪ್ ಬಳಕೆ'

'ನಗರದ ಮನೆಗಳಲ್ಲಿ ನಡೆಯುವ ಕಳ್ಳತನ ತಡೆಗೂ 'ಸುಬಾಹು ಸಿಟಿಜನ್' ಆ್ಯಪ್ ಬಳಸಿಕೊಳ್ಳಲು ಚಿಂತನೆ ನಡೆದಿದೆ' ಎಂದು ಹಿರಿಯ ಅಧಿಕಾರಿ ಹೇಳಿದರು.

'ಸದ್ಯ ಪೊಲೀಸರಷ್ಟೇ ಆ್ಯಪ್ ಬಳಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಸಾರ್ವಜನಿಕರ ಅನುಕೂಲಕ್ಕೆ 'ಸುಬಾಹು ಸಿಟಿಜನ್' ಆ್ಯಪ್ ಬಳಸಲಾಗುವುದು. ಸಾರ್ವಜನಿಕರು, ಯಾವುದಾದರೂ ಕೆಲಸಕ್ಕಾಗಿ ಮನೆ ಬಿಟ್ಟು ಹೋಗುವಾಗ ಆ್ಯಪ್‌ನಲ್ಲಿ ಮಾಹಿತಿ ದಾಖಲಿಸಬಹುದು. ಅಂಥ ಮನೆಗಳ ಬಳಿ ಹೋಗಿ ಪೊಲೀಸರು ಗಸ್ತು ತಿರುಗಲಿದ್ದಾರೆ. ಇದರಿಂದ ಕಳ್ಳತನ ತಡೆಯಬಹುದು' ಎಂದೂ ತಿಳಿಸಿದರು.

'ಪೊಲೀಸರ ಗಸ್ತಿನ ಮೇಲೆ ಮಾತ್ರ ಕಣ್ಣಿಡಲಾಗಿದೆ. ಮುಂದಿನ ದಿನಗಳಲ್ಲಿ ವ್ಯವಸ್ಥೆಯನ್ನು ವಿಸ್ತರಿಸಿ, ಮತ್ತಷ್ಟು ಆಯ್ಕೆಗಳನ್ನು ಸೇರಿಸಲಾಗುವುದು. ಇದಕ್ಕೆ ಬೇಕಾದ ಸಿದ್ಧತೆ ನಡೆದಿದೆ' ಎಂದು ಅಧಿಕಾರಿ ವಿವರಿಸಿದರು.

ಬಿಡಿಎಗೆ ಭೂಮಿ ಹಸ್ತಾಂತರಿಸುವಂತೆ ಕಂದಾಯ ಇಲಾಖೆಗೆ 'ಸುಪ್ರೀಂ' ಸೂಚನೆ

ಶಿವರಾಮ ಕಾರಂತ ಬಡಾವಣೆಗೆ 416 ಎಕರೆ ಜಮೀನು ನೀಡಲು ನಿರ್ದೇಶನ

ನವದೆಹಲಿ: ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕೆ ಅಧಿಸೂಚನೆಯಾಗಿರುವ 416 ಎಕರೆ 13 ಗುಂಟೆ ಜಮೀನನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸುವಂತೆ ಕಂದಾಯ ಇಲಾಖೆಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಎಸ್. ಅಬ್ದುಲ್ ನಜೀರ್ ಮತ್ತು ಸಂಜೀವ್ ಖನ್ನಾ ಅವರನ್ನೊಳಗೊಂಡ ಪೀಠವು ಈ ನಿರ್ದೇಶನ ನೀಡಿದೆ.

ಜಮೀನನ್ನು ತನ್ನ ಸುಪರ್ದಿಗೆ ಪಡೆದ ಬಳಿಕ, ಭೂಮಾಲೀಕರಿಗೆ ಅಭಿವೃದ್ಧಿಪಡಿಸಿದ ಜಮೀನಿನಲ್ಲಿ ಹಂಚಿಕೆಯಾಗುವ ನಿವೇಶನದ ಹಕ್ಕಿನ ಬಗ್ಗೆ ಪ್ರಮಾಣಪತ್ರ ನೀಡಬೇಕು. 40:60 ಯೋಜನೆ ಅಥವಾ ಸ್ವಯಂ ಪ್ರೇರಿತ ಜಮೀನು ಒಪ್ಪಿಸುವ ಯೋಜನೆ ಅಡಿಯಲ್ಲಿ ಈ ಕ್ರಮ ಕೈಗೊಳ್ಳಬೇಕು ಎಂದು ನ್ಯಾಯಾಲಯ ಬಿಡಿಎಗೆ ಸೂಚಿಸಿದೆ.

ಇದುವರೆಗೆ ಈ ರೀತಿಯ ಪ್ರಮಾಣ ಪತ್ರಗಳನ್ನು ವಿವಿಧ ಕಾರಣಗಳಿಗಾಗಿ ನೀಡದೆ ಇದ್ದರೆ, ನಾಲ್ಕು ವಾರಗಳಲ್ಲಿ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು ಎಂದು ಸೂಚಿಸಿದೆ.

ಬಡಾವಣೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಬಿಡಿಎ ಆಯುಕ್ತರು ಸಲ್ಲಿಸಿದ್ದ ವರದಿಯನ್ನು ಪರಿಶೀಲಿಸಿದ ಪೀಠವು, ಕಂದಾಯ ನಿವೇಶನ ಹೊಂದಿದವರಿಂದ 2021ರ ಅಕ್ಟೋಬರ್ 31 ರವರೆಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಿತು. ಅವಧಿ ವಿಸ್ತರಿಸಿರುವ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡುವಂತೆಯೂ ಸೂಚಿಸಿದೆ.

ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಸಮಿತಿ ಜತೆ ಸಮಾಲೋಚನೆ ನಡೆಸಿ ಮುಂದಿನ 15 ದಿನಗಳ ಒಳಗೆ ಬಡಾವಣೆಗೆ ಸಂಬಂಧಿಸಿದ ವರದಿ ಸಲ್ಲಿಸಬೇಕು ಎಂದು ತಿಳಿಸಿದೆ.

ವರ್ಗಾವಣೆಗೆ ಆಕ್ಷೇಪ: ಬಿಡಿಎ ಎಂಜಿನಿಯರಿಂಗ್ ಸದಸ್ಯ ಎಚ್.ಆರ್. ಶಾಂತಾರಾಜಣ್ಣ ಅವರ ವರ್ಗಾವಣೆ ಮಾಡಿರುವುದಕ್ಕೆ ರಾಜ್ಯ ಸರ್ಕಾರದ ವಿರುದ್ಧ ನ್ಯಾಯಾಲಯ ಅಸಮಾಧಾನ ವ್ಯಕ್ತಪಡಿಸಿದೆ.

'2021ರ ಆಗಸ್ಟ್ 19ರಂದು ಆದೇಶ ನೀಡಿದ್ದರೂ ಶಾಂತಾರಾಜಣ್ಣ ಅವರನ್ನು ಇನ್ನೊಂದು ಇಲಾಖೆಗೆ ರಾಜ್ಯ ಸರ್ಕಾರ ವರ್ಗಾವಣೆ ಮಾಡಿದೆ. ರಾಜ್ಯ ಸರ್ಕಾರ ಮತ್ತೆ ಅವರನ್ನು ಅದೇ ಸ್ಥಳಕ್ಕೆ ಮರು ವರ್ಗಾವಣೆ ಮಾಡಬೇಕು' ಎಂದು ನಿರ್ದೇಶನ ನೀಡಿದೆ.

ಬಿಡಿಎನಲ್ಲಿನ ಇತರ ಜವಾಬ್ದಾರಿಗಳ ಜತೆಗೆ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾಗಿದ್ದ ಶಾಂತಾರಾಜಣ್ಣ ಅವರು, ಡಾ. ಶಿವರಾಮ ಕಾರಂತ ಬಡಾವಣೆಯ ಉಸ್ತುವಾರಿ ವಹಿಸಿಕೊಂಡಿದನ್ನು ನ್ಯಾಯಾಲಯ ಪರಿಗಣಿಸಿ ಈ ನಿರ್ದೇಶನ ನೀಡಿದೆ.

ಇಂದು ಬಿಜೆಪಿ ಶಾಸಕರು, ಸಂಸದರ ಸಭೆ

ಬೆಂಗಳೂರು: ವಿಧಾನಮಂಡಲ ಅಧಿವೇಶನದಲ್ಲಿ ಪ್ರತಿಪಕ್ಷಗಳನ್ನು ಎದುರಿಸುವ ಕಾರ್ಯತಂತ್ರವೂ ಸೇರಿದಂತೆ ವಿವಿಧ ವಿಷಯಗಳ ಕುರಿತು ಚರ್ಚಿಸಲು ಬಿಜೆಪಿ ಶಾಸಕರು ಮತ್ತು ಸಂಸದರ ಸಭೆ ಸೋಮವಾರ ಸಂಜೆ ನಡೆಯಲಿದೆ.

ಕ್ಯಾಪಿಟಲ್ ಹೋಟೆಲ್‌ನಲ್ಲಿ ನಡೆಯುವ ಸಭೆಯ ಅಧ್ಯಕ್ಷತೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಹಿಸಲಿದ್ದಾರೆ. ವಿಧಾನಸಭೆ, ವಿಧಾನ ಪರಿಷತ್ ಸದಸ್ಯರು, ಲೋಕಸಭೆ ಹಾಗೂ ರಾಜ್ಯಸಭೆಯ ಸದಸ್ಯರೂ ಸಭೆಯಲ್ಲಿ ಭಾಗವಹಿಸುವರು. 'ಪ್ರತಿಪಕ್ಷಗಳು ವಾಗ್ದಾಳಿ ನಡೆಸಿದಾಗ ಎದುರಿಸುವ ಕುರಿತು ಮುಖ್ಯಮಂತ್ರಿಯವರೇ ಪಕ್ಷದ ಶಾಸಕರಿಗೆ ಕೆಲವು ಸಲಹೆಗಳನ್ನು ನೀಡಲು ಸಿದ್ಧತೆ ಮಾಡಿಕೊಂಡಿದ್ದಾರೆ' ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ವಿವಿಧ ಪ್ರಶಸ್ತಿ ಪುರಸ್ಕೃತರೊಂದಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಜೆ. ರವಿಶಂಕರ್, ಅಕಾಡೆಮಿ ಅಧ್ಯಕ್ಷ ಬಿ.ವಿ. ವಸಂತಕುಮಾರ್, ಸಾಹಿತಿ ಚಂದ್ರಶೇಖರ ಕಂಬಾರ, ಸಚಿವ ವಿ.ಸುನಿಲ್ ಕುಮಾರ್ ಮತ್ತು ಸಂಸದ ತೇಜಸ್ವಿ ಸೂರ್ಯ ಇದ್ದಾರೆ –ಪ್ರಜಾವಾಣಿ ಚಿತ್ರ

ಕರ್ನಾಟಕ ಸಾಹಿತ್ಯ ಅಕಾಡೆಮಿಯ ವಿವಿಧ ಪ್ರಶಸ್ತಿಗಳ ಪ್ರದಾನ

ಭಾರತವನ್ನು ಕಟ್ಟಿದ್ದು ಸಾಹಿತಿಗಳು, ಸಾಂಸ್ಕೃತಿಕ ವ್ಯಕ್ತಿಗಳು: ಪ್ರೇಮಶೇಖರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಾಚೀನ ಕಾಲದಲ್ಲಿ ಯುರೋಪ್‌ಗಿಂತ ಗರಿಷ್ಠ ಸಂಖ್ಯೆಯ ಕಾಳಗಗಳನ್ನು ಕಂಡಿದ್ದು ಭಾರತದ ಉಪಖಂಡ. ಸಾಮ್ರಾಟರು ತಮ್ಮ-ತಮ್ಮಲ್ಲೇ ಹೊಡೆದಾಡಿಕೊಳ್ಳುತ್ತಿದ್ದಾಗ, ನಾವೆಲ್ಲರೂ ಒಂದು ಎಂದು ಸಾರಿದವರು ಸಾಹಿತಿಗಳು. ನಿಜವಾಗಿ ದೇಶವನ್ನು ಕಟ್ಟಿದವರು ಅವರೇ' ಎಂದು ಸಾಹಿತಿ ಪ್ರೇಮಶೇಖರ ಹೇಳಿದರು.

ನಗರದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ 2020ನೇ ಸಾಲಿನ ಸಾಹಿತ್ಯಶ್ರೀ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು. ವಿವಿಧ ಮಹನೀಯರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ 2020ನೇ ಸಾಲಿನ ಗೌರವ ಪ್ರಶಸ್ತಿ, 2019 ಮತ್ತು 2020ರ ಸಾಹಿತ್ಯ ಶ್ರೀ ಪ್ರಶಸ್ತಿ ಹಾಗೂ 2018 ಮತ್ತು 2019ನೇ ಸಾಲಿನ ಪುಸ್ತಕ ಬಹುಮಾನ ನೀಡಲಾಯಿತು.

'ಸಾಹಿತಿಗಳು ಅವರವರ ರಾಜರು–ಸಾಮ್ರಾಟರ ಪರವಾಗಿ ಮಾತ್ರ ನಿಂತಿದ್ದರೆ, ಇಡೀ ದೇಶ ಒಂದು ಎಂಬ ಭಾವನೆ ಜನರಲ್ಲಿ ಮೂಡುವುದು ಕಷ್ಟವಿತ್ತು. ಸಾಹಿತಿಗಳು ಮತ್ತು ಸಾಂಸ್ಕೃತಿಕ ವ್ಯಕ್ತಿಗಳ ಇಂತಹ ಗುಣಗಳ ಕಾರಣಗಳಿಂದಲೇ ಸಾಮ್ರಾಟರು ಸಾಹಿತಿಗಳನ್ನು ಗೌರವಿಸುತ್ತಿದ್ದ ಉದಾಹರಣೆಗಳು ಸಾಕಷ್ಟಿವೆ. ಪ್ರಜಾಪ್ರಭುತ್ವದ ಕಾಲದಲ್ಲಿಯೂ ಸಾಹಿತಿಗಳನ್ನು ಗೌರವಿಸುವ ಕಾರ್ಯ ಮುಂದುವರಿದಿರುವುದು ಸಂತಸದ ವಿಷಯ' ಎಂದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ, 'ಪ್ರಪಂಚದ ಬೇರೆ ಯಾವುದೇ ಭಾಷೆಯಲ್ಲಿ ಇಲ್ಲದಷ್ಟು ಸಾಹಿತ್ಯ ಸಿರಿವಂತಿಕೆ ಕನ್ನಡದಲ್ಲಿದೆ. ವಚನಗಳು, ದಾಸರ ಪದಗಳು ಶ್ರೇಷ್ಠ ರಚನೆಯಾಗಿವೆ. ಇವುಗಳನ್ನು ವಿಶ್ವಕ್ಕೆ ಪರಿಚಯಿಸುವ ಕೆಲಸವೂ ಆಗಬೇಕು' ಎಂದು ಸಲಹೆ ನೀಡಿದರು.

'ಒಂದು ಭಾಷೆಯನ್ನು ಎಷ್ಟು ವ್ಯಾಪಕವಾಗಿ ಉಪಯೋಗಿಸಲಾಗುತ್ತದೆಯೋ ಆಗ ಆ ಭಾಷೆ ಉಳಿಯುತ್ತದೆ. ಸದ್ಯ, ಬೇರೆ ಭಾಷೆಗಳಂತೆ ಕನ್ನಡವೂ ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಪ್ರಪಂಚದಲ್ಲಿನ ಯಾವುದೇ ಭಾಷೆಯ ಮಾಹಿತಿಯು ಕನ್ನಡದಲ್ಲಿಯೂ ದೊರೆಯುವಂತಾಗಬೇಕು. ರಾಜ್ಯ ಸರ್ಕಾರದ ನೆರವಿನೊಂದಿಗೆ ಅಕಾಡೆಮಿಯು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಬೇಕು' ಎಂದರು.

ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್‌ಕುಮಾರ್, 'ಈ ಬಾರಿ ಕರ್ನಾಟಕ ರಾಜ್ಯೋತ್ಸವವನ್ನು ಅತ್ಯಂತ ವಿಶಿಷ್ಟ ಮತ್ತು ವಿಜೃಂಭಣೆಯಿಂದ ಆಚರಿಸಲು ನಿರ್ಧರಿಸಲಾಗಿದೆ. ಅಧಿವೇಶನ ಮುಗಿದ ನಂತರ ಈ ಕುರಿತು ಎಲ್ಲರೊಂದಿಗೆ ಚರ್ಚೆ ನಡೆಸಿ ತೀರ್ಮಾನ ಕೈಗೊಳ್ಳಲಾಗುವುದು' ಎಂದರು.

'ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸುತ್ತಲೇ ವಿಜೃಂಭಣೆಯಿಂದ ರಾಜ್ಯೋತ್ಸವ ಆಚರಿಸಲಾಗುವುದು. ಕನ್ನಡವನ್ನು ಮತ್ತಷ್ಟು ಶ್ರೀಮಂತಗೊಳಿಸುವ ಕಾರ್ಯವನ್ನು ಮಾಡಲಾಗುವುದು. ರಾಜ್ಯದಲ್ಲಿ ಕನ್ನಡಕ್ಕೆ ವಿಶೇಷ ಆದ್ಯತೆ ನೀಡಲಾಗುವುದು' ಎಂದೂ ಅವರು ಹೇಳಿದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	22.53 ಕೋಟಿ ▲	3.32 ಕೋಟಿ
ಸಕ್ರಿಯ ಪ್ರಕರಣ	1.87 ಕೋಟಿ	3.71 ಲಕ್ಷ ▼
ಗುಣಮುಖ	20.19 ಕೋಟಿ ▲	3.24 ಕೋಟಿ ▲
ಸಾವು	46.42 ಲಕ್ಷ ▲	4.42 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.56 ಲಕ್ಷ ▼	31,309 ▼
ಗುಣಮುಖ	5.50 ಲಕ್ಷ	40,288 ▲
ಸಾವು	7,756 ▼	210 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಬ್ರಿಟನ್	ಟರ್ಕಿ
72,203 ▲	29,360 ▼	22,923 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರಿಟನ್	ಇರಾನ್
92.81 ▲	12.95 ▲	6.23 ▲

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.38 ಲಕ್ಷ ▲
ತಮಿಳುನಾಡು	35,168 ▲
ದೆಹಲಿ	25,083

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	64.97 ▲
ಕೇರಳ	43.75 ▲
ತಮಿಳುನಾಡು	26.33

ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಡೆಲ್ಟಾ ರೂಪಾಂತರದ 16 ಉಪ ತಳಿಗಳು ರಾಜ್ಯದಲ್ಲಿ ಪತ್ತೆ

ಬೆಂಗಳೂರು: ಕೋವಿಡ್–19 ಡೆಲ್ಟಾ ರೂಪಾಂತರವು ಜಗತ್ತಿನಾದ್ಯಂತ 32 ಉಪ ರೂಪಾಂತರಗಳನ್ನು ಹೊಂದಿದ್ದು, ಈ ಪೈಕಿ 16 ಉಪ ತಳಿಗಳು ರಾಜ್ಯದಲ್ಲಿ ಕಾಣಿಸಿಕೊಂಡಿವೆ.

'ರಾಜ್ಯದಲ್ಲಿ ಈಗಾಗಲೇ ಕಾಣಿಸಿಕೊಂಡಿರುವ ಎವೈ.4 ಮತ್ತು ಎವೈ.12ನ ರೂಪಾಂತರವು ನಿಧಾನವಾಗಿ ಕಡಿಮೆಯಾಗುತ್ತಿರುವುದು ಅಧ್ಯಯನದಿಂದ ತಿಳಿದುಬಂದಿದೆ.

ಈ ವೈರಾಣು ತನ್ನ ಸ್ಪೈಕ್ ಪ್ರೋಟಿನ್‌ನ ನೆರವಿನಿಂದ ಮನುಷ್ಯನ ಕೋಶಗಳಿಗೆ ಹಾನಿ ಮಾಡುವ ಸಾಧ್ಯತೆಯೂ ಇದೆ. ಹೀಗಾಗಿ ಇವುಗಳ ವರ್ತನೆ ಮೇಲೆ ನಿಗಾ ಇಡುವುದು ತುಂಬಾ ಅವಶ್ಯ' ಎಂದು ರಾಜ್ಯ ಕೋವಿಡ್–19 ಜಿನೋ ಮಿಕ್ ಸರ್ವೇಲೆನ್ಸ್ ಸಮಿತಿಯ ಸದಸ್ಯರೂ ಆಗಿರುವ ಎಚ್‌ಸಿಜಿ ಆಸ್ಪತ್ರೆಯ ಡೀನ್ ಡಾ.ವಿಶಾಲ್ ರಾವ್ ತಿಳಿಸಿದ್ದಾರೆ.

ಎವೈ.4 ಎಂದು ಕರೆಯಲ್ಪಡುವ ಡೆಲ್ಟಾ ರೂಪಾಂತರದ ಉಪ ರೂಪಾಂತರದಲ್ಲಿ ಸ್ಪೈಕ್ ಪ್ರೋಟಿನ್ ಮ್ಯುಟೇಷನ್ (ಜಿ142ಡಿ) ಕರ್ನಾಟಕದ ಮಟ್ಟಿಗೆ ಶೇ 26ರಷ್ಟು ಕಂಡುಬಂದಿದೆ. ಎವೈ.12 ರೂಪಾಂತರದಲ್ಲಿ ಇದು ಕೇವಲ ಶೇ 1.3ರಷ್ಟು ಕಂಡುಬಂದಿದೆ ಎಂಬುದು ಸಂಶೋಧನೆಯಿಂದ ದೃಢಪಟ್ಟಿದೆ.

'ರೂಪಾಂತರಗಳು ಕಡಿಮೆಯಾಗುತ್ತಿರುವುದರಿಂದ ಡೆಲ್ಟಾ ರೂಪಾಂತರವು ನಿಧಾನವಾಗಿ ಕ್ಷೀಣಿಸುತ್ತಿದೆ. ಹಾಗೆಂದು ಇದನ್ನು ಅಲಕ್ಷಿಸುವಂತಿಲ್ಲ' ಎಂದೂ ಅವರು ಹೇಳಿದ್ದಾರೆ.

ಕೋವಿಡ್: ಮತ್ತೆ ಏರಿದ ಮೃತರ ಸಂಖ್ಯೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ ಮತ್ತೆ ಏರಿದೆ. ಭಾನುವಾರ 17 ಜನ ಸಾವಿಗೀಡಾಗಿದ್ದು, ಮರಣ ಪ್ರಮಾಣ ದರವು ಶೇ 2.11ಕ್ಕೆ ಹೆಚ್ಚಿದೆ. ಈವರೆಗೆ ಅಸುನೀಗಿದವರ ಸಂಖ್ಯೆ 37,504ಕ್ಕೆ ಏರಿಕೆ ಕಂಡಿದೆ.

ಒಂದು ದಿನದಲ್ಲಿ 803 ಜನರಿಗೆ ಸೋಂಕು ತಗುಲಿದೆ. ಹೀಗಾಗಿ ಸೋಂಕಿಗೊಳಪಟ್ಟವರ ಒಟ್ಟು ಸಂಖ್ಯೆ 29.61 ಲಕ್ಷಕ್ಕೆ ಏರಿದೆ. ಹಿಂದಿನ 24 ಗಂಟೆಗಳಲ್ಲಿ 802 ಜನರಿಗೆ ಕಾಯಿಲೆ ವಾಸಿಯಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 16,656ಕ್ಕೆ ತಗ್ಗಿದೆ. ಈವರೆಗೆ ಚೇತರಿಸಿಕೊಂಡವರ ಸಂಖ್ಯೆಯು 29.07 ಲಕ್ಷಕ್ಕೆ ತಲುಪಿದೆ. ಕೋವಿಡ್ ದೃಢ ಪ್ರಮಾಣವು ಶೇ 0.80ರಷ್ಟಿದೆ. ಕೋವಿಡ್ ಪರೀಕ್ಷೆಗಳ ಸಂಖ್ಯೆ ಮತ್ತಷ್ಟು ಇಳಿಕೆಯಾಗಿದೆ. ಒಂದು ದಿನದಲ್ಲಿ 1 ಲಕ್ಷ ಮಾದರಿಗಳನ್ನಷ್ಟೇ ಪರೀಕ್ಷಿಸಲಾಗಿದೆ.

ಬೆಂಗಳೂರಿನಲ್ಲಿ 255 ಮಂದಿಗೆ ಹೊಸದಾಗಿ ಸೋಂಕು ತಗುಲಿದೆ. ಕೇರಳಕ್ಕೆ ಹೊಂದಿಕೊಂಡಂತಿರುವ ಗಡಿ ಜಿಲ್ಲೆಗಳ ಪೈಕಿ ದಕ್ಷಿಣ ಕನ್ನಡದಲ್ಲಿ (153) ಹೆಚ್ಚು ಪ್ರಕರಣಗಳು ವರದಿಯಾಗಿವೆ.

ಕೊಡಗು ಹಾಗೂ ಮೈಸೂರಿನಲ್ಲಿ ಕ್ರಮವಾಗಿ 63 ಮತ್ತು 36 ಪ್ರಕರಣಗಳು ದಾಖಲಾಗಿವೆ. ಉಡುಪಿಯಲ್ಲೂ (90) ಗರಿಷ್ಠ ಪ್ರಕರಣಗಳು ಪತ್ತೆಯಾಗಿವೆ. ಬೀದರ್, ಗದಗ, ಕೊಪ್ಪಳ, ವಿಜಯಪುರ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 30ಕ್ಕಿಂತ ಕಡಿಮೆ ಇವೆ. ಕೋವಿಡ್ ಪೀಡಿತರ ಪೈಕಿ ಬೆಂಗಳೂರಿನಲ್ಲಿ ಮತ್ತೆ 6 ಮಂದಿ ಸಾವಿಗೀಡಾಗಿದ್ದಾರೆ. ಬೆಳಗಾವಿ, ದಕ್ಷಿಣ ಕನ್ನಡ, ಹಾಸನ ಹಾಗೂ ಮೈಸೂರಿನಲ್ಲಿ ತಲಾ ಇಬ್ಬರು ಅಸುನೀಗಿದ್ದಾರೆ. ಕೊಡಗು, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತರಾಗಿದ್ದಾರೆ.

ನಗರದ ಕೋವಿಡ್ ಅಂಕಿ–ಅಂಶ

12,41,425 ▲	ಒಟ್ಟು ಪ್ರಕರಣಗಳು (12,41,170 ನಿನ್ನೆಯ ವಿವರ)
7,371 ▲	ಸಕ್ರಿಯ ಪ್ರಕರಣಗಳು
12,18,000 ▲	ಗುಣಮುಖರಾದವರು
16,053 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	255 ▲
ಗುಣಮುಖ	107 ▼
ಸಾವು	06 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

'ಒಟ್ಟಾದರೆ ಯಾವುದೂ ಅಸಾಧ್ಯವಲ್ಲ'

ಬೆಂಗಳೂರು: 'ಎಲ್ಲರೂ ಸೇರಿ ಕೆಲಸ ಮಾಡಿದಾಗ ಯಾವುದೂ ಅಸಾಧ್ಯವಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟರು.

ಜಯನಗರದ ಕೆಎಸ್‌ಆರ್‌ಟಿಸಿಯ ನವೀಕೃತ ಕೋವಿಡ್ ಆಸ್ಪತ್ರೆಯನ್ನು ಭಾನುವಾರ ಉದ್ಘಾಟಿಸಿ ಅವರು ಮಾತನಾಡಿದರು.

'ಮಾನವೀಯತೆ ಬಹಳ ಮುಖ್ಯ. ಸರ್ಕಾರ, ಬಿಬಿಎಂಪಿ, ಕಾರ್ಪೊರೇಟ್ ವಲಯ ಸೇರಿ ಈ ಮಕ್ಕಳ ಆಸ್ಪತ್ರೆಯನ್ನು ಪುನರ್ ನಿರ್ಮಿಸಲಾಗಿದೆ' ಎಂದರು.

'ಕೋವಿಡ್ ಮೊದಲ ಮತ್ತು ಎರಡನೇ ಅಲೆಯಿಂದ ಸಾಕಷ್ಟು ಪಾಠ ಕಲಿತಿದ್ದೇವೆ. ಕೋವಿಡ್ ಮೂರನೇ ಅಲೆ ಬರಬಾರದು. ಬಂದರೂ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಈ ಆಸ್ಪತ್ರೆ ಕೂಡಾ ಕೊರತೆಯಾದ ಸಂದರ್ಭದಲ್ಲಿ ಹುಟ್ಟಿಕೊಂಡಿದ್ದು, ಎಲ್ಲರೂ ಈ ಆಸ್ಪತ್ರೆಗೆ ಸಹಾಯ ಮಾಡಿದ್ದಾರೆ. ಇದನ್ನು ಅಚ್ಚುಕಟ್ಟಾಗಿ ನಡೆಸಿಕೊಂಡು ಹೋಗುವ ಜವಾಬ್ದಾರಿ ಇಲ್ಲಿನ ಸಿಬ್ಬಂದಿಯದ್ದು' ಎಂದು ಹೇಳಿದರು.

ಆಮ್ಲಜನಕ ಪೂರೈಕೆಗೆ ಹೈ–ನೇಸಲ್ ಫ್ಲೋ ವ್ಯವಸ್ಥೆ, ಆಮ್ಲಜನಕ ಘಟಕವನ್ನೂ ಈ ಆಸ್ಪತ್ರೆ ಒಳಗೊಂಡಿದೆ.

ಕೋವಿಡ್ ಸೋಂಕಿತರ ಚಿಕಿತ್ಸೆಗೆ ಅಗತ್ಯ ಇರುವ ಎಲ್ಲಾ ರೀತಿಯ ಯಂತ್ರೋಪಕರಣಗಳನ್ನೂ ಅಳವಡಿಸಲಾಗಿದೆ.

ನಿಧನ ವಾರ್ತೆ

ಜಿ.ಕೆ. ಬೋರೇಗೌಡ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರ ಜಿ.ಕೆ. ಬೋರೇಗೌಡ (72) ಅವರು ಭಾನುವಾರ ನಿಧನರಾದರು.

ಅವರಿಗೆ ಪತ್ನಿ ಹಾಗೂ ಇಬ್ಬರು ಮಕ್ಕಳು ಇದ್ದಾರೆ. ಮಂಡ್ಯ ಜಿಲ್ಲೆಯ ಕೆರೆಗೋಡು ಹೋಬಳಿಯ ಕೆ. ಗೌಡಗೆರೆ ಗ್ರಾಮದ ಬೋರೇಗೌಡ, ಸರ್ಕಾರದ ಕಾನೂನು ಇಲಾಖೆಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು.

SHREE HALASIDHANATH SAHAKARI SAKHAR KARKHANA LTD.,
Shankaranandnagar, Nipani-591237 Tal. Chikodi Dist. Belgaum
Phones : (08338) : 220355,9535370190,6362916378 e-mail : hssksales@gmail.com
No: HSSK/SALES/RAWSUG/2021-22/1070 DATE: 12-09-2021
CORRIGENDUM
The quantity of Raw Sugar for Export mentioned in our Tender Notice No: HSSK/SALES/RAWSUG/2021-22/1066 dated: 11-09-2021 published on 12-09-2021 in this newspaper shall be read as **20000 MT to 25000 MT** instead of 2000 MT to 2500 MT. The Exporters/ Brokers are requested to submit their tenders for **20000 MT to 25000 MT** as amended.
Sd/- (Shiv Kulkarni) Managing Director
Sd/- (C.S.Kothiwale) Chairman

ರಸ್ತೆ, ಚರಂಡಿ ಕಾಮಗಾರಿಗೆ ಟೆಂಡರ್ ಆಹ್ವಾನಿಸಿ 21 ತಿಂಗಳು ಪೂರ್ಣ • ಮರುಟೆಂಡರ್ ಕರೆದರೆ ಮತ್ತಷ್ಟು ವಿಳಂಬ

ಕಾರಣವಿಲ್ಲದೆಯೇ ಟೆಂಡರ್ ರದ್ದತಿಗೆ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ವಿ.ರಾಮನ್‌ನಗರ ಕ್ಷೇತ್ರ ವ್ಯಾಪ್ತಿಯಲ್ಲಿ ಮುಖ್ಯಮಂತ್ರಿಯವರ ನವನಗರೋತ್ಥಾನ ಯೋಜನೆಯಡಿ ಕೈಗೊಳ್ಳುವ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಯ ನಾಲ್ಕು ಪ್ಯಾಕೇಜ್‌ಗಳ ಟೆಂಡರ್‌ಗಳನ್ನು ರದ್ದುಪಡಿಸಿ ಅಲ್ಪಾವಧಿ ಮರುಟೆಂಡರ್ ಕರೆಯುವ ಕುರಿತು ಬಿಬಿಎಂಪಿಯು ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲು ಸಿದ್ಧತೆ ನಡೆಸಿದೆ. ವಿಶೇಷವೆಂದರೆ, ಈ ಟೆಂಡರ್‌ಗಳ ರದ್ದತಿಗೆ ಬಿಬಿಎಂಪಿ ಯಾವುದೇ ಬಲವಾದ ಕಾರಣಗಳನ್ನು ನೀಡಿಲ್ಲ.

ಬೆನ್ನಿಗಾನಗಳ್ಳಿ ವಾರ್ಡ್‌ನ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ (ಪ್ಯಾಕೇಜ್–3), ಸಿ.ವಿ.ರಾಮನ್‌ನಗರ ವಾರ್ಡ್‌ನ ಭುವನೇಶ್ವರಿ ನಗರದ ಕಗ್ಗದಾಸಪುರ, ಸುದ್ದಗುಂಟೆಪಾಳ್ಯ ಪ್ರದೇಶದ ರಸ್ತೆ ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ (ಪ್ಯಾಕೇಜ್–1), ಹೊಸ ತಿಪ್ಪಸಂದ್ರ ವಾರ್ಡ್‌ನ ರಸ್ತೆ ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ (ಪ್ಯಾಕೇಜ್ 4) ಹಾಗೂ ಜೀವನ್‌ಬಿಮಾನಗರದ ತಿಪ್ಪಸಂದ್ರ ಮುಖ್ಯರಸ್ತೆಯ ಡಾಂಬರೀಕರಣ ಕಾಮಗಾರಿಗಳಿಗೆ ಬಿಬಿಎಂಪಿ 2019ರ ನ.8ರಂದು ಟೆಂಡರ್ ಕರೆದಿತ್ತು.

ಟೆಂಡರ್ ಮೊತ್ತಕ್ಕಿಂತಲೂ ಕಡಿಮೆ ಮೊತ್ತ ನಮೂದಿಸಿದ್ದ ಎಂಎಸ್‌ವಿ ಕನ್‌ಸ್ಟ್ರಕ್ಷನ್ಸ್ ಕಂಪನಿ ಎಲ್–1 ಗುತ್ತಿಗೆದಾರರಾಗಿ ಹೊರಹೊಮ್ಮಿತ್ತು. ಈ ಕಂಪನಿಗೆ ಟೆಂಡರ್ ನೀಡುವ ಪ್ರಸ್ತಾವಗಳಿಗೆ ನಗರಾಭಿವೃದ್ಧಿ ಇಲಾಖೆಯು 2021ರ ಮಾರ್ಚ್‌ನಲ್ಲಿ ಅನುಮೋದನೆ ನೀಡಿದೆ. ಬಿಬಿಎಂಪಿಯು ಮೂರು ಪ್ಯಾಕೇಜ್‌ಗಳ ಅನುಷ್ಠಾನಕ್ಕೆ 2021ರ ಮಾರ್ಚ್ 30 ಹಾಗೂ ಇನ್ನೊಂದು ಕಾಮಗಾರಿಗೆ ಅನುಷ್ಠಾನಕ್ಕೆ 2021ರ ಏ.01ರಂದು ಗುತ್ತಿಗೆದಾರ ಸಂಸ್ಥೆಗೆ ಟೆಂಡರ್ ಸ್ವೀಕಾರ ಪತ್ರಗಳನ್ನೂ ನೀಡಿದೆ. ಗುತ್ತಿಗೆದಾರರು ಟೆಂಡರ್ ಭದ್ರತಾ ಠೇವಣಿ ಸಲ್ಲಿಸಿದ್ದು, ಕರಾರು ಮಾಡಿಕೊಂಡು ಕಾರ್ಯಾದೇಶ ಪತ್ರವನ್ನು ಪಡೆಯಬೇಕಿದೆ.

ಗುತ್ತಿಗೆದಾರರು ನಾಲ್ಕು ದಿನ ತಡವಾಗಿ ಬ್ಯಾಂಕ್ ಗ್ಯಾರಂಟಿ ಒದಗಿಸಿದ್ದನ್ನೇ ನೆಪವಾಗಿಟ್ಟುಕೊಂಡು ಬಿಬಿಎಂಪಿಯ ಕಾರ್ಯಪಾಲಕ ಎಂಜಿನಿಯರ್ ಟೆಂಡರ್ ರದ್ದುಪಡಿಸಲು ಕ್ರಮಕೈಗೊಂಡಿದ್ದಾರೆ. 'ಗುತ್ತಿಗೆದಾರರು ಕ್ರಮಬದ್ಧ ಅವಧಿಯೊಳಗೆ ಬ್ಯಾಂಕ್ ಗ್ಯಾರಂಟಿ ಸಲ್ಲಿಸಿಲ್ಲ ಹಾಗೂ ಬ್ಯಾಂಕ್ ಗ್ಯಾರಂಟಿ ಬಗ್ಗೆ ಬ್ಯಾಂಕ್‌ನಿಂದ ಪ್ರತಿಕ್ರಿಯೆ ಬಂದಿಲ್ಲ. ಈ ಕಾಮಗಾರಿಗೆ ಟೆಂಡರ್ ಆಹ್ವಾನಿಸಿ 21 ತಿಂಗಳುಗಳು ಕಳೆದಿವೆ. ಈ ಕಾಮಗಾರಿಗಳನ್ನು ಶೀಘ್ರವಾಗಿ ಕೈಗೊಳ್ಳಬೇಕಿದ್ದು, ಅಲ್ಪಾವಧಿ ಮರು ಟೆಂಡರ್ ಕರೆಯಲು ಆದೇಶ ನೀಡಬೇಕು' ಎಂದು ಅವರು ಪ್ರಸ್ತಾವನೆ ಸಲ್ಲಿಸಿದ್ದಾರೆ. ನಿಗದಿತ ಅವಧಿಯಲ್ಲಿ ಬ್ಯಾಂಕ್ ಗ್ಯಾರಂಟಿ ಸಲ್ಲಿಸಿಲ್ಲ ಎನ್ನುವ ಇಇ ಯಾವ ಕಾರಣಕ್ಕೆ ಈ ಬಗ್ಗೆ ಬ್ಯಾಂಕ್‌ನಿಂದ ದೃಢೀಕರಣ ಬಯಸಿದ್ದಾರೆ ಎಂಬುದಕ್ಕೆ ಸ್ಪಷ್ಟತೆ ಇಲ್ಲ. 'ನಗರದ ಸಚಿವರೊಬ್ಬರ ಸಂಬಂಧಿಯಾಗಿರುವ ಗುತ್ತಿಗೆದಾರರಿಗೆ ಅನುಕೂಲ ಮಾಡಿಕೊಡಲು ಅಲ್ಪಾವಧಿ ಟೆಂಡರ್ ಕರೆಯಲು ಸಿದ್ಧತೆ ನಡೆದಿದೆ' ಎಂದು ಬಿಬಿಎಂಪಿ ಮೂಲಗಳು ಹೇಳಿವೆ.

'ಬಲವಾದ ಕಾರಣವಿಲ್ಲದೆಯೇ ಮರು ಟೆಂಡರ್ ಕರೆದರೆ ಕಾಮಗಾರಿ ಮತ್ತಷ್ಟು ವಿಳಂಬವಾಗಲಿದೆ. ಅಲ್ಲದೇ ಬ್ಯಾಂಕ್ ಗ್ಯಾರಂಟಿ ನೀಡುವಾಗ ನಾಲ್ಕು ದಿನ ತಡವಾಗಿರುವುದು ಟೆಂಡರ್ ರದ್ದುಪಡಿಸಲು ಬಲವಾದ ಕಾರಣವಲ್ಲ. ಈ ನೆಪದಲ್ಲಿ ಟೆಂಡರ್ ರದ್ದುಪಡಿಸುವುದಾದರೆ ಬಿಬಿಎಂಪಿಯಲ್ಲಿ ನೂರಾರು ಟೆಂಡರ್‌ಗಳನ್ನು ರದ್ದುಪಡಿಸಬೇಕಾಗುತ್ತದೆ. ಬ್ಯಾಂಕ್ ಗ್ಯಾರಂಟಿ ಪಡೆಯಲು ನೀಡಿದ್ದ ಗಡುವಿನ ಅವಧಿಯಲ್ಲಿ ಕೋವಿಡ್ ಲಾಕ್‌ಡೌನ್ ಕೂಡಾ ಜಾರಿಯಲ್ಲಿತ್ತು' ಎಂದು ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟರು.

'ಒಂದು ವೇಳೆ ಈ ಹಂತದಲ್ಲಿ ಟೆಂಡರ್ ರದ್ದುಪಡಿಸುವುದೇ ಆದರೆ ಗುತ್ತಿಗೆ ಮೊತ್ತದ ಶೇ 5ರಷ್ಟನ್ನು ಮತ್ತು ಟೆಂಡರ್ ಮೊತ್ತದ ವ್ಯತ್ಯಾಸದ ಪ್ರಮಾಣಕ್ಕನುಗುಣವಾಗಿ ನಿರ್ದಿಷ್ಟ ಮೊತ್ತವನ್ನು ಕಡಿತ ಮಾಡಿ ಖಾತರಿ ಹಣವನ್ನು ಗುತ್ತಿಗೆದಾರರಿಗೆ ಹಿಂತಿರುಗಿಸಬೇಕಾಗುತ್ತದೆ. ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಬೇಕಾಗುತ್ತದೆ. ಅದನ್ನು ಗುತ್ತಿಗೆದಾರರು ನ್ಯಾಯಾಲಯದಲ್ಲಿ ಪ್ರಶ್ನಿಸಬಹುದು. ಇದರಿಂದ ಕಾಮಗಾರಿ ಮತ್ತಷ್ಟು ತಡವಾಗಬಹುದು' ಎಂದರು.

'ಪ್ರಸ್ತುತ ಕಾಮಗಾರಿಗಳ ಗುತ್ತಿಗೆ ಪಡೆದ ಸಂಸ್ಥೆಯು ಟೆಂಡರ್ ಮೊತ್ತಕ್ಕಿಂತ ಕಡಿಮೆ ಮೊತ್ತಕ್ಕೆ ಕಾಮಗಾರಿ ಅನುಷ್ಠಾನಕ್ಕೆ ಒಪ್ಪಿದೆ. ಅಲ್ಪಾವಧಿ ಟೆಂಡರ್‌ನಲ್ಲಿ ಭಾಗವಹಿಸುವ ಗುತ್ತಿಗೆದಾರರು ಇಷ್ಟು ಕಡಿಮೆ ಮೊತ್ತಕ್ಕೆ ಕಾಮಗಾರಿ ನಡೆಸಲು ಒಪ್ಪದಿದ್ದರೆ ಸರ್ಕಾರಕ್ಕೆ ನಷ್ಟವಾಗಲಿದೆ' ಎಂದೂ ಅವರು ತಿಳಿಸಿದರು.

ಸಿ.ವಿ.ರಾಮನ್‌ನಗರ ಕ್ಷೇತ್ರ: ಕಾಮಗಾರಿಗಳ ಟೆಂಡರ್ ವಿವರ

(ಮೊತ್ತ ₹ ಕೋಟಿಗಳಲ್ಲಿ)

ಕಾಮಗಾರಿ	ಟೆಂಡರ್ ಮೊತ್ತ	ಗುತ್ತಿಗೆ ಮೊತ್ತ
ಬೆನ್ನಿಗಾನಗಳ್ಳಿ ವಾರ್ಡ್‌ನ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ (ಪ್ಯಾಕೇಜ್–3)	30.00	23.83
ಸಿ.ವಿ.ರಾಮನ್‌ನಗರ ವಾರ್ಡ್‌ನ ಭುವನೇಶ್ವರಿ ನಗರದ ಕಗ್ಗದಾಸಪುರ, ಸುದ್ದಗುಂಟೆಪಾಳ್ಯ ಪ್ರದೇಶದ ರಸ್ತೆ ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ (ಪ್ಯಾಕೇಜ್–1)	15.30	12.85
ಹೊಸ ತಿಪ್ಪಸಂದ್ರ ವಾರ್ಡ್‌ನ ರಸ್ತೆ ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ (ಪ್ಯಾಕೇಜ್ 4)	30.00	23.83
ಜೀವನಬಿಮಾನಗರದಲ್ಲಿ ತಿಪ್ಪಸಂದ್ರ ಮುಖ್ಯರಸ್ತೆಯ ಡಾಂಬರೀಕರಣ	5.00	3.97

ಆ್ಯಪ್ ಮೂಲಕ ಕುಂಚಿಟಿಗರ ಜನಗಣತಿ

ಬೆಂಗಳೂರು: ವಿಶ್ವ ಕುಂಚಿಟಿಗ ಯುವ ಶಕ್ತಿ ಸಂಘಟನೆಯು ಮೊಬೈಲ್ ಆ್ಯಪ್ ಮೂಲಕ ಕುಂಚಿಟಿಗರ ಗಣತಿ ಮಾಡಲು ಮುಂದಾಗಿದೆ.

'ವಿಶ್ವ ಕುಂಚಿಟಿಗ ಸೆನ್ಸಸ್ ಆ್ಯಪ್' ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಲಭ್ಯವಿದ್ದು, ಇದರಲ್ಲಿ ಸಮುದಾಯದ ಜನ ಸ್ವಯಂ ಪ್ರೇರಿತವಾಗಿ ತಮ್ಮ ಮಾಹಿತಿ ಒದಗಿಸಬೇಕು. ಅಂತಹವರಿಗೆ ಸ್ಥಳದಲ್ಲಿಯೇ ಡಿಜಿಟಲ್ ಗುರುತುಪತ್ರ ಲಭಿಸಲಿದೆ. ಮುಂದಿನ ದಿನಗಳಲ್ಲಿ ಗುರುತುಪತ್ರವನ್ನು ಪ್ರತಿ ಮನೆಗೂ ತಲುಪಿಸುವ ಕಾರ್ಯ ಮಾಡುತ್ತೇವೆ' ಎಂದು ವಿಶ್ವ ಕುಂಚಿಟಿಗ ಯುವಶಕ್ತಿಯ ರಾಷ್ಟ್ರೀಯ ಅಧ್ಯಕ್ಷ ಶಾಂತ್ ತಿಳಿಸಿದ್ದಾರೆ. 'ಸುಮಾರು 32 ಅಂಶಗಳನ್ನು ಒಳಗೊಂಡಂತಹ ಮಾಹಿತಿಯನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹಿಸಿಡಲಾಗುತ್ತದೆ.' ಎಂದಿದ್ದಾರೆ.

Indian Institute of Entrepreneurship
BASISTHA CHARIALI LALMATI, 37, NATIONAL HIGHWAY BYPASS, GUWAHATI-781029 (ASSAM) Tel.: 0361-2302646, 2300994, 2300123, 2300840; Tele Fax: 0361-2300325/2305394

Tender for Selection of a Knowledge Partner for Implementation of Project on Entrepreneurship Development in the Holy City of Kollur, District: Udupi, Karnataka

Sealed bids are invited by Indian Institute of Entrepreneurship (IIE) in two bid system for Selection of a Knowledge Partner for Implementation of Project on Entrepreneurship Development in the Holy City of Kollur. IIE shall select a Firm as per the procedure described in the Request For Proposal (RFP) which may be downloaded from IIE's website www.iie.gov.in > Noticeboard > Tenders
Offers may be submitted in a sealed cover, addressed to Indian Institute of Entrepreneurship Basistha Chariali, N.H-37 Bypass, Near Game Village, Lalmati, Guwahati: 781029 on or before **29-09-2021; 1700 Hrs.** Prospective bidders are requested to keep watching the website www.iie.gov.in regularly for any subsequent information/ corrigendum to the advertisement. There will be no separate advertisement for the same. **Sd/- Administrative Officer**

ಮೆಟ್ರೊ ರೈಲು ಸಂಚಾರ ಸಮಯ ವಿಸ್ತರಣೆಗೆ ಸಾರ್ವಜನಿಕರ ಒತ್ತಾಯ

'ರಾತ್ರಿ 8ರ ನಂತರ ಮಾತ್ರ ಸೋಂಕು ಹರಡುತ್ತದೆಯೇ'

ಬೆಂಗಳೂರು: ಮೆಟ್ರೊ ರೈಲು ಸಂಚಾರ ಅವಧಿಯನ್ನು ವಿಸ್ತರಿಸಬೇಕು ಎಂಬ ಒತ್ತಾಯ ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಿದೆ. ಆಟೊ, ಟ್ಯಾಕ್ಸಿ, ಬಸ್, ರೈಲುಗಳ ಸಂಚಾರಕ್ಕೆ ಇಲ್ಲದ ನಿರ್ಬಂಧ ಮೆಟ್ರೊ ರೈಲು ಸಂಚಾರಕ್ಕೆ ಮಾತ್ರವೇಕೆ ಎಂದು ಸಾರ್ವಜನಿಕರು ಪ್ರಶ್ನಿಸುತ್ತಿದ್ದಾರೆ.

ಕೋವಿಡ್ ನಿಯಂತ್ರಣಕ್ಕಾಗಿ ರಾಜ್ಯಸರ್ಕಾರವು ರಾತ್ರಿ 9ರಿಂದ ಬೆಳಿಗ್ಗೆ 5ರವರೆಗೆ ರಾತ್ರಿ ಕರ್ಫ್ಯೂ ಜಾರಿ ಮಾಡಿರುವುದರಿಂದ ಮೆಟ್ರೊ ರೈಲು ಸಂಚಾರ ಸಮಯವನ್ನು ಕಡಿತಗೊಳಿಸಲಾಗಿದೆ. ಸದ್ಯ, ಬೆಳಿಗ್ಗೆ 7ರಿಂದ ರಾತ್ರಿ 8ರವರೆಗೆ ಮಾತ್ರ ಮೆಟ್ರೊ ರೈಲುಗಳು ಸಂಚರಿಸುತ್ತಿವೆ. ಶಾಲಾ–ಕಾಲೇಜು ಮತ್ತು ಕಚೇರಿಗಳು ಕಾರ್ಯಾರಂಭ ಮಾಡಿರುವುದರಿಂದ ಈ ಮೊದಲಿನಂತೆ ಬೆಳಿಗ್ಗೆ 5ರಿಂದ ರಾತ್ರಿ 11ರವರೆಗೆ ಮೆಟ್ರೊ ರೈಲು ಸೇವೆ ನೀಡಬೇಕು ಎಂದು ಸಾರ್ವಜನಿಕರು ಒತ್ತಾಯಿಸುತ್ತಿದ್ದಾರೆ.

'ಮಧ್ಯರಾತ್ರಿ ತೊಂದರೆ'



ನಾನು ಬೆಂಗಳೂರಿನಿಂದ ಶಿವಮೊಗ್ಗಕ್ಕೆ ಆಗಾಗ ಹೋಗಬೇಕಾಗುತ್ತದೆ. ಸುಮಾರು ಆರು ತಾಸುಗಳ ಪ್ರಯಾಣ. ರಾತ್ರಿ 8 ಗಂಟೆಗೆ ಮೆಟ್ರೊ ರೈಲಿಗೆ ಹೋಗಿ, 9ಕ್ಕೆ ಬಸ್‌ನಲ್ಲಿ ಪ್ರಯಾಣ ಆರಂಭಿಸಿದರೂ, ಮಧ್ಯರಾತ್ರಿ 2 ಅಥವಾ 3 ಗಂಟೆಗೆ ಶಿವಮೊಗ್ಗದಲ್ಲಿ ಇರಬೇಕಾಗುತ್ತದೆ. ಆಗ ಆಟೊದವರು, ಟ್ಯಾಕ್ಸಿಯವರು ದುಪ್ಪಟ್ಟು ಹಣ ಕೇಳುತ್ತಾರೆ. ಬೆಂಗಳೂರಿನಿಂದಲೇ ರಾತ್ರಿ 11ಕ್ಕೆ ಮನೆಯಿಂದ ಹೊರಟರೂ, ಇಲ್ಲಿಯೂ ಓಲಾ, ಉಬರ್‌ನವರು ಶೇ 150ರಷ್ಟು ದುಡ್ಡು ಹೆಚ್ಚು ಕೇಳುತ್ತಾರೆ. ಮೊದಲಿನಂತೆ ರಾತ್ರಿ 11ರವರೆಗೆ ಮೆಟ್ರೊ ರೈಲು ಸೇವೆ ನೀಡಿದರೆ ಅನುಕೂಲವಾಗುತ್ತದೆ

ಬಿ.ಎಸ್. ರವಿಶಂಕರ್, ಉದ್ಯಮಿ

'ಲಸಿಕೆ ಪಡೆದಿರುವುದರಿಂದ ಆತಂಕವಿಲ್ಲ'



ಲಸಿಕೆ ಪಡೆದಿರುವವರ ಪ್ರಮಾಣ ಬೆಂಗಳೂರಿನಲ್ಲಿಯೇ ಹೆಚ್ಚಾಗಿದೆ. ಬಹುತೇಕರು ಕನಿಷ್ಠ ಒಂದು ಡೋಸ್ ಆದರೂ ಲಸಿಕೆ ಪಡೆದಿದ್ದಾರೆ. ಈಗಾಗಲೇ ಮೆಟ್ರೊ ರೈಲಿನಲ್ಲಿ ನಿಂತು ಪ್ರಯಾಣಿಸುವಷ್ಟು ಜನಸಂದಣಿ ಇದೆ. ಯಾವುದೇ ಅಂತರವನ್ನು ಕಾಪಾಡಿಕೊಳ್ಳಲೂ ಆಗುವುದಿಲ್ಲ. ಬೆಳಿಗ್ಗೆ 7ರಿಂದ ರಾತ್ರಿ 8ರವರೆಗೆ ಹರಡದ ಸೋಂಕು, ನಂತರ ಮಾತ್ರ ಹರಡುತ್ತದೆಯೇ ? ರಾತ್ರಿಯ ವೇಳೆ ಆಟೊ, ಟ್ಯಾಕ್ಸಿಗಳವರು ಕೇಳುವ ಬಾಡಿಗೆ ಕೇಳಿದರೆ ತಲೆ ತಿರುಗುತ್ತದೆ. ಮೊದಲಿನ ವೇಳಾಪಟ್ಟಿಯಂತೆಯೇ ನಿಗಮವು ಮೆಟ್ರೊ ರೈಲು ಸಂಚಾರ ಆರಂಭಿಸಬೇಕು.

ಮಹೇಶ್ವರ ಶಾಸ್ತ್ರಿ, ಖಾಸಗಿ ಕಂಪನಿ ಉದ್ಯೋಗಿ

'ಆಟೊ, ಬಸ್‌ಗಳಲ್ಲಿಯೂ ಅಂತರವಿಲ್ಲ'

ಕೋವಿಡ್ ಕಾರಣದಿಂದ ಮೆಟ್ರೊ ರೈಲು ಸಂಚಾರ ಸಮಯವನ್ನು ಕಡಿತಗೊಳಿಸಲಾಗಿದೆ ಎನ್ನುತ್ತಿದ್ದಾರೆ. ಮೆಟ್ರೊ ಬದಲು, ಟ್ಯಾಕ್ಸಿ, ಆಟೊ ಅಥವಾ ಬಸ್‌ಗಳಲ್ಲಿಯೂ ಅಂತರವಿರುವುದಿಲ್ಲ. ಮೆಟ್ರೊ ರೈಲಿನ ಸಮಯ ಮಾತ್ರ ಕಡಿತಗೊಳಿಸಿರುವುದಕ್ಕೆ ಅರ್ಥವೇ ಇಲ್ಲ. ಮೆಟ್ರೊ ರೈಲಿನ ಬದಲು ಸ್ವಂತ ವಾಹನಗಳನ್ನು, ಆಟೊ–ಕ್ಯಾಬ್‌ಗಳನ್ನು ಹೆಚ್ಚು ಜನ ಬಳಸುವ ಕಾರಣದಿಂದ ಸಂಚಾರ ದಟ್ಟಣೆ ಹೆಚ್ಚುವುದಲ್ಲದೆ ವಾಯುಮಾಲಿನ್ಯ, ಶಬ್ದ ಮಾಲಿನ್ಯವೂ ಹೆಚ್ಚುತ್ತದೆ

ಆಶಾ, ಖಾಸಗಿ ಕಂಪನಿ ಉದ್ಯೋಗಿ

'ಅರ್ಧ ತಾಸಿಗೊಮ್ಮೆ ಸಂಚರಿಸಲಿ'

ದುಡಿಯುವ ವರ್ಗ ಮತ್ತು ರಾತ್ರಿ ದೂರದ ಊರಿಗೆ ಹೋಗುವವರಿಗೆ ಮೆಟ್ರೊ ರೈಲಿಗಿಂತ ಉತ್ತಮವಾದ ಮತ್ತೊಂದು ಸಾರಿಗೆ ಸೌಲಭ್ಯವಿಲ್ಲ. ನೇರಳೆ ಮತ್ತು ಹಸಿರು ಮಾರ್ಗದಲ್ಲಿ ರಾತ್ರಿ 9ರಿಂದ ಕನಿಷ್ಠ ಅರ್ಧ ಗಂಟೆಗೆ ಒಮ್ಮೆಯಾದರೂ ಒಂದೆರಡು ರೈಲುಗಳು ಸಂಚರಿಸುವಂತಾಗಬೇಕು. 11ರವರೆಗೆ ಮೆಟ್ರೊ ಸೇವೆ ದೊರೆತರೆ ತುಂಬಾ ಅನುಕೂಲವಾಗುತ್ತದೆ. ಈಗ ಕೋವಿಡ್ ಪ್ರಕರಣಗಳ ಸಂಖ್ಯೆಯೂ ಕಡಿಮೆ ಇದೆ. ಶಾಲಾ–ಕಾಲೇಜು, ಕಚೇರಿ ಮತ್ತು ಇನ್ನಿತರೆ ಎಲ್ಲ ಚಟುವಟಿಕೆಗಳು ಸರಾಗವಾಗಿ ನಡೆಯುತ್ತಿರುವ ಈ ಸಂದರ್ಭದಲ್ಲಿ ಮೆಟ್ರೊ ರೈಲು ಸಂಚಾರ ಸಮಯ ಮಾತ್ರ ಕಡಿತಗೊಳಿಸಿರುವುದು ಸರಿಯಲ್ಲ.

ಅನಿತಾ ರಂಗರಾಜ್, ಸರ್ಕಾರಿ ಉದ್ಯೋಗಿ

ನಗರದಲ್ಲಿ ಇಂದು

'ತೇಜಸ್ವಿ ಜೀವಲೋಕ–9, ಕುರಿಂಜಿ ಲೋಕ' ಛಾಯಾಚಿತ್ರ, ಸಾಕ್ಷ್ಯಚಿತ್ರ ಪ್ರದರ್ಶನ,ಸಂವಾದ ಕಾರ್ಯಕ್ರಮ: ಆಯೋಜನೆ–ಪರಿಸರ, ನಿಸರ್ಗ ಸಂರಕ್ಷಣಾ ಸಂಸ್ಥೆ, ಕರ್ನಾಟಕ ಚಿತ್ರಕಲಾ ಪರಿಷತ್, ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ ಹಾಗೂ ಪೀಣ್ಯ ಕೈಗಾರಿಕಾ ಸಂಘ, ಸ್ಥಳ–ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪ ರಸ್ತೆ–ಬೆಳಿಗ್ಗೆ 11.

ಮನು ಬಳಿಗಾರ್ ಅವರಿಗೆ ಬೀಳ್ಕೊಡುಗೆ ಮತ್ತು ಅಭಿನಂದನಾ ಸಮಾರಂಭ: ಮುಖ್ಯ ಅತಿಥಿ–ಸಾಹಿತಿ ಎಚ್.ಎಸ್. ವೆಂಕಟೇಶ ಮೂರ್ತಿ, ವಿದ್ವಾಂಸ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ್, ಅಧ್ಯಕ್ಷತೆ–ಕನ್ನಡ ಸಾಹಿತ್ಯ ಪರಿಷತ್ ಆಡಳಿತಾಧಿಕಾರಿ ಎಸ್.ರಂಗಪ್ಪ, ಆಯೋಜನೆ–ಕನ್ನಡ ಸಾಹಿತ್ಯ ಪರಿಷತ್, ಸ್ಥಳ–ಶ್ರೀಕೃಷ್ಣರಾಜ ಪರಿಷನ್ಮಂದಿರ, ಚಾಮರಾಜಪೇಟೆ–ಮಧ್ಯಾಹ್ನ 3.

ಸರ್ಕಾರಿ ಹಾಗೂ ಅನುದಾನಿತ ಶಾಲಾ ಮಕ್ಕಳಿಗೆ ಉಚಿತ ನೇತ್ರ ತಪಾಸಣೆ ಹಾಗೂ ಕನ್ನಡಕ ವಿತರಣೆ ಕಾರ್ಯಕ್ರಮ: ಸಹಯೋಗ–ಡಾ.ಅಗರವಾಲ್ ಕಣ್ಣಿನ ಆಸ್ಪತ್ರೆ, ಫೋರ್ಟಿಸ್ ಆಸ್ಪತ್ರೆ ಹಾಗೂ ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರ ಕಚೇರಿ, ಸ್ಥಳ–ಬಿಇಎಸ್ ಅನುದಾನಿತ ಶಾಲೆ, ಜಯನಗರ 4ನೇ ಟಿ ಬ್ಲಾಕ್–ಬೆಳಿಗ್ಗೆ 10:30.

ತರಾತುರಿಯಲ್ಲಿ ಶಿಕ್ಷಣ ನೀತಿ ಜಾರಿಗೆ ವಿರೋಧ: ಸಿ.ಎಂ.ಗೆ ಪತ್ರ

ಬೆಂಗಳೂರು: ರಾಜ್ಯ ಸರ್ಕಾರವು ತರಾತುರಿಯಲ್ಲಿ ಹಾಗೂ ಏಕಪಕ್ಷೀಯವಾಗಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿ–2020 ಜಾರಿಗೊಳಿಸುತ್ತಿರುವುದನ್ನು ಖಂಡಿಸಿ ವಿಜ್ಞಾನಿಗಳು ಹಾಗೂ ಶಿಕ್ಷಣ ತಜ್ಞರು ಸೇರಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯದ ಎಲ್ಲಾ ಶಾಸಕರು ಹಾಗೂ ವಿಧಾನಪರಿಷತ್ ಸದಸ್ಯರಿಗೆ ಬಹಿರಂಗ ಪತ್ರ ಬರೆದಿದ್ದಾರೆ.

'ಸರ್ಕಾರವು ನೂತನ ಶಿಕ್ಷಣ ನೀತಿಯ ಅನುಷ್ಠಾನ ನಿರ್ಧಾರವನ್ನು ಕೂಡಲೇ ಕೈಬಿಡಬೇಕು. ಬೋಧನೆ ಹಾಗೂ ಜ್ಞಾನಾರ್ಜನೆಗೆ ಮಾರಕವಾಗಿರುವ ಬಹು ಶಿಸ್ತೀಯ ಪದ್ಧತಿಯನ್ನು ಕೂಡಲೇ ರದ್ದುಗೊಳಿಸಬೇಕು' ಎಂದು ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ (ಕರ್ನಾಟಕ) ರಾಜ್ಯ ಘಟಕದ ಅಧ್ಯಕ್ಷ ಪ್ರೊ. ಅಲ್ಲಮಪ್ರಭು ಬೆಟ್ಟದೂರು ಒತ್ತಾಯಿಸಿದ್ದಾರೆ.

'ರಾಜ್ಯ ಸರ್ಕಾರವು ಪ್ರಜಾತಾಂತ್ರಿಕ ಚರ್ಚೆಗಳಿಲ್ಲದೆ ಇದನ್ನು ಪದವಿ ಹಂತದಲ್ಲಿ ಜಾರಿಗೊಳಿಸಲು ಮುಂದಾಗಿದೆ. ಸಾರ್ವಜನಿಕರು, ಶಿಕ್ಷಣ ತಜ್ಞರು ಆಡಳಿತಾರೂಢ ಸರ್ಕಾರದ ಸರ್ವಾಧಿಕಾರಿ ಧೋರಣೆಯನ್ನು ಖಂಡಿಸುತ್ತಲೇ ಬಂದಿದ್ದಾರೆ. ಬಡ ವಿದ್ಯಾರ್ಥಿಗಳು ಹಾಗೂ ಶಿಕ್ಷಣದ ಬಗ್ಗೆ ಕಾಳಜಿ ಹೊಂದಿರುವ ಎಲ್ಲಾ ಶಾಸಕರು ಅಧಿವೇಶನದಲ್ಲಿ ನೂತನ ಶಿಕ್ಷಣ ನೀತಿಯನ್ನು ವಿರೋಧಿಸಬೇಕು' ಎಂದು ಆಗ್ರಹಿಸಿದ್ದಾರೆ.

11 ದಿನಗಳಿಂದ ನೀರಿಲ್ಲ: ಪ್ರತಿಭಟನೆಗೆ ನಿರ್ಧಾರ

ಬೆಂಗಳೂರು: ಹನ್ನೊಂದು ದಿನಗಳಿಂದ ನೀರು ಪೂರೈಸದಿರುವುದರಿಂದ ಬೇಸತ್ತಿರುವ ವಿದ್ಯಾರಣ್ಯಪುರ ನಿವಾಸಿಗಳು ಇದೇ 13ರಂದು (ಸೋಮವಾರ) ಬೆಳಿಗ್ಗೆ 11ಕ್ಕೆ ಜಲಮಂಡಳಿಯ ಸ್ಥಳೀಯ ಕಚೇರಿ ಎದುರು ಪ್ರತಿಭಟನೆ ನಡೆಸಲು ಮುಂದಾಗಿದ್ದಾರೆ.

'ವಿದ್ಯಾರಣ್ಯಪುರ ಭಾಗದಲ್ಲಿ ತಿಂಗಳಿನಿಂದಲೇ ನೀರಿನ ಅಭಾವ ಸೃಷ್ಟಿಯಾಗಿದೆ. ಅದರಲ್ಲಿಯೂ, 11 ದಿನಗಳಿಂದ ಒಂದು ಹನಿ ನೀರನ್ನೂ ಸರಬರಾಜು ಮಾಡಿಲ್ಲ. ಜಲಮಂಡಳಿ ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆಯ ವಿರುದ್ಧ, ಆದೀಶ್ವರ ಶೋ ರೂಂ ಬಳಿ ಇರುವ ವಿದ್ಯಾರಣ್ಯಪುರ ಜಲಮಂಡಳಿ ಕಚೇರಿ ಎದುರು ಪ್ರತಿಭಟನೆ ಮಾಡಲಾಗುವುದು' ಎಂದು ವಿದ್ಯಾರಣ್ಯಪುರ ಸಾಂಸ್ಕೃತಿಕ ಕೇಂದ್ರದ ಅಧ್ಯಕ್ಷ ಆರ್. ಅಶ್ವತ್ಥ್ ತಿಳಿಸಿದರು.

'ಜಿಕೆವಿಕೆ ಬಳಿಯ ಪಂಪಿಂಗ್ ಸ್ಟೇಷನ್‌ನಲ್ಲಿ ಯಂತ್ರ ಕೆಟ್ಟಿರುವುದರಿಂದ ಸಮಸ್ಯೆ ಆಗುತ್ತಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. 11 ದಿನಗಳಿಂದಲೂ ಇದೇ ಕಾರಣ ಹೇಳುತ್ತಿದ್ದಾರೆ. ಹಬ್ಬದ ಸಂದರ್ಭದಲ್ಲಿ ನೀರಿಲ್ಲದೆ ಪರಿತಪಿಸುವಂತಾಗಿದೆ' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

'ಎನ್‌ಟಿಐ ಬಡಾವಣೆ, ಬಿಇಎಲ್ ಬಡಾವಣೆ, ಎಚ್‌ಎಂಟಿ ಬಡಾವಣೆ ಸೇರಿ ಹಲವು ಪ್ರದೇಶಗಳ ಸುಮಾರು 6 ಸಾವಿರ ಮನೆಗಳಿಗೆ ನೀರು ಪೂರೈಕೆಯಾಗುತ್ತಿಲ್ಲ. ಟ್ಯಾಂಕರ್ ನೀರು ತರಿಸಿಕೊಳ್ಳುತ್ತಿದ್ದೇವೆ. ಒಂದು ಟ್ಯಾಂಕರ್‌ಗೆ ₹500ರಿಂದ ₹700 ವರೆಗೆ ಕೊಡಬೇಕಾಗಿದೆ' ಎಂದು ಅವರು ಅಳಲು ತೋಡಿಕೊಂಡರು.

राष्ट्रीय डिज़ाइन संस्थान
NATIONAL INSTITUTE OF DESIGN
Ahmedabad, Gandhinagar, Bengaluru.
A Statutory Institute under DPIIT
Ministry of Commerce & Industry, Government of India
Paldi, Ahmedabad - 380 007.
Phone : 079 - 26629 500/600 Web : www.nid.edu

NOTICE INVITING e-TENDER

The Institute (NID, Ahmedabad) invites on line e-tenders for **"APPOINTMENT OF THIRD-PARTY INSPECTION AGENCY FOR QUALITY ASSURANCE AND INSPECTION FOR "Strengthening of Incubation and Innovation Centre - Construction of 4th Floor to 8th Floor for vertical extension of NID Campus, Bengaluru." NIT No. IIC_B/PMC/07/2021-22, Estimated Cost : 2.25% (Two Point Twenty Five Percent only)** of **Estimated Construction Cost i.e Rs. 851.56 Lacs i.e Rs. 19,16,000/- (inclusive taxes). Completion Period : 20 Months (Twenty Months)** or completion of construction project whichever is later **Last Date for Submission of online tender is 4th October 2021 till 17.00 hrs.** Tender Notices & Documents are available on **www.nprocure.com, www.eprocure.gov.in & www.nid.edu/tenders.** Addendum if any, to this NIT would appear only on above website.

(Advt # 07/2021)

ಗೋವಿಂದರಾಜನಗರ: ವಿವಿಧ ಕಾಮಗಾರಿಗಳ ಭೂಮಿಪೂಜೆ, ಸೌಕರ್ಯಗಳ ಉದ್ಘಾಟನೆ ವೇಳೆ ಸಿಎಂ ಭರವಸೆ

ಬೆಂಗಳೂರು: 50 ವರ್ಷದ ಅಭಿವೃದ್ಧಿಗೆ ಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಯೋಜನಾಬದ್ಧವಾಗಿ ಬೆಳೆಯುತ್ತಿಲ್ಲ. ಮುಂದಿನ 50 ವರ್ಷಗಳಲ್ಲಿ ಬೆಂಗಳೂರು ಹೇಗಿರಬೇಕು ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ಅಭಿವೃದ್ಧಿ ಯೋಜನೆ ರೂಪಿಸಲಿದ್ದೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬಿಬಿಎಂಪಿಯು ಜಿ.ಕೆ.ಡಬ್ಲ್ಯು ಬಡಾವಣೆಯಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ ಹಾಗೂ ಸೌಕರ್ಯಗಳ ಉದ್ಘಾಟನೆ ನೆರವೇರಿಸಿ ಅವರು ಭಾನುವಾರ ಮಾತನಾಡಿದರು.

'ನಗರದಲ್ಲಿ ಯಾವ ವಲಯದ ಅಭಿವೃದ್ಧಿಗೆ ಏನೇನು ಬೇಕು ಎಂಬ ಸಮಗ್ರ ಮಾಹಿತಿಯನ್ನು ಸಂಗ್ರಹಿಸುತ್ತೇನೆ. ನಾಗರಿಕ ಸೇವೆಗಳು ಮನೆ ಬಾಗಿಲಿನಲ್ಲೇ, ಬೆರಳ ತುದಿಯಲ್ಲೇ ಸಿಗುವಂಥ ವಿನೂತನ ಯೋಜನೆ ಜಾರಿಗೊಳಿಸುತ್ತಿದ್ದೇವೆ. ಹೊಸ ತಂತ್ರಾಂಶವನ್ನೂ ಇದಕ್ಕಾಗಿ ಬಳಕೆ ಮಾಡುತ್ತೇವೆ' ಎಂದರು.

'ನಗರದಲ್ಲಿ ನಿವೇಶನದಾರರು ಮನೆ ನಿರ್ಮಾಣಕ್ಕೆ ಸಂಬಂಧಿಸಿ ಅನೇಕ ಕಾನೂನು ತೊಂದರೆ ಎದುರಿಸುತ್ತಿದ್ದಾರೆ. ಅವುಗಳನ್ನು ಆದಷ್ಟು ಬೇಗ ಇತ್ಯರ್ಥಪಡಿಸಬೇಕಿದೆ. ಈ ಬಗ್ಗೆ ಕೇಂದ್ರ ಸರ್ಕಾರದಲ್ಲಿ ಸಂಬಂಧಪಟ್ಟವರ ಜೊತೆಗೂ ವಿವರವಾಗಿ ಚರ್ಚಿಸಿದ್ದೇವೆ. ಕೆಲವೇ ದಿನಗಳಲ್ಲಿ ಒಳ್ಳೆಯ ಸುದ್ದಿ ನೀಡಲಿದ್ದೇವೆ. ಕೆಲವರಿಗೆ ಮನೆ ಇದ್ದರೂ, ದಾಖಲೆಗಳಿಲ್ಲ. ಅದನ್ನೂ ನೀಡಲಿದ್ದೇವೆ' ಎಂದರು.

'ನಗರದಲ್ಲಿ ಅತಿ ವಾಹನ ದಟ್ಟಣೆಯ 12 ಕಾರಿಡಾರ್‌ಗಳ ಅಭಿವೃದ್ಧಿ ಕೆಲಸ ಆರಂಭವಾಗಿದೆ. ನಿರ್ಭಯ ಯೋಜನೆ ಅಡಿ ನಗರದಾದ್ಯಂತ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಿದ್ದೇವೆ' ಎಂದು ಮಾಹಿತಿ ನೀಡಿದರು.

ಸ್ವತಂತ್ರವಾದ ಆರೋಗ್ಯ ವ್ಯವಸ್ಥೆ: 'ಬೆಂಗಳೂರಿಗೆ ಸ್ವತಂತ್ರ ಆರೋಗ್ಯ ವ್ಯವಸ್ಥೆಯ ಅಗತ್ಯವಿದೆ. ಇದರ ಜಾರಿಗೆ ಎಲ್ಲ ತಯಾರಿ ಮಾಡಿಕೊಳ್ಳುತ್ತಿದ್ದೇನೆ. ಜೊತೆಗೆ ಮೂಲಸೌಕರ್ಯ ಒದಗಿಸಲು ಒತ್ತು ಕೊಡುತ್ತೇನೆ' ಎಂದು ಮುಖ್ಯಮಂತ್ರಿ ಭರವಸೆ ನೀಡಿದರು.

'ಕೋವಿಡ್ ವ್ಯಾಪಿಸಿದಾಗ ನೂರಿನ್ನೂರು ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆಗಳನ್ನು ಪ್ರತಿ ವಲಯದಲ್ಲೂ ನಿರ್ಮಿಸಲಾಗಿದೆ. ಪ್ರತಿ ವಾರ್ಡ್‌ನಲ್ಲಿ ಸಾಮಾನ್ಯ ಜನರಿಗೆ, ಕಡುಬಡವರಿಗೆ ತುರ್ತು ಆರೋಗ್ಯ ಸೇವೆ ಒದಗಿಸುವ ಆಸ್ಪತ್ರೆ ತೆರೆಯುವ ಯೋಜನೆ ರೂಪಿಸಲಿದ್ದೇವೆ' ಎಂದರು.

'ಕ್ಷೇತ್ರದ ಶಾಸಕ ವಿ. ಸೋಮಣ್ಣ ಅವರಷ್ಟು ವೇಗವಾಗಿ ನಾವು ಕೆಲಸ ಮಾಡಲಾಗದು. ಅವರ ವಯಸ್ಸು 70 ದಾಟಿದೆ. ಆದರೆ, 20ರ ವಯಸ್ಸಿನವರಂತೆ ಉತ್ಸಾಹದಿಂದ ಕೆಲಸ ಮಾಡುತ್ತಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಸತಿ ಸಚಿವ ವಿ.ಸೋಮಣ್ಣ, 'ಇನ್ನೆರಡು ತಿಂಗಳುಗಳಲ್ಲಿ ಬೆಂಗಳೂರಿನಲ್ಲಿ ಸೂರಿಲ್ಲದ 65 ಸಾವಿರ ಮಂದಿಗೆ ಸೂರು ಕಲ್ಪಿಸಲಿದ್ದೇವೆ. ಎಂ.ಸಿ ಬಡಾವಣೆಯಲ್ಲಿ 295 ಹಾಸಿಗೆ ಆಸ್ಪತ್ರೆ ನಿರ್ಮಿಸುತ್ತಿದ್ದು, ಅದರ ಕಾಮಗಾರಿ ಅಂತಿಮ ಹಂತದಲ್ಲಿದೆ. ಪಂತರಪಾಳ್ಯದಲ್ಲೂ ಆಸ್ಪತ್ರೆ ನಿರ್ಮಿಸುತ್ತಿದ್ದೇವೆ' ಎಂದರು.

ಕಾಗಿನೆಲೆ ಮಹಾಸಂಸ್ಥಾನದ ಕನಕಗುರು ಪೀಠದ ನಿರಂಜನಾರಾಧ್ಯ ಸ್ವಾಮಿ, ಕನಕ ಗುರುಪೀಠದ ಹೊಸದುರ್ಗ ಶಾಖಾ ಮಠದ ಈಶ್ವರಾನಂದಪುರಿ ಸ್ವಾಮಿ ಸಾನಿಧ್ಯ ವಹಿಸಿದ್ದರು. ಸಚಿವರಾದ ಆರ್.ಅಶೋಕ, ಕೆ.ಸುಧಾಕರ್, ಬಿ.ಎ.ಬಸವರಾಜ, ಮುನಿರತ್ನ, ಗೋಪಾಲಯ್ಯ, ಸಂಸದ ತೇಜಸ್ವಿಸೂರ್ಯ, ಬಿಡಿಎ ಅಧ್ಯಕ್ಷ ಎಸ್. ಆರ್.ವಿಶ್ವನಾಥ್, ವಿಧಾನ ಪರಿಷತ್ ಸದಸ್ಯರಾದ ಅ. ದೇವೇಗೌಡ, ಎಚ್. ಎನ್. ರಮೇಶ್ ಗೌಡ ಇದ್ದರು.

ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭಾನುವಾರ ಲೋಕಾರ್ಪಣೆ ಮಾಡಿದರು. ಬಿಬಿಎಂಪಿ ಮುಖ್ಯ ಆಯುಕ್ತ ಗೌರವ ಗುಪ್ತ, ಸಚಿವ ಆರ್.ಅಶೋಕ, ನಿರಂಜನಾನಂದಪುರಿ ಸ್ವಾಮಿ, ಸಚಿವ ವಿ.ಸೋಮಣ್ಣ, ಸಂಸದ ತೇಜಸ್ವಿಸೂರ್ಯ, ಸಚಿವ ಸುಧಾಕರ್ ಇದ್ದಾರೆ

> ಬೆಂದಕಾಳೂರು ಬೆಂಗಳೂರು ಮಹಾನಗರವಾಗಿ, ಬೃಹತ್ ಬೆಂಗಳೂರು ಆಗಿ ಬೆಳೆದಿದೆ. ನಗರಕ್ಕೆ ಹೊಸ ನೋಟ ಕೊಟ್ಟು ಸಮಗ್ರ ಅಭಿವೃದ್ಧಿಗೆ ಕ್ರಮ ಕೈಗೊಳ್ಳುತ್ತೇವೆ
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಡಯಾಲಿಸಿಸ್ ಆಸ್ಪತ್ರೆ ಉದ್ಘಾಟನೆ

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣ ನವೀಕರಣ, ಪಂತರಪಾಳ್ಯದಲ್ಲಿ 150 ಹಾಸಿಗೆಗಳ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ನಾಯಂಡಹಳ್ಳಿಯ ವಾರ್ಡ್ ಕಚೇರಿ, ಪಂತರಪಾಳ್ಯದಲ್ಲಿ ಶಾಲಾ ಕಟ್ಟಡ, ನಾಗರಭಾವಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಆರ್.ಕೆ.ಉರ್ದು ಶಾಲೆಗಳಿಗೆ ಶಿಲಾನ್ಯಾಸವನ್ನು ಮುಖ್ಯಮಂತ್ರಿ ನೆರವೇರಿಸಿದರು.

ಕ್ರಾಂತಿವೀರ ಸಂಗೊಳ್ಳಿರಾಯಣ್ಣ ಡಯಾಲಿಸಿಸ್ ಆಸ್ಪತ್ರೆ, ಉದ್ಯಾನವನ ಹಾಗೂ ಸ್ಕೇಟಿಂಗ್ ಟ್ರ್ಯಾಕ್ ಉದ್ಘಾಟಿಸಿದರು. ಸಂಗೊಳ್ಳಿ ರಾಯಣ್ಣ ಪುತ್ಥಳಿಯನ್ನು ಅನಾವರಣಗೊಳಿಸಿದರು.

ಅಗ್ರಹಾರ ದಾಸರಹಳ್ಳಿ ವಾರ್ಡ್‌ನಲ್ಲಿ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜಿನ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

'ಬೆಂಗಳೂರು ಆರೋಗ್ಯ ಸೇವೆಗೆ ಪ್ರತ್ಯೇಕ ಪ್ರಾಧಿಕಾರ ರಚನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ರಾಜಧಾನಿಯಲ್ಲಿ ಎಲ್ಲ ಆರೋಗ್ಯ ಸೇವೆಗಳನ್ನು ಒಂದೇ ವ್ಯವಸ್ಥೆಯಡಿ ಒದಗಿಸುವ ಚಿಂತನೆ ನಡೆದಿದ್ದು, ಇದಕ್ಕಾಗಿ ಪ್ರತ್ಯೇಕ ಪ್ರಾಧಿಕಾರ ರಚಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದರು.

'108 ಆರೋಗ್ಯ ಕವಚ' ಯೋಜನೆಯಡಿ ಆರೋಗ್ಯ ಇಲಾಖೆ ಖರೀದಿಸಿರುವ ಅತ್ಯಾಧುನಿಕ ಜೀವ ರಕ್ಷಣಾ ವ್ಯವಸ್ಥೆಯುಳ್ಳ 120 ಆಂಬುಲೆನ್ಸ್‌ಗಳ ಸೇವೆಗೆ ವಿಧಾನಸೌಧದ ಮುಂಭಾಗ ಭಾನುವಾರ ನಡೆದ ಸಮಾರಂಭದಲ್ಲಿ ಚಾಲನೆ ನೀಡಿ ಅವರು ಮಾತನಾಡಿದರು.

ಬೆಂಗಳೂರು ನಗರದಲ್ಲಿ ಜನ ಸಾಂದ್ರತೆ ಅಧಿಕವಾಗಿದೆ. ಇಲ್ಲಿ ಎಲ್ಲ ಆರೋಗ್ಯ ಸೇವೆಗಳೂ ಒಂದೇ ವ್ಯವಸ್ಥೆಯಡಿ ದೊರಕಿದರೆ ಜನರಿಗೆ ಅನುಕೂಲವಾಗುತ್ತದೆ ಎಂದರು.

ಪ್ರತ್ಯೇಕ ಸಿಬ್ಬಂದಿ ಬೇಕಿದೆ: ಸಮುದಾಯ ಆರೋಗ್ಯ ಸೇವೆಯನ್ನು ಇನ್ನಷ್ಟು ಬಲಗೊಳಿಸುವುದು ಅನಿವಾರ್ಯ ಎಂಬುದು ಕೋವಿಡ್ ಬಿಕ್ಕಟ್ಟಿನಿಂದ ಅರಿವಿಗೆ ಬಂದಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಸಮುದಾಯ ಆರೋಗ್ಯ ಸೇವೆಗೆ ಪ್ರತ್ಯೇಕ ವೃಂದವನ್ನೇ ರೂಪಿಸಬೇಕು ಎಂದು ಮುಖ್ಯಮಂತ್ರಿ ಹೇಳಿದರು.

ಸಮುದಾಯ ಆರೋಗ್ಯ ಸೇವೆಯ ಡಿಪ್ಲೊಮಾ ಕೋರ್ಸ್ ಆರಂಭಿಸಬೇಕು. ಈ ಶಿಕ್ಷಣ ಪಡೆದವರನ್ನೇ ಪ್ರತ್ಯೇಕ ವೃಂದದಲ್ಲಿ ನೇಮಕ ಮಾಡಬೇಕು ಎಂದರು.

ಆರೋಗ್ಯ ಇಲಾಖೆಯ ಆಂಬುಲೆನ್ಸ್ ಸೇವೆ ಹಿಂದಿನಿಂದಲೂ ಇತ್ತು. ಆದರೆ, ಈಗ ಅದರ ಸ್ವರೂಪ ಬದಲಾಗಿದೆ. ಹಿಂದೆ ಆಂಬುಲೆನ್ಸ್‌ಗಳನ್ನು ರೋಗಿಗಳ ಸಾಗಾಟಕ್ಕೆ ಮಾತ್ರ ಬಳಸಲಾಗುತ್ತಿತ್ತು. ಈಗ ಅದರಲ್ಲೇ ಚಿಕಿತ್ಸೆ ನೀಡುವ ವ್ಯವಸ್ಥೆಯೂ ಇದೆ. ಆಲಸ್ಯ, ಬೇಜವಾಬ್ದಾರಿತನ ಇಲ್ಲದೆ ಜನರಿಗೆ ಸೇವೆ ನೀಡುವುದನ್ನು ಆಂಬುಲೆನ್ಸ್ ಸಿಬ್ಬಂದಿ ಮೈಗೂಡಿಸಿಕೊಳ್ಳಬೇಕು ಎಂದು ಬೊಮ್ಮಾಯಿ ಸಲಹೆ ನೀಡಿದರು.

'ಆರೋಗ್ಯ ಸೇವೆಗಳಲ್ಲಿ ಇರುವ ಪ್ರಾದೇಶಿಕ ಅಸಮಾನತೆ ತೊಡೆದು ಹಾಕಲುನಮ್ಮಸರ್ಕಾರಕೆಲಸಮಾಡಲಿದೆ. ಕಲ್ಯಾಣ ಕರ್ನಾಟಕದ ಭಾಗದಲ್ಲಿ 10,000 ಜನರಿಗೆ ಒಂದು ಹಾಸಿಗೆ ಮಾತ್ರ ಲಭ್ಯವಿದೆ. ರೋಗಿಗಳು ಮತ್ತು ವೈದ್ಯರ ಅನುಪಾತದಲ್ಲೂ ಅಸಮಾನತೆ ಇದೆ. ಈ ಎಲ್ಲ ಸಮಸ್ಯೆಗಳಿಗೂ ಪರಿಹಾರ ದೊರಕಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು' ಎಂದರು.

ಜಿಪಿಎಸ್ ಅಳವಡಿಕೆ: ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಮಾತನಾಡಿ, 'ಆರೋಗ್ಯ ಕವಚ ಯೋಜನೆಯಲ್ಲಿ 710 ಆಂಬುಲೆನ್ಸ್‌ಗಳು ಇದ್ದವು. ಈಗ 120 ಆಂಬುಲೆನ್ಸ್‌ಗಳ ಸೇರ್ಪಡೆಯಾಗಿದೆ. ಎಲ್ಲ ಆಂಬುಲೆನ್ಸ್‌ಗಳಿಗೂ ಜಿಪಿಎಸ್ ಅಳವಡಿಸಿ, ನಿಗಾ ಇರಿಸುವ ವ್ಯವಸ್ಥೆ ಮಾಡಲಾಗುವುದು' ಎಂದರು.

ಈಗ ಪ್ರತಿ ಒಂದು ಲಕ್ಷ ಜನರಿಗೆ ಒಂದು ಆಂಬುಲೆನ್ಸ್ ಇದೆ. ಮುಂದಿನ ದಿನಗಳಲ್ಲಿ 40,000 ದಿಂದ 50,000 ಜನರಿಗೆ ಒಂದು ಆಂಬುಲೆನ್ಸ್ ಒದಗಿಸುವ ಗುರಿ ಇದೆ ಎಂದು ತಿಳಿಸಿದರು.

ಸಚಿವರಾದ ಬಿ. ಶ್ರೀರಾಮುಲು, ಎಸ್.ಟಿ. ಸೋಮಶೇಖರ್, ಬೈರತಿ ಬಸವರಾಜ, ಮುನಿರತ್ನ, ಸಂಸದ ಪಿ.ಸಿ. ಮೋಹನ್, ಯಲಹಂಕ ಶಾಸಕ ಎಸ್. ಆರ್. ವಿಶ್ವನಾಥ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಮತ್ತು ಆಯುಕ್ತ ಡಾ.ಕೆ.ವಿ. ತ್ರಿಲೋಕಚಂದ್ರ ಇದ್ದರು.

ಆರೋಗ್ಯ ಕವಚ ಯೋಜನೆಯಡಿ 120 ಹೊಸ ಆಂಬುಲೆನ್ಸ್ ಸೇವೆಗೆ ಭಾನುವಾರ ಚಾಲನೆ ನೀಡಿದ ಬಳಿಕ ಆಂಬುಲೆನ್ಸ್‌ಗಳು ವಿಧಾನಸೌಧದ ಮುಂಭಾಗದಲ್ಲಿ ಸಾಗಿ ಬರುತ್ತಿರುವುದು –ಪ್ರಜಾವಾಣಿ ಚಿತ್ರ

ಸಚಿವ ಸುಧಾಕರ್ ಕಾಲೆಳೆದ ಸಿಎಂ

'ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರು ಸ್ವತಃ ವೈದ್ಯರಾಗಿರುವುದರಿಂದ ಆರೋಗ್ಯ ಇಲಾಖೆ ಮಾತ್ರವಲ್ಲ ಇಡೀ ಆರೋಗ್ಯ ಕ್ಷೇತ್ರಕ್ಕೆ ಸಹಕಾರಿಯಾಗಿದೆ. ಆರೋಗ್ಯ ಸಚಿವರು ಬುದ್ಧಿವಂತರು. ಬಹಳ ಬುದ್ಧಿವಂತರೂ ನಮಗೆ ಸಮಸ್ಯೆಯಾಗುತ್ತಾರೆ. ಬಜೆಟ್‌ನಲ್ಲಿ ಅವರ ಇಲಾಖೆಗೆ ಹೆಚ್ಚು ಹಣ ಒದಗಿಸಬೇಕಾಗುತ್ತದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮಾಷೆ ಮಾಡಿದರು.

ಸುದ್ದಿ 2 ನಿಮಿಷ

'ಸಿನಿಮಾಗಳಲ್ಲಿ ಸಾರ್ವಕಾಲಿಕ ಸತ್ಯ ಹೇಳಿದ್ದ ಸತ್ಯಜಿತ್ ರೇ'

ಬೆಂಗಳೂರು: 'ಸತ್ಯಜಿಯ್ ರೇ ಅವರು ಭಾರತೀಯ ಸಿನಿಮಾ ರಂಗ ಕಂಡ ವಿಭಿನ್ನವಾದ ರಾಜಕೀಯ ಮತ್ತು ವೈಚಾರಿಕ ಚಿಂತನೆಯುಳ್ಳ ನಿರ್ದೇಶಕ. ಈ ಕಾರಣಕ್ಕಾಗಿಯೇ ಹಲವು ದಶಕಗಳ ಬಳಿಕವೂ ಅವರ ಚಿತ್ರಗಳು ವರ್ತಮಾನದ ತಲ್ಲಣಗಳಿಗೆ ಸ್ಪಂದಿಸುತ್ತಿವೆ' ಎಂದು ನಿರ್ದೇಶಕ ಬಿ. ಸುರೇಶ್ ಅಭಿಪ್ರಾಯಪಟ್ಟರು.

ಸಹಯಾನ– ಕೆರೆಕೋಣ, ಸಮುದಾಯ– ಕರ್ನಾಟಕ, ಜನಶಕ್ತಿ ಮಾಧ್ಯಮ ಜಂಟಿಯಾಗಿ ಆಯೋಜಿಸಿರುವ 'ಸತ್ಯಜಿತ್ ರೇ –100' ಕುರಿತ ವೆಬಿನಾರ್ ಸರಣಿಯ ಎರಡನೇ ಉಪನ್ಯಾಸ ಮಾಲಿಕೆಯಲ್ಲಿ ಭಾನುವಾರ ಅವರು ಮಾತನಾಡಿದರು.

'ಸತ್ಯಜಿತ್ ರೇ ಅವರ ಸಿನಿಮಾಗಳು ಕೋವಿಡ್ ಕಾಲದ ಬಿಕ್ಕಟ್ಟಿಗೂ ಸ್ಪಂದಿಸುವಂತೆ ಇವೆ. ಲಾಕ್‌ಡೌನ್ ಅವಧಿಯಲ್ಲಿ ಹಸಿವಿನ ಕಾರಣದಿಂದಾಗಿ ನಡೆದುಹೋದ ಅನೇಕ ಘಟನಾವಳಿಗಳು ಹಲವು ದಶಕಗಳ ಹಿಂದೆ ಬಂದ ಅವರ ಸಿನಿಮಾಗಳಲ್ಲಿ ಕಾಣಬಹುದು' ಎಂದರು.

ಒಂದು ಕುಟುಂಬದ ಎರಡು ವ್ಯಕ್ತಿತ್ವಗಳನ್ನು ಪ್ರಧಾನವಾಗಿ ಇರಿಸಿಕೊಂಡು ಲಕ್ಷಾಂತರ ಮಂದಿಯ ಸಾವು, ನೋವು, ಸಂಕಟಗಳಿಗೆ ಹೇಗೆ ದನಿಯಾಗಬಹುದು ಎಂಬುದನ್ನು ಸತ್ಯಜಿತ್ ತೋರಿಸಿದ್ದರು. ಮೇಲ್ನೋಟಕ್ಕೆ ಎಲ್ಲವೂ ಸರಿ ಇರುವಂತಹ ಸಮಾಜದಲ್ಲಿ ಒಳ ಹರಿವಿನೊಳಗೆ ಬೇರೆಯದೇ ಚಿತ್ರಣ ಇರುತ್ತದೆ ಎಂಬುದನ್ನು ಅವರು ತೋರಿಸುತ್ತಿದ್ದರು. ಒಂದು ದೃಶ್ಯದಿಂದ ಮತ್ತೊಂದು ದೃಶ್ಯಕ್ಕೆ ಅವರು ಸಾಗುತ್ತಿದ್ದ ಪರಿಯೇ ಅದ್ಭುತ. ಇದಕ್ಕೆ 'ಆಶಾನಿ ಸಂಕೇತ್' ಚಿತ್ರ ಉತ್ತಮ ಉದಾಹರಣೆ ಎಂದರು.

ಹಲವು ಪ್ರತಿಮೆಗಳ ಸರಣಿಯ ಮೂಲಕ ಕಥನದ ಸರಣಿಯನ್ನು ದಾಟಿಸುವ ಪ್ರಯತ್ನವನ್ನು ಗಿರೀಶ್ ಕಾಸರವಳ್ಳಿ ಅವರ ಚಿತ್ರಗಳಲ್ಲೂ ಕಾಣಬಹುದು. ಸತ್ಯಜಿತ್ ರೇ ಅವರ ಚಿತ್ರಗಳಂತೆಯೇ ಅದ್ಭುತವಾದ ಕಥನ ಸರಣಿಯನ್ನು ಕಾಸರವಳ್ಳಿಯವರ ಚಿತ್ರಗಳಲ್ಲಿಯೂ ನೋಡಬಹುದು ಎಂದು ಸುರೇಶ್ ವಿಶ್ಲೇಷಿಸಿದರು.



ಬೆನ್ಜ್ ಕಾರಿನಲ್ಲಿ ಮೋಜು–ಮಸ್ತಿ; ಎಫ್‌ಐಆರ್ ದಾಖಲು

ಬೆಂಗಳೂರು: ಮರ್ಸಿಡಿಸ್ ಬೆನ್ಜ್ ಕಾರಿನ ಸನ್ ರೂಫ್‌ನಲ್ಲಿ ನಿಂತು ಮೋಜು–ಮಸ್ತಿ ಮಾಡುತ್ತ ಅಪಾಯಕಾರಿ ರೀತಿಯಲ್ಲಿ ಸಂಚರಿಸಿದ್ದವರ ವಿರುದ್ಧ ಸದಾಶಿವನಗರ ಸಂಚಾರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಠಾಣೆ ವ್ಯಾಪ್ತಿಯ ರಸ್ತೆಗಳಲ್ಲಿ ಶನಿವಾರ ರಾತ್ರಿ ಸಂಚರಿಸಿದ್ದ ಕಾರಿನ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಅದನ್ನು ಆಧರಿಸಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕಾರನ್ನೂ ಜಪ್ತಿ ಮಾಡಲಾಗಿದೆ' ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಹೇಳಿದರು.

'ಕಾರನ್ನು ಅಪಾಯಕಾರಿಯಾಗಿ ಚಲಾಯಿಸಿದ್ದ ಯುವಕರು, ಸನ್ ರೂಫ್‌ನಲ್ಲಿ ನಿಂತುಕೊಂಡು ಕೂಗಾಡಿ ಮೋಜು–ಮಸ್ತಿ ಮಾಡುತ್ತಿದ್ದ ದೃಶ್ಯ ವಿಡಿಯೊದಲ್ಲಿತ್ತು. ಇಂಥ ವರ್ತನೆಯಿಂದ ಅಪಘಾತ ಸಂಭವಿಸುವ ಸಾಧ್ಯತೆ ಹೆಚ್ಚಿತ್ತು. ಸಾರ್ವಜನಿಕರ ಜೀವಕ್ಕೂ ಅಪಾಯ ತಂದೊಡ್ಡುವ ಸಂಭವವಿತ್ತು. ವಿಡಿಯೊ ಗಮನಕ್ಕೆ ಬರುತ್ತಿದ್ದಂತೆ ಕಾರನ್ನು ಪತ್ತೆ ಮಾಡಿ ಕ್ರಮ ಜರುಗಿಸಲಾಗಿದೆ' ಎಂದೂ ತಿಳಿಸಿದರು.

ಗಣೇಶೋತ್ಸವ: ಮುಂದುವರಿದ ಗೊಂದಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸಾರ್ವಜನಿಕ ಗಣೇಶೋತ್ಸವ ಆಚರಣೆಗೆ ಸಂಬಂಧಿಸಿದಂತೆ ಭಾನುವಾರವೂ ಗೊಂದಲ ಮುಂದುವರಿಯಿತು. ಮೂರ್ತಿಗಳ ವಿಸರ್ಜನೆಗೆ ಸಮರ್ಪಕ ವ್ಯವಸ್ಥೆ ಕಲ್ಪಿಸಿಲ್ಲ ಎಂದು ಭಕ್ತರು ಅಸಮಾಧಾನ ವ್ಯಕ್ತಪಡಿಸಿದರು.

ಮೂರನೇ ದಿನ ಸಾರ್ವಜನಿಕ ಸ್ಥಳಗಳಲ್ಲಿ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಲು ಗಣೇಶೋತ್ಸವ ಸಮಿತಿಗಳು ಸಿದ್ಧತೆ ಮಾಡಿಕೊಂಡಿದ್ದವು. ಆದರೆ, ಈ ನಿಟ್ಟಿನಲ್ಲಿ ಸಂಘ- ಸಂಸ್ಥೆಗಳಿಗೆ ಅನುಮತಿ ಪಡೆಯುವುದಕ್ಕೆ ಸಂಬಂಧಿಸಿದ ಗೊಂದಲ ಬಗೆಹರಿದಿಲ್ಲ.

'ಮೂರ್ತಿ ವಿಸರ್ಜನೆಗೆ ಆಯಾ ವಾರ್ಡ್‌ನಲ್ಲಿ ಎಲ್ಲೆಲ್ಲಿ ವ್ಯವಸ್ಥೆ ಮಾಡಲಾಗಿದೆ ಎಂಬ ಮಾಹಿತಿಯು ಸರಿಯಾಗಿ ಸಿಗುತ್ತಿಲ್ಲ. ಮೂರ್ತಿಗಳ ಪ್ರತಿಷ್ಠಾಪನೆಯಿಂದ ವಿಸರ್ಜನೆಯವರೆಗೆ ಗೊಂದಲಗಳು ಮುಂದುವರಿದಿವೆ' ಎಂದು ಅನೇಕರು ಅಸಮಾಧಾನ ವ್ಯಕ್ತಪಡಿಸಿದರು.

'ಒಂದು ಬಡಾವಣೆಯಲ್ಲಿ ಸುಮಾರು 50ಕ್ಕೂ ಹೆಚ್ಚು ಮೂರ್ತಿಗಳನ್ನು ಪ್ರತಿಷ್ಠಾಪಿಸುತ್ತಿದ್ದವು. ಈ ಬಾರಿ ಕೇವಲ ಒಂದೆರಡು ಮೂರ್ತಿಗಳನ್ನು ಮಾತ್ರ ಪ್ರತಿಷ್ಠಾಪಿಸುವಂತಾಗಿದೆ' ಎಂದರು.

ಬೆಂಗಳೂರು ಮಹಾನಗರ ಗಣೇಶ ಉತ್ಸವ ಸಮಿತಿಯ ಪದಾಧಿಕಾರಿಗಳ ತಂಡವು ಹೆಬ್ಬಾಳ, ಯಲಹಂಕದ ಅಟ್ಟೂರು ಕೆರೆ ಸೇರಿದಂತೆ ಕೆರೆಗಳನ್ನು ವೀಕ್ಷಿಸಿ ಅಲ್ಲಿನ ವ್ಯವಸ್ಥೆಗಳನ್ನು ಪರಿಶೀಲಿಸಿತು.

ಮುಖ್ಯಮಂತ್ರಿಗೆ ದೂರು: 'ಗಣೇಶೋತ್ಸವ ಆಚರಣೆಗೆ ಅನುಮತಿ ಪಡೆಯುವ ಸಂಬಂಧ ಏಕಗವಾಕ್ಷಿ ವ್ಯವಸ್ಥೆ ರೂಪಿಸಬೇಕು ಎಂದು ಬಿಬಿಎಂಪಿಗೆ ಕೇಳಿದ್ದೆವು. ಈ ನಿಟ್ಟಿನಲ್ಲಿ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ನೇರವಾಗಿ ಮುಖ್ಯಮಂತ್ರಿಗೆ ದೂರು ಸಲ್ಲಿಸಲು ನಿರ್ಧರಿಸಿದ್ದೇವೆ' ಎಂದು ಬೆಂಗಳೂರು ಮಹಾನಗರ ಗಣೇಶ ಉತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ರಾಜು ತಿಳಿಸಿದರು.

'ನಾನಾ ಸಂಘ-ಸಂಸ್ಥೆಗಳು ಶುಕ್ರವಾರದವರೆಗೆ ಗಣೇಶೋತ್ಸವ ನಡೆಸಲು ನಿರ್ಧರಿಸಿವೆ. ರಾಜ್ಯ ಸರ್ಕಾರವು ಸೋಮವಾರದವರೆಗೆ (ಸೆ.20) ಅಗತ್ಯ ವ್ಯವಸ್ಥೆಗಳನ್ನು ಮಾಡಬೇಕು. ಪೊಲೀಸರಾಗಲಿ, ಬಿಬಿಎಂಪಿ ಸಿಬ್ಬಂದಿಯಾಗಲಿ ಗಣೇಶೋತ್ಸವಕ್ಕೆ ಅಡ್ಡಿಪಡಿಸಬಾರದು. ಈ ಬಗ್ಗೆ ಮುಖ್ಯಮಂತ್ರಿಯವರು ಸೂಕ್ತ ಆದೇಶ ನೀಡಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

ನಗರದ ಹಲಸೂರು ಕೆರೆಯಲ್ಲಿ ಭಾನುವಾರ ಗಣೇಶ ಮೂರ್ತಿಯನ್ನು ವಿಸರ್ಜಿಸಲು ಬಂದ ಭಕ್ತರು ಪ್ರಜಾವಾಣಿ ಚಿತ್ರ

ಕೆಎಸ್‌ಎಫ್‌ಎ ಕ್ರೀಡಾಂಗಣದಲ್ಲಿ ರೌಡಿ ಅರವಿಂದ್ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯ (ಕೆಎಸ್‌ಎಫ್‌ಎ) ಕ್ರೀಡಾಂಗಣದಲ್ಲಿ ರೌಡಿ ಅರವಿಂದ್ (27) ಎಂಬಾತನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಭಾನುವಾರ ಕೊಲೆ ಮಾಡಲಾಗಿದೆ.

'ಅಪರಾಧ ಕೃತ್ಯದಲ್ಲಿ ಭಾಗಿಯಾಗಿದ್ದ ಅರವಿಂದ್ ಹೆಸರು, ಭಾರತಿನಗರ ಠಾಣೆಯ ರೌಡಿ ಪಟ್ಟಿಯಲ್ಲಿತ್ತು. ಕೊಲೆ ಬಗ್ಗೆ ಅಶೋಕನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಹಳೇ ವೈಷಮ್ಯದಿಂದಾಗಿ ಎದುರಾಳಿಗಳೇ ಕೃತ್ಯ ಎಸಗಿರುವ ಮಾಹಿತಿ ಇದೆ' ಎಂದು ಪೊಲೀಸರು ಹೇಳಿದರು.

'ಫುಟ್‌ಬಾಲ್ ಆಟಗಾರನಾಗಿದ್ದ ಅರವಿಂದ್, ಸ್ಥಳೀಯ ಯುವಕರನ್ನು ಸೇರಿಸಿಕೊಂಡು ಫುಟ್‌ಬಾಲ್ ತಂಡ ಕಟ್ಟಿಕೊಂಡಿದ್ದ. ಕೆಎಸ್‌ಎಫ್‌ಎ ಕ್ರೀಡಾಂಗಣ ಎದುರಿನ ಬಿಬಿಎಂಪಿ ಮೈದಾನದಲ್ಲಿ ಭಾನುವಾರ ಟೂರ್ನಮೆಂಟ್ ಆಯೋಜಿಸಲಾಗಿತ್ತು. ತಂಡದ ಜೊತೆಯಲ್ಲಿ ಅರವಿಂದ್ ಭಾಗವಹಿಸಿದ್ದ.'

'ಮಧ್ಯಾಹ್ನ 4 ಗಂಟೆ ಸುಮಾರಿಗೆ ಮಾರಕಾಸ್ತ್ರ ಹಿಡಿದು ಮೈದಾನಕ್ಕೆ ನುಗ್ಗಿದ್ದ ನಾಲ್ವರು ದುಷ್ಕರ್ಮಿಗಳು, ಅರವಿಂದ್‌ನನ್ನು ಸುತ್ತುವರೆದು ಹಲ್ಲೆಗೆ ಯತ್ನಿಸಿದ್ದರು. ಅವರಿಂದ ತಪ್ಪಿಸಿಕೊಂಡಿದ್ದ ಅರವಿಂದ್, ಸಮೀಪದಲ್ಲಿದ್ದ ಫುಟ್‌ಬಾಲ್ ಕ್ರೀಡಾಂಗಣದ ಒಳಗೆ ಓಡಿ ಹೋಗಿದ್ದ. ರೆಫರಿಗಳ ಕೊಠಡಿಯೊಳಗೆ ಸೇರಿಕೊಂಡು, ಒಳಗಿನಿಂದ ಬಾಗಿಲು ಲಾಕ್ ಮಾಡಿಕೊಂಡಿದ್ದ' ಎಂದೂ ಪೊಲೀಸರು ತಿಳಿಸಿದರು.

ಅರವಿಂದ್

'ಬಾಗಿಲಿನ ಲಾಕ್ ಮುರಿದು ಕೊಠಡಿಯೊಳಗೆ ನುಗ್ಗಿದ್ದ ಆರೋಪಿಗಳು, ಅರವಿಂದ್ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿರುವುದು ಗೊತ್ತಾಗಿದೆ. ತೀವ್ರ ರಕ್ತಸ್ರಾವದಿಂದ ಅರವಿಂದ್ ಸ್ಥಳದಲ್ಲೇ ಮೃತಪಟ್ಟಿದ್ದಾನೆ' ಎಂದೂ ಹೇಳಿದರು.

ಕೊಲೆ ಬಗ್ಗೆ ಪ್ರತಿಕ್ರಿಯಿಸಿದ ಕೇಂದ್ರ ವಿಭಾಗದ ಡಿಸಿಪಿ ಎಂ.ಎನ್. ಅನುಚೇತ್, 'ಘಟನಾ ಸ್ಥಳ ಹಾಗೂ ಸುತ್ತಮುತ್ತಲಿನ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಸಂಗ್ರಹಿಸಿ ಪರಿಶೀಲಿಸಲಾಗುತ್ತಿದೆ. ಆರೋಪಿಗಳ ಪತ್ತೆಗಾಗಿ ಎರಡು ವಿಶೇಷ ತಂಡಗಳನ್ನು ರಚಿಸಲಾಗಿದೆ' ಎಂದರು.

ಜಾಮೀನು ಮೇಲೆ ಹೊರಬಂದಿದ್ದ: '2014ರಿಂದಲೂ ಅಪರಾಧ ಕೃತ್ಯ ಎಸಗುತ್ತಿದ್ದ ಅರವಿಂದ್‌ನನ್ನು ಗೂಂಡಾ ಕಾಯ್ದೆಯಡಿ ಬಂಧಿಸಿ ಜೈಲಿಗೆ ಕಳುಹಿಸಲಾಗಿತ್ತು. ಇತ್ತೀಚೆಗಷ್ಟೇ ಆತ ಜಾಮೀನು ಮೇಲೆ ಹೊರಬಂದಿದ್ದ' ಎಂದೂ ಪೊಲೀಸರು ತಿಳಿಸಿದರು.

ತಾಂತ್ರಿಕ ದೋಷ: ಪಾರ್ಕಿಂಗ್ ಜಾಗಕ್ಕೆ ಮರಳಿದ ವಿಮಾನ

ಬೆಂಗಳೂರು: ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹೈದರಾಬಾದ್‌ಗೆ ಹೊರಡಲು ಸಿದ್ಧವಾಗಿದ್ದ ವಿಮಾನ, ತಾಂತ್ರಿಕ ದೋಷದಿಂದಾಗಿ ರನ್‌ವೇಯಿಂದ ಪಾರ್ಕಿಂಗ್ ಜಾಗಕ್ಕೆ ಮರಳಿದ ಘಟನೆ ಭಾನುವಾರ ನಡೆದಿದೆ.

ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಸೇರಿದಂತೆ ಹಲವರು ವಿಮಾನದಲ್ಲಿ ಪ್ರಯಾಣಿಸುತ್ತಿದ್ದರು ಎಂದು ಗೊತ್ತಾಗಿದೆ.

'ಏರ್ ಇಂಡಿಯಾ 9ಐ 517 ವಿಮಾನವು ಸಂಜೆ 6.45ಕ್ಕೆ ನಿಲ್ದಾಣದಿಂದ ಟೇಕಾಫ್ ಆಗಬೇಕಿತ್ತು. ರಾತ್ರಿ 8.15ಕ್ಕೆ ಹೈದರಾಬಾದ್ ತಲುಪಬೇಕಿತ್ತು. ಟೇಕಾಫ್‌ಗಾಗಿ ರನ್‌ವೇಯಲ್ಲಿ ವಿಮಾನ ನಿಲ್ಲಿಸಿದ್ದಾಗ, ಎಂಜಿನ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿತ್ತು. ಮುಂಜಾಗ್ರತಾ ಕ್ರಮವಾಗಿ ವಿಮಾನವನ್ನು ವಾಪಸು ನಿಲ್ದಾಣದ ಪಾರ್ಕಿಂಗ್ ಜಾಗಕ್ಕೆ ತಂದು ನಿಲ್ಲಿಸಲಾಯಿತು' ಎಂದು ಮೂಲಗಳು ಹೇಳಿವೆ.

ವಿಮಾನದಲ್ಲಿ ಕುಳಿತಿದ್ದ ಶೋಭಾ ಕರಂದ್ಲಾಜೆ ಬಳಿ ಹೋಗಿದ್ದ ಅಧಿಕಾರಿಗಳು, 'ನಿಮಗೆ ಪ್ರತ್ಯೇಕ ವಿಮಾನದ ವ್ಯವಸ್ಥೆ ಮಾಡಲಾಗುವುದು. ಸದ್ಯ ವಿಮಾನದಿಂದ ಕೆಳಗೆ ಇಳಿದು, ಅತೀ ಗಣ್ಯರ ಕೊಠಡಿಯಲ್ಲಿ ವಿಶ್ರಾಂತಿ ಪಡೆಯಿರಿ' ಎಂದಿದ್ದರು.

ವಿಮಾನದಿಂದ ಇಳಿಯಲು ಒಪ್ಪದ ಶೋಭಾ ಕರಂದ್ಲಾಜೆ, 'ವಿಮಾನದಲ್ಲಿ ಪ್ರಯಾಣಿಸುವ ಎಲ್ಲರೂ ಸಮಾನರು. ಯಾವುದೇ ತಾರತಮ್ಯ ಮಾಡಬೇಡಿ. ಎಲ್ಲರನ್ನೂ ಸುರಕ್ಷಿತವಾಗಿ ಕಳುಹಿಸಲು ಪ್ರತ್ಯೇಕ ವಿಮಾನದ ವ್ಯವಸ್ಥೆ ಮಾಡಿ. ಎಲ್ಲರೂ ಹೊರಟ ನಂತರವೇ ನಾನು ಕೊನೆಯದಾಗಿ ವಿಮಾನದಿಂದ ಇಳಿಯುವೆ' ಎಂದರು.

ಕೆಲ ಹೊತ್ತಿನ ನಂತರ, ಪ್ರತ್ಯೇಕ ವಿಮಾನದ ಮೂಲಕ ಪ್ರಯಾಣಿಕರನ್ನು ಹೈದಾರಾಬಾದ್‌ಗೆ ಕಳುಹಿಸಲಾಯಿತೆಂದು ಮೂಲಗಳು ಹೇಳಿವೆ.

ಅನಿಲ ಸೋರಿಕೆಯಿಂದ ಬೆಂಕಿ; ಗಾಯ

ಬೆಂಗಳೂರು: ಕಲಾಸಿಪಾಳ್ಯ ಠಾಣೆ ವ್ಯಾಪ್ತಿಯ ಮಳಿಗೆಯೊಂದರಲ್ಲಿ ಅಡುಗೆ ಅನಿಲ ಸೋರಿಕೆಯಾಗಿ ಬೆಂಕಿ ಅವಘಡ ಸಂಭವಿಸಿದ್ದು, ಇಬ್ಬರು ಬಾಲಕರು ಗಾಯಗೊಂಡಿದ್ದಾರೆ.

ಕುಂಬಾರ ಓಣಿಯಲ್ಲಿರುವ 'ಮನ್ಸೂರ್ ಎಂಟರ್‌ಪ್ರೈಸಸ್' ವಾಣಿಜ್ಯ ಉಪಯೋಗಿ ಅಡುಗೆ ಅನಿಲ ಸಿಲಿಂಡರ್ ಮಾರಾಟ ಮಳಿಗೆಯಲ್ಲಿ ಶನಿವಾರ ಮಧ್ಯಾಹ್ನ ಈ ಅವಘಡ ಸಂಭವಿಸಿದೆ. ಗಾಯಗೊಂಡಿರುವ ಬಾಲಕರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಮಳಿಗೆ ಮಾಲೀಕ ಇಮ್ರಾನ್ ವಿರುದ್ಧ ಪ್ರಕರಣ ದಾಖಲಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

EDUCATIONAL

Admission

DIRECT FINAL/ REGULAR:Ph.D/ M.Phil/LL.B/ (3/5 Years)/ B.Tech/ Diploma/BAMS/BHMS/ NURSING/ B.Pharma/ D.Pharma/B.Sc (MLT/ Audiology/ Ophthalmology/ Orthopedics/ Renal Etc.) GOVT Recognised, Limited Seats, Join Immediately, Asha Institute,Bangalore: 9448460103

BUILDERS ESSENTIAL

Water Proofing

WE-FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

RENTAL PROPERTIES

Accommodation Available

Commercial

INDIRA NAGAR OFFICE SPACE AVAILABLE 1200 sft Second Floor, Opp airtel office, First stage, Canara Bank Road. 9845680613

JOB OPPORTUNITIES

Accounts & Finance

B.COM FRESHERS (Female) required for CA's office in Shankarapuram. Whatsapp you resume to 9845608707. Salary Rs. 7 K

Multiple Vacancy

REQUIRED IMMEDIATELY HR, Administration, Manager, Accounts, Supervisor, technical Mechanical, Electronics, Electrical, Computer Engineers -7676760299/ 7676760399

Marketing & Sales

WANTED MARKETING Executives For Private Limited Company Bangalore, Age Below 40 Years with Good Communication Skill Fluent In English, Kannada, Hindi Contact: 9108458798/ 23384085

CONNECT

Notice for Storage and Sale of 100 % Water Soluble Mixture of Fertilizers for use in Agriculture Please refer to the Order-Requirement No. 2900 (E) Dated 24th October 2015 in FCO 1985

Stalwart Agronomics Pvt Ltd., is pleased to inform the General public & the Farmers in particular that with reference to the Order No.2900 (E) dated 24th October 2015 issued by Ministry of Agriculture and Farmers We fare and amendment(s) thereafter, that we Import, Store & Sell following 100 % Water Soluble Fertilizers in the state of Karnataka

S. No	Composition	30-10-10	10-50-10	10-10-40	6-36-36	17-17-17	00-06-42	21-07-08	06-12-36	17-44-00
1	Total Nitrogen per cent by weight,. minimum	30.0	10.0	10.0	6.0	17.0	00	21	6.0	17
2	Water Soluble Phosphate as P205) per cent by weight., minimum.	10.0	50.0	10.0	36.0	17.0	6.0	7	12.0	44
3	Water soluble potash, per cent by weight, minimum.	10.0	10.0	40.0	36.0	17.0	42.0	8	36.0	00

Other specifications of the above NPK fertilizers

1.Moisture -0.5%	2.Total Chloride -1.5%	3.Matter Insoluble in water – 0.5%	4.Sodium as NaCl – 0.5%
5.Lead as Po-0.003%	6.Cadmium as Cd-0.0025%	7. Arsenic as As-0.01%	

STALWART AGRONOMICS PRIVATE LIMITED
A.O: 2/36 Duraisamy Layout, Pallapatti, Salem -636 009.Tamilnadu India.
B.O: 4G Floor Chiguru Nilaya, Aditya Enclave, Vijayapura Road, Devanhally, Bengaluru-562110 Karnataka
Customer care No: +91 70948 72972 Email: enquiry@stalwartagro.com web: www.stalwartagro.com

BUSINESS

Business Offers

Finance

NRI'S INVESTMENT And Finance AvailableOn LowInterest AgainstProperties, Land& Building,Sites,Flats, Converted& AgricultureLandsCall: 7411265189

PERSONAL

Change of Name

I, ARPITA, residing at Flat No.B-3 001,White House Apartment, 6th Main, 15th Cross, R.T.Nagar, Bengaluru-560032 havechanged my name to ARPITA PANIGRAHI, vide affidavit dated 31-08-2021before Notary SIVAKUMARA.M.N.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD
SELL, RENT, BUY PROPERTY THROUGH PROPERTY CLASSIFIEDS ADS IN DECCAN HERALD & PRAJAVANI NEWS PAPER
ಪ್ರಜಾವಾಣಿ ಕ್ಲಾಸಿಫೈಡ್ಸ್
BOOK YOUR CLASSIFIEDS ADS ONLINE WWW.DHCLASSIFIEDS.COM
FOR MORE INFORMATION CONTACT 9880856233 | 9886213331
Email: santhoshkumar@deccanherald.co.in

‘₹117 ಕೋಟಿ ಹೆಚ್ಚುವರಿ ಸೇರಿ ಬಾಕಿ ಮೊತ್ತ ಬಿಡುಗಡೆ’

ಉದ್ಯೋಗ ಖಾತ್ರಿ ಯೋಜನೆಗೆ ₹959 ಕೋಟಿ: ಈಶ್ವರಪ್ಪ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ‘ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿ ರಾಜ್ಯಕ್ಕೆ ಬರಬೇಕಾದ ಬಾಕಿ ಸೇರಿದಂತೆ ಕೇಂದ್ರ ಸರ್ಕಾರ ₹ 959 ಕೋಟಿ ಬಿಡುಗಡೆ ಮಾಡಿದ್ದು, ಇದರಲ್ಲಿ ₹ 117 ಕೋಟಿ ಹೆಚ್ಚುವರಿ ಹಣವೂ ಸೇರಿದೆ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದರು.

ಖಾಸಗಿ ಭೇಟಿಗೆ ಬಳ್ಳಾರಿಗೆ ಆಗಮಿಸಿದ್ದ ಅವರು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ‘ರಾಜ್ಯಕ್ಕೆ ಉದ್ಯೋಗ ಖಾತ್ರಿ ಯೋಜನೆ ಬಾಕಿ ಬರಬೇಕಿತ್ತು. ಈ ಸಂಬಂಧ ಕೇಂದ್ರಕ್ಕೆ ಪತ್ರ ಬರೆದಿದ್ದೆ. ಇದೇ 7ರಂದು ದೆಹಲಿಗೆ ತೆರಳಿದ್ದೆ. ಗ್ರಾಮೀಣಾಭಿವೃದ್ಧಿ ಸಚಿವ ಗಿರಿರಾಜ್ ಸಿಂಗ್ ಅವರನ್ನು ಕಂಡು ಹಣ ಬಿಡುಗಡೆ ಮನವಿ ಮಾಡಿದ್ದೆ’ ಎಂದು ತಿಳಿಸಿದರು.

‘ಕೇಂದ್ರ ನಮ್ಮ ಮನವಿಗೆ ಸ್ಪಂದಿಸಿದೆ. ಬಾಕಿ ಮೊತ್ತವನ್ನೂ ಪಾವತಿಸಿದೆ. ರಾಜ್ಯಕ್ಕೆ 13 ಕೋಟಿ ಮಾನವ ದಿನಗಳ ಗುರಿ ಕೊಡಲಾಗಿತ್ತು. ಈಗಾಗಲೇ 9 ಕೋಟಿ ಮಾನವ ದಿನಗಳ ಗುರಿ ಸಾಧಿಸಲಾಗಿದೆ. ಮತ್ತೆ 7 ಕೋಟಿ ಹೆಚ್ಚುವರಿ ಮಾನವ ದಿನಕ್ಕೆ ಬೇಡಿಕೆ ಇಡಲಾಗಿದೆ. ನರೇಗಾದಲ್ಲಿ ರಾಜ್ಯ ದೇಶದಲ್ಲಿಯೇ ನಂ.1 ಸ್ಥಾನದಲ್ಲಿದೆ’ ಎಂದು ಹೇಳಿದರು.

‘ನರೇಗಾ ಯೋಜನೆ ಬಳಸಿಕೊಂಡು ರಾಜ್ಯದ ಕೆರೆಗಳ ಹೂಳು ತೆಗೆಯಲಾಗುತ್ತಿದೆ. ಕೆರೆಗಳ ಒತ್ತುವರಿಗೆ ಕ್ರಮ ಕೈಗೊಳ್ಳಲಾಗುತ್ತಿದ್ದು, ಮಿಕ್ಕ ಒಂದೂವರೆ ವರ್ಷದಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆ ವ್ಯಾಪ್ತಿಯಲ್ಲಿರುವ ಎಲ್ಲ 28 ಸಾವಿರ ಕೆರೆಗಳ ಹೂಳು ತೆಗೆಯಲಾಗುವುದು’ ಎಂದು ಈಶ್ವರಪ್ಪ ಸ್ಪಷ್ಟಪಡಿಸಿದರು.

ನರೇಗಾ ಯೋಜನೆ ಬಳಸಿ ಸಣ್ಣಪುಟ್ಟ ರೈತರು ತೋಟಗಳನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ತಮ್ಮದೇ ತೋಟದಲ್ಲಿ ಕೆಲಸ ಮಾಡಿದರೂ ಕೂಲಿ ಪಾವತಿಸಲಾಗುತ್ತಿದೆ ಎಂದರು.

ವರದಿ ಬಂದ ಬಳಿಕ ಕ್ರಮ

ಬಳ್ಳಾರಿ: ಗ್ರಾಮೀಣಾಭಿವೃದ್ಧಿ ಇಲಾಖೆಯ ಹಣವನ್ನು ಬೇನಾಮಿ ಖಾತೆಯಲ್ಲಿಟ್ಟಿದ್ದ ಪ್ರಕರಣ ಕುರಿತು ವಿಚಾರಣೆ ನಡೆಯುತ್ತಿದ್ದು, ವರದಿ ಬಂದ ಬಳಿಕ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಈಶ್ವರಪ್ಪ ಹೇಳಿದರು. ಎಚ್.ಕೆ.ಪಾಟೀಲರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದ ಸಂದರ್ಭದಲ್ಲಿ ಬೇನಾಮಿ ಖಾತೆಯಲ್ಲಿ ಹಣ ಇಡಲಾಗಿತ್ತು ಎಂಬ ಪ್ರಕರಣ ಕುರಿತು ಉನ್ನತ ಅಧಿಕಾರಿ ನೇತೃತ್ವದ ಸಮಿತಿ ವಿಚಾರಣೆ ನಡೆಸುತ್ತಿದೆ. ಅಲ್ಲದೆ, ವಿಧಾನ ಪರಿಷತ್ ಸದಸ್ಯರನ್ನು ಒಳಗೊಂಡ ಸಮಿತಿಯೂ ಪರಿಶೀಲಿಸುತ್ತಿದೆ ಎಂದರು.

ಎಫ್‌ಡಿಎ 1:3 ಪಟ್ಟಿ ಸುತ್ತ ಅನುಮಾನ!

ಬೆಂಗಳೂರು: ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಹುದ್ದೆಗಳ ಭರ್ತಿಗೆ ಫೆ. 28ರಂದು ನಡೆದಿದ್ದ ಸ್ಪರ್ಧಾತ್ಮಕ ಪರೀಕ್ಷೆಯ ಅರ್ಹತಾ ಪಟ್ಟಿಯನ್ನು ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಪ್ರಕಟಿಸಿದೆ. ಪಟ್ಟಿಯಲ್ಲಿ ಒಂದೇ ಸಮುದಾಯಕ್ಕೆ (ನಾಯ್ಕ್) ಸೇರಿದ 70ಕ್ಕೂ ಹೆಚ್ಚು ಅಭ್ಯರ್ಥಿಗಳ ಹೆಸರಿದ್ದು ಅನುಮಾನಕ್ಕೆ ಕಾರಣವಾಗಿದೆ. ಪಟ್ಟಿ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

1,112 ಹುದ್ದೆಗಳ ಭರ್ತಿಗೆ ಕೆಪಿಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿತ್ತು. ಇದೀಗ, 1: 3 ಅನುಪಾತದಲ್ಲಿ ಅರ್ಹತಾ ಪಟ್ಟಿಯನ್ನು ಬಿಡುಗಡೆ ಮಾಡಲಾಗಿದ್ದು, 3,852 ಮಂದಿ ಆಯ್ಕೆ ಆಗಿದ್ದಾರೆ. ಪಟ್ಟಿಯಲ್ಲಿ ‘ನಾಯ್ಕ್’ ಸಮುದಾಯಕ್ಕೆ ಸೇರಿದ ಅಭ್ಯರ್ಥಿಗಳ ಹೆಸರನ್ನು ಒಂದು ಹೆಸರಿನ ನಡು ನಡುವೆ ಸೇರಿಸಲಾಗಿದೆ.

ಕೆಲ ಅಭ್ಯರ್ಥಿಗಳು ಈ ಬಗ್ಗೆ ಕೆಪಿಎಸ್‌ಸಿಗೆ ಆಕ್ಷೇಪಣೆ ಸಲ್ಲಿಸಲು ನಿರ್ಧರಿಸಿದ್ದಾರೆ. ಈ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಬೇಕು ಎಂದೂ ಆಗ್ರಹಿಸಿದ್ದಾರೆ. ಈ ಸಂಬಂಧ ಪ್ರತಿಕ್ರಿಯೆ ಪಡೆಯಲು ಕೆಪಿಎಸ್‌ಸಿ ಕಾರ್ಯದರ್ಶಿಗೆ ಕರೆ ಮಾಡಿದರೂ ಅವರು ಸಂಪರ್ಕಕ್ಕೆ ಲಭ್ಯರಾಗಲಿಲ್ಲ.

Infosys® Navigate your next

INFOSYS LIMITED

Registered office: No. 44, Electronics City, Hosur Road, Bengaluru, Karnataka 560 100, India.

CIN: L85110KA1981PLC013115
Website: www.infosys.com
Email: investors@infosys.com
Tel: +91 80 2852 0261 / extn 67775
Fax: +91 80 2852 0362

Contact: A.G.S. Manikantha, Company Secretary
Tel: +91 80 4116 7775
Fax: +91 80 2852 0754
E-mail: sharebuyback@infosys.com

POST-BUYBACK PUBLIC ADVERTISEMENT FOR THE ATTENTION OF SHAREHOLDERS OF INFOSYS LIMITED

This post-buyback public advertisement (“**Advertisement**”) is being made in accordance with the Regulation 24(vi) and other applicable provisions of the Securities and Exchange Board of India (Buy-Back of Securities) Regulations, 2018, as amended (“**Buyback Regulations**”) including any statutory modification(s), or re-enactment for the time being in force, regarding completion of the Buyback (as defined below) by Infosys Limited (“**the Company**”) of its own equity shares from the members of the Company (other than the promoters, promoter group and persons in control of the Company).

This Advertisement should be read in conjunction with the public announcement dated June 22, 2021 (“**Public Announcement**”), issued in connection with the Buyback. Unless specifically defined herein, capitalized terms and abbreviations used herein have the same meaning as ascribed to them in the Public Announcement.

1. THE BUYBACK

1.1 The Board of Directors of the Company (hereinafter referred to as “**the Board**”, which expression includes any committee duly constituted by the Board to exercise its powers, and / or the powers conferred by the Board resolution), at its meeting held on April 14, 2021, had, subject to the approval of the members of the Company, by way of a special resolution (“**Special Resolution**”) and subject to the approvals of such statutory, regulatory or governmental authorities as may be required under applicable laws, approved the proposal to buy back its own fully paid-up equity shares of face value of ₹5/- each (“**Equity Shares**”) from the members of the Company (other than the promoters, promoter group and persons in control of the Company) payable in cash, for an amount aggregating up to ₹9,200 crore (Rupees Nine Thousand Two Hundred Crore only) (“**Maximum Buyback Size**”) at a price not exceeding ₹1,750/- (Rupees One Thousand Seven Hundred and Fifty only) per Equity Share (“**Maximum Buyback Price**”), through the open market route through the stock exchanges, in accordance with Companies Act, 2013, as amended, the Companies (Share Capital and Debentures) Rules, 2014, as amended, the Companies (Management and Administration) Rules, 2014, as amended and the Buyback Regulations (the transaction / process herein after referred to as the “**Buyback**”).

1.2 The shareholders’ approval for the Buyback was received on June 19, 2021, the results of which were announced on June 21, 2021.

1.3 The Maximum Buyback Size does not include any expenses or transaction costs incurred or to be incurred for the Buyback, such as, brokerage, filing fees, advisory fees, intermediaries’ fees, public announcement publication expenses, printing and dispatch expenses, applicable taxes such as buyback tax, securities transaction tax, goods and services tax, stamp duty, etc. and other incidental and related expenses (collectively referred to as “**Transaction Costs**”).

1.4 The Buyback commenced on June 25, 2021 and closed on September 8, 2021. Till the date of closure of the Buyback, the Company has utilized 99.9999996% of Maximum Buyback Size (excluding Transaction Costs) with a balance of ₹400.20 (Rupees Four Hundred and Paise Twenty only).

1.5 In view of the fact that the Company has utilized 99.9999996% of the Maximum Buyback Size (excluding Transaction Costs) with a balance of ₹400.20 (Rupees Four Hundred and Paise Twenty only) till September 8, 2021, the Company has decided to close the Buyback on September 8, 2021. Approval of the Buyback Committee for closure of the Buyback was disclosed to the Indian Stock Exchanges (as defined below) on September 8, 2021.

1.6 The total number of Equity Shares bought back under the Buyback is 5,58,07,337.

2. DETAILS OF THE BUYBACK

2.1 The Company bought back a total of 5,58,07,337 Equity Shares (1.31% of the pre-Buyback paid-up Equity Share capital of the Company) and the total amount utilized towards the Buyback is ₹9199,99,99,599.80 (Rupees Nine Thousand One Hundred and Ninety Nine Crore Ninety Nine Lakh Ninety Nine Thousand and Five Hundred Ninety Nine and Paise Eighty only) (excluding Transaction Costs) which represents 99.9999996% of the Maximum Buyback Size. The price at which the Equity Shares were bought back was dependent on the price quoted on BSE Limited and National Stock Exchange of India Limited, collectively referred to as “**Indian Stock Exchanges**”. The highest price at which the Equity Shares were bought back was ₹1,750.00/- per Equity Share while the lowest price was ₹1,538.10/- per Equity Share. The Equity Shares were bought back at a volume weighted average price of ₹1,648.53 per Equity Share. These prices are based on contract notes issued by the Company’s Broker (Kotak Securities Limited) and exclude Transaction Costs, and have been rounded off to two decimal points.

2.2. The payout formalities have been completed as per settlement mechanism with the Indian Stock Exchanges. The Company has extinguished all the Equity Shares purchased under the Buyback i.e. 5,58,07,337 Equity Shares.

2.3 All Equity Shares bought back were in the dematerialized segment from the platform of the Indian Stock Exchanges. As the Buyback was done from the open market through the Indian Stock Exchanges, the identity of members from whom Equity Shares exceeding one per cent of the total Equity Shares was bought in the Buyback is not known.

3. CAPITAL STRUCTURE AND SHAREHOLDING PATTERN

3.1 The capital structure of the Company as on the date of the Public Announcement and as on September 8, 2021 (“**Post-Buyback**”) is set forth below:

Particulars	As on the date of the Public Announcement		Post-Buyback	
	No. of Equity Shares	Amount (₹)	No. of Equity Shares	Amount (₹)
Authorized share capital	4,80,00,00,000	24,00,00,00,000	4,80,00,00,000	24,00,00,00,000
Issued share capital	4,26,12,71,763	21,30,63,58,815	4,20,54,64,426	21,02,73,22,130
Subscribed and fully paid-up share capital	4,26,12,71,763	21,30,63,58,815	4,20,54,64,426	21,02,73,22,130

Note: All the Equity Shares bought back have been extinguished by September 8, 2021.

3.2 The shareholding pattern of the Company as on June 19, 2021 as disclosed in the Public Announcement (“**Pre-Buyback**”) and as on September 8, 2021 (“**Post-Buyback**”) is as follows:

Particulars	No. of Equity Shares	% of Equity Shares	No. of Equity Shares	% of Equity Shares
	Pre-Buyback		Post-Buyback	
Promoters and/or persons who are in control and/or acting in concert (promoter group)	55,16,82,338	12.95	55,16,82,338	13.12
Indian financial institutions	1,280	0.00	3,65,37,82,088	86.88
Banks	16,12,350	0.04		
Mutual funds	55,55,71,906	13.04		
Indian public and corporates	97,90,47,989	22.98		
Foreign institutional investors	1,40,76,71,054	33.03		
NRIs	2,91,18,269	0.68		
Foreign nationals and overseas corporate bodies	2,41,138	0.01		
American Depository Shares (ADSs)	73,63,25,439	17.28		
TOTAL	**4,26,12,71,763**	**100.00**	**4,20,54,64,426**	**100.00**

Note: All the Equity Shares bought back have been extinguished by September 8, 2021.

4. MERCHANT BANKER TO THE BUYBACK

kotak® Investment Banking

Kotak Mahindra Capital Company Limited
27BKC, 1st Floor, Plot no. C-27, “G” Block, Bandra Kurla Complex, Bandra (East), Mumbai 400 051
Contact Person : Ganesh Rane
Phone : +91-22-4336 0128
Fax : +91-22-6713 2447
Email : project.infosysbuyback2021@kotak.com
SEBI Registration : INM000008704
Validity Period : Permanent Registration

5. For further details, please refer to the Company’s website (www.infosys.com) and the websites of the Indian Stock Exchanges (i.e. www.bseindia.com and www.nseindia.com)

6. DIRECTORS’ RESPONSIBILITY

As per Regulation 24(i)(a) of the Buyback Regulations, the Board of Directors of the Company, in their capacity as directors, accepts full and final responsibility for all the information contained in this Advertisement and confirms that the information is true, factual and material and does not contain anything misleading. This Advertisement is issued under the authority of the Buyback Committee in terms of the resolution dated September 9, 2021.

For and on behalf of the Board of Directors of Infosys Limited

Sd/-	Sd/-	Sd/-
Salil Parekh	**U.B. Pravin Rao**	**A.G.S. Manikantha**
Chief Executive Officer and Managing Director	Chief Operating Officer and Whole-time Director	Company Secretary
DIN: 01876159	DIN: 06782450	M. No. A21918

Place: Mumbai / Bengaluru
Date: September 9, 2021

ದರ ಕುಸಿತ: ಟೊಮೆಟೊ ರಸ್ತೆ ಪಾಲು

ಪ್ರಜಾವಾಣಿ ವಾರ್ತೆ

ಹಿರಿಯೂರು ತಾಲ್ಲೂಕಿನ ಗುಳಗೊಂಡನಹಳ್ಳಿ ಬಳಿ ಟೊಮೆಟೊ ದರ ಕುಸಿತದಿಂದ ಬೇಸರಗೊಂಡ ರೈತ ಗುರುಸ್ವಾಮಿ ರಸ್ತೆಗೆ ಸುರಿದಿದ್ದಾರೆ

ಗುಳಗೊಂಡನಹಳ್ಳಿ (ಹಿರಿಯೂರು): ಬೀದರ್ ಜಿಲ್ಲೆಯ ರೈತರಿಂದ ಖರೀದಿಸಿದ್ದ ಟೊಮೆಟೊವನ್ನು ಲಾರಿಯಲ್ಲಿ ಒಯ್ಯುತ್ತಿದ್ದ ವರ್ತಕರೊಬ್ಬರು ದರ ಪಾತಾಳಕ್ಕೆ ಕುಸಿದ ಮಾಹಿತಿ ತಿಳಿದು ಹಿರಿಯೂರು ಸಮೀಪ ಟೊಮೆಟೊವನ್ನು ರಸ್ತೆಗೆ ಚೆಲ್ಲಿದರು. ಇನ್ನೊಂದೆಡೆ ಗುಳಗೊಂಡನಹಳ್ಳಿ ರೈತರೊಬ್ಬರು ಎರಡು ಎಕರೆಯಲ್ಲಿ ಬೆಳೆದಿದ್ದ ಟೊಮೆಟೊವನ್ನು ರಸ್ತೆಗೆ ಸುರಿದರು.

ಬೆಂಗಳೂರಿಗೆ ಟೊಮೆಟೊ ಒಯ್ಯುತ್ತಿದ್ದ ವ್ಯಾಪಾರಿ ಅವಿನಾಶ್ ದರ ಕುಸಿತದ ಮಾಹಿತಿ ತಿಳಿಯುತ್ತಿದ್ದಂತೆ, ಬೀದರ್–ಶ್ರೀರಂಗಪಟ್ಟಣ ಹೆದ್ದಾರಿಯಲ್ಲಿ ಗುಳಗೊಂಡನಹಳ್ಳಿ ಬಳಿ 120 ಬಾಕ್ಸ್‌ಗಳಲ್ಲಿದ್ದ ಟೊಮೆಟೊವನ್ನು ರಸ್ತೆಗೆ ಸುರಿದಿದ್ದಾರೆ. ವಿಡಿಯೊ ಎಲ್ಲೆಡೆ ಹರಿದಾಡುತ್ತಿದೆ.

‘ಬಾಕ್ಸ್ ಟೊಮೆಟೊಗೆ ₹50 ರಂತೆ ಖರೀದಿಸಿದ್ದೇನೆ. ಬೀದರ್‌ನಿಂದ ಬೆಂಗಳೂರಿಗೆ ಒಂದು ಬಾಕ್ಸ್ ಸಾಗಣೆಗೆ ₹100 ಬಾಡಿಗೆ ಕೊಡಬೇಕು. ಲಾರಿ ಬಾಡಿಗೆ ₹ 42 ಸಾವಿರ ಕೊಡಬೇಕಿದೆ. ಬೆಂಗಳೂರಿಗೆ ಒಯ್ದರೆ ಅರ್ಧ ಬಾಡಿಗೆಯೂ ಬರುವುದಿಲ್ಲ. ಹೀಗಾಗಿ ಇಲ್ಲಿಯೇ ಸುರಿದಿದ್ದೇನೆ’ ಎಂದು ಅವಿನಾಶ್ ಅಳಲು ತೋಡಿಕೊಂಡರು.

ಗುಳಗೊಂಡನಹಳ್ಳಿಯ ರೈತ ಗುರುಸ್ವಾಮಿ ಬೆಲೆ ಕುಸಿತದಿಂದ 3 ಕ್ವಿಂಟಲ್ ಟೊಮೆಟೊವನ್ನು ಬೀದರ್–ಶ್ರೀರಂಗಪಟ್ಟಣ ಹೆದ್ದಾರಿ ಬದಿಯಲ್ಲಿ ಸುರಿದಿದ್ದಾರೆ.

‘ಎರಡು ಎಕರೆಯಲ್ಲಿ ₹ 1.20 ಲಕ್ಷ ಖರ್ಚು ಮಾಡಿ ಟೊಮೆಟೊ ಬೆಳೆದಿದ್ದೆ. ಹಿರಿಯೂರು ಮಾರುಕಟ್ಟೆಯಲ್ಲಿ 22 ಕೆ.ಜಿ. ತೂಕದ ಚೀಲಕ್ಕೆ ₹ 50– ₹ 60 ಇದೆ. ಒಂದು ಚೀಲ ಮಾರುಕಟ್ಟೆಗೆ ಸಾಗಿಸಲು ₹ 40 ಖರ್ಚಾಗುತ್ತದೆ. ಬೆಲೆ ಇಲ್ಲದೇ ರಸ್ತೆಗೆ ಸುರಿದಿದ್ದೇನೆ’ ಎಂದು ಗುರುಸ್ವಾಮಿ ‘ಪ್ರಜಾವಾಣಿ’ಗೆ ತಿಳಿಸಿದರು.

ಒಳನೋಟ

ಕಣ್ಣಿಗೆ ಕಾಣದ ‘ಕಲ್ಯಾಣ’

ಬೆಂಗಳೂರು: ‘ಕಣ್ಣಿಗೆ ಕಾಣದ ‘ಕಲ್ಯಾಣ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಭಾನುವಾರ (ಸೆ.12) ಪ್ರಕಟವಾದ ‘ಒಳನೋಟ’ ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

‘ಮೂಲ ಸೌಕರ್ಯ ಮರೀಚಿಕೆ’

‘ರಾಜ್ಯದಲ್ಲಿ ಅತಿ ಹೆಚ್ಚು ಅಪೌಷ್ಟಿಕತೆ, ಅನಕ್ಷರತೆ, ಬಾಲ್ಯವಿವಾಹ, ಬಾಲಕಾರ್ಮಿಕ ಪದ್ಧತಿಗಳು ಇರುವುದು ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ. ಮೂಲಸೌಕರ್ಯಗಳಾದ ಶಿಕ್ಷಣ, ನೈರ್ಮಲ್ಯ, ಪೌಷ್ಟಿಕತೆ ಇಲ್ಲಿ ಮರೀಚಿಕೆಯಾಗಿವೆ. ಕಲ್ಯಾಣ ಕರ್ನಾಟಕದಲ್ಲಿ ಶಿಕ್ಷಣಕ್ಕೆ ಒತ್ತು ನೀಡಿ ಪ್ರತ್ಯೇಕ ನೇಮಕಾತಿ ಮಾಡುವ ಭರವಸೆ ಇನ್ನೂ ಬಾಕಿ ಉಳಿದಿರುವುದು ದುರಾದೃಷ್ಟಕರ’.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ.

‘ಕೈಗೆ ಬಂದ ತುತ್ತು ಬಾಯಿಗೆ ಬರುತ್ತಿಲ್ಲ’

‘ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ’ ಎಂಬ ಮಾತು ಕಲ್ಯಾಣ ಕರ್ನಾಟಕದ ಜನರಿಗೆ ಹೆಚ್ಚು ಅನ್ವಯವಾಗುತ್ತದೆ. ಕೋಟ್ಯಂತರ ರೂಪಾಯಿ ಅನುದಾನ ಬಿಡುಗಡೆಯಾದರೂ ಜಿಲ್ಲೆಗಳು ಮಾತ್ರ ಅಭಿವೃದ್ಧಿ ಕಾಣುತ್ತಿಲ್ಲ. ಸರ್ಕಾರದ ಹಣವೆಲ್ಲಾ ಅಧಿಕಾರಿಗಳ ಜೇಬು ಸೇರುತ್ತಿದೆ. ಶಿಕ್ಷಣ ಲಭ್ಯವಾದರೂ ಉದ್ಯೋಗ ಸಿಗುತ್ತಿಲ್ಲ. ನಿರುದ್ಯೋಗ ಸಮಸ್ಯೆಯಿಂದ ಜನ ತತ್ತರಿಸಿದ್ದಾರೆ. ಇನ್ನಾದರೂ ಸರ್ಕಾರ ಎಚ್ಚೆತ್ತುಕೊಳ್ಳಬೇಕು’.

ಹನುಮಂತ ಕಂಚಿಕೇರಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

‘ನಮ್ಮ ಭಾಗದವರೇ ಮುಖ್ಯಮಂತ್ರಿ ಆಗಬೇಕು’

‘ಕಲ್ಯಾಣ ಕರ್ನಾಟಕ ಭಾಗದ ಶಾಸಕರು ಅನುದಾನಕ್ಕಾಗಿ ಭಿಕ್ಷೆ ಬೇಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಈ ಭಾಗದ ಜಿಲ್ಲೆಗಳ ಅಭಿವೃದ್ಧಿಗೆ ಮಂಕು ಕವಿದಿದೆ. ನಮ್ಮ ಜಿಲ್ಲೆಗಳ ಅಭಿವೃದ್ಧಿಯಾಗಬೇಕಾದರೆ ಈ ಭಾಗದ ಸಮರ್ಥ ನಾಯಕರೊಬ್ಬರು ಮುಖ್ಯಮಂತ್ರಿ ಗಾದಿಗೆ ಏರಬೇಕು. ಸಚಿವ ಸ್ಥಾನಕ್ಕಾಗಿ ತತ್ವ, ಸಿದ್ಧಾಂತಗಳನ್ನೇ ಬದಿಗೊತ್ತಿ ಪಕ್ಷಾಂತರ ಮಾಡುವ ಜನಪ್ರತಿನಿಧಿಗಳು ಹೆಚ್ಚುತ್ತಿದ್ದಾರೆ. ಇಂತಹವರು ಇರುವವರೆಗೂ ಕಲ್ಯಾಣ ಕರ್ನಾಟಕದ ಕನಸು ಸಾಕಾರಗೊಳ್ಳುವುದು ಅನುಮಾನ’.

ವೀರಭದ್ರಪ್ಪ ಉಪ್ಪಿನ್, ನಿವೃತ್ತ ಉಪಹಣಕಾಸು ನಿಯಂತ್ರಣಾಧಿಕಾರಿ, ಪಶುವೈದ್ಯಕೀಯ ವಿಶ್ವವಿದ್ಯಾಲಯ, ಬೀದರ್.

‘ಅನುದಾನ ಬಿಡುಗಡೆಯಲ್ಲಿ ರಾಜಕಾರಣ ಸಲ್ಲ’

‘ಚುನಾವಣಾ ಪೂರ್ವದಲ್ಲಿ ನೀಡಿದ ಆಶ್ವಾಸನೆಗಳನ್ನು ಗೆದ್ದ ಬಳಿಕ ಈಡೇರಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುವ ಜನಪ್ರತಿನಿಧಿಗಳ ಅಗತ್ಯ ಹೆಚ್ಚಿದೆ. ಹೆಚ್ಚಿನ ರಾಜಕಾರಣಿಗಳು ಯೋಜನೆಗಳು ಸಂಬಂಧಿಕರಿಗೆ ತಲುಪುವಂತೆ ನೋಡಿಕೊಳ್ಳುತ್ತಾರೆ. ಇಂತಹ ಧೋರಣೆಯಿಂದ ಸರ್ಕಾರದ ಸೌಕರ್ಯವು ಕ್ಷೇತ್ರದ ಕಟ್ಟಕಡೆಯ ವ್ಯಕ್ತಿಗೆ ತಲುಪುವುದೇ ಇಲ್ಲ. ಮುಖ್ಯಮಂತ್ರಿಯಾದವರು ಜಿಲ್ಲೆಗಳ ಪರಿಸ್ಥಿತಿಯನ್ನು ನೋಡಿಕೊಂಡು ಅನುದಾನ ಬಿಡುಗಡೆ ಮಾಡಬೇಕು’.

ಕುಮಾರ ಎಸ್.ರಾಠೋಡ, ಯಾದಗಿರಿ.

‘ವಿಕೇಂದ್ರೀಕರಣ ಕಾರ್ಯದಿಂದ ‘ಕಲ್ಯಾಣ’ ಸಾಧ್ಯ’



‘ರಾಜ್ಯ ಸರ್ಕಾರ ಆಡಳಿತ ವಿಕೇಂದ್ರೀಕರಣಕ್ಕೆ ಆದ್ಯತೆ ನೀಡಿದರೆ ಕಲ್ಯಾಣ ಕರ್ನಾಟಕದ ಕನಸು ಸಾಕಾರಗೊಳ್ಳಬಹುದು. ಬೀದರ್‌ನ ಜನ ತಮ್ಮ ಸಮಸ್ಯೆಗಳ ಕುರಿತು ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಲು ಹೀಗೆ ನಾನಾ ಕಾರಣಗಳಿಗಾಗಿ ಬೆಂಗಳೂರಿಗೆ ಬರಬೇಕಾಗಿದೆ. ಇದರಿಂದ ಸಮಯ, ಹಣ, ವ್ಯರ್ಥವಾಗುತ್ತದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೆಲವು ಸಚಿವಾಲಯಗಳ ಕಚೇರಿಗಳನ್ನು ಆರಂಭಿಸುವತ್ತ ಸರ್ಕಾರ ಚಿತ್ತ ಹರಿಸಬೇಕು’.

ಹರೀಶ್ ಮಸ್ಕಲ್, ಹಿರಿಯೂರು.

‘ಘೋಷಣೆಗಳಿಗೆ ಸೀಮಿತ’

‘ಎರಡು ವರ್ಷಗಳು ಕಳೆದರೂ ಕಲ್ಯಾಣ ಕರ್ನಾಟಕದ ಆಶಯ ಈಡೇರಿಲ್ಲ. ಆಡಳಿತದಲ್ಲಿನ ಇಚ್ಛಾಶಕ್ತಿಯ ಕೊರತೆ ಇದಕ್ಕೆ ಪ್ರಮುಖ ಕಾರಣ. ಕಲ್ಯಾಣ ಕರ್ನಾಟಕ ಎಂಬುದು ಘೋಷಣೆ ಹಾಗೂ ಕಡತಗಳಿಗೆ ಸೀಮಿತವಾಗಿರುವುದು ದುರಂತ. ಶಿಕ್ಷಣ ಮತ್ತು ಆರೋಗ್ಯ ವ್ಯವಸ್ಥೆಗಳ ಬಲವರ್ಧನೆ ಎಲ್ಲರ ಆದ್ಯತೆಯಾಗಬೇಕು. ಉದ್ಯೋಗ ಸೃಷ್ಟಿಸಿ ವಲಸೆ ತಪ್ಪಿಸುವ ಕಾರ್ಯಕ್ಕೆ ಜನಪ್ರತಿನಿಧಿಗಳು ಮುಂದಾಗಬೇಕು’.

ಎಚ್.ಎರ್ರಿಸ್ವಾಮಿ, ಕನ್ನಡ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿ, ವಿಜಯನಗರ.

‘ಯೋಜನೆಗಳ ಅನುಷ್ಠಾನಕ್ಕೆ ನಿರಾಸಕ್ತಿ’



‘ಸರ್ಕಾರವು ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಬಜೆಟ್‌ನಲ್ಲಿ ವಿಶೇಷ ಯೋಜನೆಗಳನ್ನು ಪ್ರಕಟಿಸುತ್ತದೆ. ಅವುಗಳ ಅನುಷ್ಠಾನಕ್ಕೆ ಜನಪ್ರತಿನಿಧಿಗಳು ಆಸಕ್ತಿ ತೋರುವುದಿಲ್ಲ. ಆರೋಗ್ಯ, ಕೃಷಿ, ಶಿಕ್ಷಣ, ಧಾರ್ಮಿಕ, ಸಾಂಸ್ಕೃತಿಕ ಕ್ಷೇತ್ರಗಳ ಬಲವರ್ಧನೆಗೆ ಘೋಷಿಸಿರುವ ಯೋಜನೆಗಳು ಕಡತಗಳಿಗೆ ಸೀಮಿತವಾಗಿವೆ. ಹೀಗಾಗಿ ಪ್ರಾದೇಶಿಕ ಸಮಾನತೆಯ ಆಶಯ ಮರೀಚಿಕೆಯಾಗಿದೆ. ರಾಜಕಾರಣಿಗಳು ಹಾಗೂ ಅಧಿಕಾರಿಗಳು ಅಭಿವೃದ್ಧಿಯ ವಿಚಾರದಲ್ಲಿ ಬದ್ಧತೆ ತೋರಬೇಕು’.

ಓಂಕಾರ.ಕರೂಟಿ, ಕಲಬುರ್ಗಿ.

‘ಶೈಕ್ಷಣಿಕ ಸೌಕರ್ಯಗಳ ಕೊರತೆ’

‘ಕಲ್ಯಾಣ ಕರ್ನಾಟಕಕ್ಕೆ ರಾಜ್ಯಸರ್ಕಾರ ವಿಶೇಷ ಸ್ಥಾನಮಾನ ನೀಡಿದೆ. ಹೀಗಿದ್ದರೂ ಶಿಕ್ಷಣ ಕ್ಷೇತ್ರದಲ್ಲಿ ಯಾವ ಸುಧಾರಣೆಯೂ ಆಗಿಲ್ಲ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಜ್ಜಾಗಬೇಕೆಂದರೆ ಅದಕ್ಕೆ ಅಗತ್ಯವಿರುವ ತರಬೇತಿ ಕೇಂದ್ರಗಳೇ ಇಲ್ಲ. ಇದಕ್ಕಾಗಿ ಧಾರವಾಡ ಹಾಗೂ ಬೆಂಗಳೂರನ್ನು ಅವಲಂಬಿಸುವುದು ತಪ್ಪಿಲ್ಲ. ಬಳ್ಳಾರಿಯ ಕೇಂದ್ರ ಗ್ರಂಥಾಲಯದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯ ಪುಸ್ತಕಗಳ ಕೊರತೆ ಇದೆ. ಹೀಗಾಗಿ ಈ ಭಾಗದ ಜನ ಸರ್ಕಾರಿ ಕೆಲಸಗಳಿಂದ ವಂಚಿತರಾಗುತ್ತಿದ್ದಾರೆ’.

ಬಿ.ವಿದ್ಯಾಶ್ರೀ, ಬಳ್ಳಾರಿ.

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ
(ಕರ್ನಾಟಕ ಸರ್ಕಾರದ ಅಧೀನಕ್ಕೆ ಒಳಪಟ್ಟಿದೆ)
ನಂ.39, ‘‘ಶಾಂತಿ ಗೃಹ’’, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕಟ್ಟಡ, ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಕಚೇರಿ ಎದುರು, ಅರಮನೆ ರಸ್ತೆ, ಬೆಂಗಳೂರು – 560 001. ದೂ:080–22207851

ಸಂಖ್ಯೆ: ಕೆಆರ್‌ಇಡಿಎಲ್/ಎಜಿಎಂ(ಸಿ)/57/2021–22/2572 ದಿನಾಂಕ: 08.09.2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ (ಕೆಆರ್‌ಇಡಿಎಲ್)ವು ಕೆಳಕಂಡ ಕಾಮಗಾರಿಗಾಗಿ ಅರ್ಹ ತಯಾರಕರು/ಸರಬರಾಜುದಾರರ ಸಂಸ್ಥೆಗಳಿಂದ ಬಿಡ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ಕಾಮಗಾರಿ ಹೆಸರು	ಜಿಎಸ್‌ಟಿ ಸೇರಿದಂತೆ ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ.	ಗುತ್ತಿಗೆ ಪರವಾನಿಗಿಯ ಅರ್ಹತೆ
1	ಬೆಂಗಳೂರು, ನಾಗರಭಾವಿಯಲ್ಲಿ ಹೊಸದಾಗಿ ನಿರ್ಮಿಸಲಾದ ಕೆಆರ್‌ಇಡಿಎಲ್ ಕಚೇರಿ ಕಟ್ಟಡದ ರೆಕಾರ್ಡ್ ರೂಮ್‌ನಲ್ಲಿ ಆಪ್ಟಿಮೈಜರ್ಸ್ ಯೂನಿಟ್‌ಗಳ ಸರಬರಾಜು ಮತ್ತು ಅಳವಡಿಕೆ.	28,52,046/–	ತಯಾರಕರು/ ಸರಬರಾಜುದಾರರ ಸಂಸ್ಥೆಗಳು.

ಹೆಚ್ಚಿನ ವಿವರಗಳಿಗೆ, ಆಸಕ್ತಿಯುಳ್ಳ ಅರ್ಜಿದಾರರು **13.09.2021**ರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in**ಗೆ ಲಾಗ್‌ಇನ್ ಆಗಿ ಬಿಡ್ಡಿಂಗ್ ದಸ್ತಾವೇಜುಗಳನ್ನು ಪಡೆಯಬಹುದು. ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **28.09.2021**. ವೆಬ್‌ಸೈಟ್: **http://www.kredinfo.in**

ಸಹಿ/– ಸಹಾಯಕ ಪ್ರಧಾನ ವ್ಯವಸ್ಥಾಪಕರು, ಸಿವಿಲ್, ಕೆಆರ್‌ಇಡಿಎಲ್

ಕೆ.ಎಂ.ಎಫ್ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಂ. ಹೆಚ್. ಮರೀಗೌಡ ರಸ್ತೆ, ಬೆಂಗಳೂರು–560 029
ಫೋನ್: 26096832/26096910 ಫ್ಯಾಕ್ಸ್: 080–25536105 Email: purchase@kmf.coop

ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್–326/2021–22 ದಿನಾಂಕ: 13.09.2021

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ, ಬೆಂಗಳೂರು ಈ ಕೆಳಕಂಡ ವಿವರದಂತೆ ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ https://eproc.karnataka.gov.in ಗೆ ಬೇಟಿ ನೀಡಿ ಪಡೆಯಬಹುದಾಗಿದೆ.

Sl No.	Item Description	Qty (Nos.)	EMD (Rs.)
1	200 Ltrs. Capacity Hard top Deep Freezer for Ice Cream Storage	92	35,000
2	200 Ltrs. Capacity Glass top Deep Freezer for Ice Cream Storage	68	28,000
3	300-345 Ltrs. Capacity Hard top Deep Freezer for Ice Cream Storage	120	56,000
4	300-345 Ltrs. Capacity Glass top Deep Freezer for Ice Cream Storage	190	95,000
5	400-460 Ltrs. Capacity Hard top Deep Freezer for Ice Cream Storage	165	90,000
6	400-460 Ltrs. Capacity Glass top Deep Freezer for Ice Cream Storage	365	1,60,000

ಟೆಂಡರ್ ಪ್ರಾರಂಭವಾಗುವ ದಿನಾಂಕ : **From 13.09.2021**
ಟೆಂಡರ್ ಪೂರ್ವಭಾವಿ ಸಭೆ ದಿನಾಂಕ : **27.09.2021 at 11.00 AM**
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **on or before 12.10.2021 up to 5.00 pm**
ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ : **on 13.10.2021 at 5.05 PM**
ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ : ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ

ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ ಪರವಾಗಿ
ಸಹಿ/–
ನಿರ್ದೇಶಕರು (ಖರೀದಿ)

ನೀಟ್: ಭೌತವಿಜ್ಞಾನ ಪತ್ರಿಕೆ ಕ್ಲಿಷ್ಟಕರ

ಬೆಂಗಳೂರು: ವೈದ್ಯಕೀಯ, ದಂತ ವೈದ್ಯಕೀಯ, ಆಯುಷ್ ಕೋರ್ಸ್‌ಗಳ ಪ್ರವೇಶಕ್ಕೆ ಭಾನುವಾರ ನಡೆದ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಯಲ್ಲಿ (ನೀಟ್) ಭೌತವಿಜ್ಞಾನ ಪತ್ರಿಕೆ ಕ್ಲಿಷ್ಟಕರವಾಗಿತ್ತು ಎಂದು ವಿದ್ಯಾರ್ಥಿಗಳು ಹೇಳಿದ್ದಾರೆ.

ರಸಾಯನವಿಜ್ಞಾನ ಮತ್ತು ಜೀವವಿಜ್ಞಾನ ಪತ್ರಿಕೆಗಳಲ್ಲಿ ನೇರವಾದ ಪ್ರಶ್ನೆಗಳಿದ್ದರೆ, ಭೌತವಿಜ್ಞಾನ ಪತ್ರಿಕೆಯಲ್ಲಿನ ಪ್ರಶ್ನೆಗಳು ಕಷ್ಟಕರ ಆಗಿದ್ದವು ಎಂದು ವಿದ್ಯಾರ್ಥಿಗಳು ಮತ್ತು ವಿಷಯ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯ (ಎನ್‌ಟಿಎ) ನಿರ್ದೇಶನ ಮತ್ತು ಕೋವಿಡ್ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಿ ರಾಜ್ಯದಲ್ಲಿ ಬೆಂಗಳೂರು, ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಕಲಬುರ್ಗಿ, ಮೈಸೂರು, ಮಂಗಳೂರು, ಉಡುಪಿ ಕೇಂದ್ರಗಳಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಬರೆದರು.

‘ಬಹುತೇಕ ಪ್ರಶ್ನೆಗಳು ಎನ್‌ಸಿಇಆರ್‌ಟಿ ಪಠ್ಯ ಪುಸ್ತಕದಿಂದ ಇದ್ದವು. ಒಟ್ಟಿನಲ್ಲಿ ವಿದ್ಯಾರ್ಥಿ ಸ್ನೇಹಿ ಪ್ರಶ್ನೆಗಳೇ ಇದ್ದವು’ ಎಂದೂ ದೀಕ್ಷಾ ಸಂಸ್ಥೆಯ ಅಕಾಡೆಮಿಕ್ ವಿಭಾಗದ ಮುಖ್ಯಸ್ಥರಾದ ಮಿಲಿಂದ್ ಚಿಪ್ಪಲಿಕಟ್ಟಿ ಹೇಳಿದರು.

‘ಜೀವವಿಜ್ಞಾನದಲ್ಲಿ 69 ಸುಲಭ ಪ್ರಶ್ನೆಗಳು, 27 ಸಾಮಾನ್ಯ, 9 ಕಷ್ಟದ ಪ್ರಶ್ನೆಗಳು ಇದ್ದವು. ಸಾಮಾನ್ಯ ವಿದ್ಯಾರ್ಥಿ ಜೀವವಿಜ್ಞಾನದಲ್ಲಿ 250ರಿಂದ 260 ಅಂಕ ಗಳಿಸಬಹುದು. ಭೌತವಿಜ್ಞಾನದ ಪತ್ರಿಕೆಯ ಪ್ರಶ್ನೆಗಳು ಕ್ಲಿಷ್ಟಕರವಾಗಿದ್ದರಿಂದ 50ರಿಂದ 60 ಅಂಕ, ರಸಾಯನವಿಜ್ಞಾನದಲ್ಲಿ 110ರಿಂದ 110 ಅಂಕ ಪಡೆಯಬಹುದು. ಪಠ್ಯದಿಂದ ಹೊರತಾದ ಪ್ರಶ್ನೆಗಳು ಇರಲಿಲ್ಲ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಭೌತವಿಜ್ಞಾನದ ಪರೀಕ್ಷೆ ಸ್ವಲ್ಪ ಕಷ್ಟ ಇತ್ತು’ ಎಂದೂ ಮಿಲಿಂದ್ ತಿಳಿಸಿದರು.

ನೀಟ್ ಪರೀಕ್ಷಾರ್ಥಿಗಳಿಗೆ ಮೊದಲ ಡೋಸ್ ಲಸಿಕೆ ಕಡ್ಡಾಯವಾಗಿತ್ತು. ಲಸಿಕೆ ಪಡೆದ ವರದಿ ಪರಿಶೀಲಿಸಿ ಅವಕಾಶ ಕಲ್ಪಿಸಲಾಗಿತ್ತು. ಕೋವಿಡ್ ಸೋಂಕಿನ ಲಕ್ಷಣ ಇದ್ದವರಿಗೆ ಪ್ರತ್ಯೇಕ ಪರೀಕ್ಷೆಗೆ ವ್ಯವಸ್ಥೆ ಮಾಡಲಾಗಿತ್ತು. ಪರೀಕ್ಷಾ ಕೇಂದ್ರಗಳ ಪ್ರವೇಶ ದ್ವಾರದಲ್ಲೇ ಸ್ಯಾನಿಟೈಸರ್ ನೀಡಿ, ಥರ್ಮಲ್ ಸ್ಕ್ಯಾನಿಂಗ್ ಮಾಡಲಾಯಿತು.

ಒಂದು ಬೆಂಚ್‌ನಲ್ಲಿ ಒಬ್ಬರೇ ಅಭ್ಯರ್ಥಿ ಕುಳಿತುಕೊಳ್ಳಲು ಮಾತ್ರ ಅವಕಾಶ ಮಾಡಿಕೊಡಲಾಗಿತ್ತು. ದಾಖಲೆಗಳನ್ನು ಪರೀಕ್ಷಿಸಿ ಅಭ್ಯರ್ಥಿಗಳನ್ನು ಪರೀಕ್ಷಾ ಕೇಂದ್ರದೊಳಗೆ ಬಿಡಲಾಯಿತು.

ಉದ್ಯೋಗ ಕ್ಷೇತ್ರದಲ್ಲಿ ಅವಕಾಶ ಕೌಶಲದೊಂದಿಗೆ ವೃತ್ತಿಜ್ಞಾನವೂ ಇರಲಿ

ಉದ್ಯೋಗಕ್ಕೆ ವಿದ್ಯಾರ್ಥಿಗಳನ್ನು ಸಮರ್ಥವಾಗಿ ತಯಾರು ಮಾಡಲು ಕೋವಿಡ್–19 ಕಾರಣದಿಂದಾಗಿ ವಿದ್ಯಾಸಂಸ್ಥೆಗಳಿಗೆ ಸಾಧ್ಯವಾಗಿಲ್ಲ. ಆದ್ದರಿಂದ ಉದ್ಯೋಗಕ್ಕೆ ಬೇಕಾಗಿರುವ ಕೌಶಲಗಳನ್ನು ತಾವೇ ಸ್ವತಃ ಆದರೂ ಕಲಿಯಲೇಬೇಕಾಗಿದೆ. ಇಂದಿನ ಉದ್ಯೋಗಕ್ಷೇತ್ರದಲ್ಲಿ ಬೇಡಿಕೆ ಹೆಚ್ಚಿಸಿಕೊಂಡು ಸ್ಥಿರತೆ ಕಾಪಾಡಿಕೊಳ್ಳಲು ವಿದ್ಯಾರ್ಥಿಗಳು ಈ ಕೆಲವು ಕೌಶಲಗಳನ್ನು ರೂಢಿಸಿಕೊಳ್ಳುವುದು ಅನಿವಾರ್ಯವಾಗಿದೆ.

ಮನಸ್ವಿ

ಕೊರೊನಾ ಎನ್ನುವುದು ಒಬ್ಬೊಬ್ಬರ ಜೀವನದಲ್ಲಿ ಒಂದೊಂದು ರೀತಿಯ ಬದಲಾವಣೆಗೆ ಕಾರಣವಾಗಿದೆ, ಇದಕ್ಕೆ ವಿದ್ಯಾರ್ಥಿಗಳೂ ಹೊರತಾಗಿಲ್ಲ. ಕಳೆದ ಎರಡು ವರ್ಷಗಳಿಂದ ಶಾಲೆ ಹಾಗೂ ಕಾಲೇಜುಗಳ ಬಾಗಿಲು ತೆರೆಯಲು ಸಾಧ್ಯವಾಗಿರಲಿಲ್ಲ. ಆನ್‌ಲೈನ್ ತರಗತಿಗಳು ನಡೆಯುತ್ತಿದ್ದರೂ ಹಲವು ಸಮಸ್ಯೆಗಳಿಂದ ವಿದ್ಯಾರ್ಥಿಗಳಿಗೆ ತೊಡಕಾಗಿದ್ದೇ ಹೆಚ್ಚು, ಈ ನಡುವೆ ವಿದ್ಯಾರ್ಥಿಗಳು ಹಿಂದೆ ಕಲಿತಿದ್ದನ್ನೆಲ್ಲಾ ಮರೆತು ಬಿಟ್ಟಿದ್ದಾರೆ. ಆ ಕಾರಣಕ್ಕೆ ವಿದ್ಯಾರ್ಥಿಗಳಲ್ಲಿ ಹಿಂದಿನ ಪಾಠಗಳನ್ನು ನೆನಪಿಸಲು ಹಾಗೂ ಹೊಸ ಹೊಸ ಕೌಶಲಗಳನ್ನು ರೂಢಿಸಿಕೊಳ್ಳಲು ವಿದ್ಯಾಸಂಸ್ಥೆಗಳು ಸೇತುಬಂಧದಂತಹ ಕಾರ್ಯಕ್ರಮಗಳನ್ನು ನಡೆಸುತ್ತಿವೆ. ಪ್ರಸ್ತುತ ಉದ್ಯಮರಂಗ ಬಯಸುವ ಹೊಸ ಕೌಶಲಕ್ಕೆ ಸಂಬಂಧಿಸಿದ ಕೋರ್ಸ್‌ಗಳನ್ನು ಕಾಲೇಜುಗಳು ಪರಿಚಯಿಸುತ್ತಿವೆ. ಆ ಮೂಲಕ ವಿದ್ಯಾರ್ಥಿಗಳಲ್ಲಿ ಉದ್ಯೋಗಕ್ಕೆ ಸೇರಲು ನೆರವಾಗುವಂತೆ ಮಾಡುತ್ತಿವೆ. ಈಗಿನ ತಂತ್ರಜ್ಞಾನಕ್ಕೆ ತಕ್ಕಂತಹ ಕೌಶಲಗಳನ್ನು ವಿದ್ಯಾರ್ಥಿಗಳಲ್ಲಿ ರೂಢಿಸುವುದು ವಿದ್ಯಾಸಂಸ್ಥೆಗಳ ಹೊಣೆಯಾದರೆ, ಹೊಸ ಹೊಸ ಕೌಶಲಗಳನ್ನು ರೂಢಿಸಿಕೊಳ್ಳುವುದು ವಿದ್ಯಾರ್ಥಿಗಳ ಜವಾಬ್ದಾರಿಯಾಗಿದೆ.

ಈ ನಿಟ್ಟಿನಲ್ಲಿ ವಿದ್ಯಾಸಂಸ್ಥೆಗಳು ತಮ್ಮ ಪಠ್ಯಕ್ರಮದಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿಕೊಂಡಿವೆ. ಪ್ರಸ್ತುತ ವಿದ್ಯಮಾನಕ್ಕೆ ಹೊಂದುವಂತಹ ಅಧ್ಯಯನ ಕ್ರಮಗಳನ್ನು ಪ್ರಾಧ್ಯಾಪಕರು ರೂಢಿಸಿಕೊಂಡಿದ್ದಾರೆ. ಆ ಮೂಲಕ ವಿದ್ಯಾರ್ಥಿಗಳಿಗೂ ಕಲಿಸಲು ಯತ್ನಿಸುತ್ತಿದ್ದಾರೆ.

ಆಟೊಮೇಷನ್, ರೋಬೊಟೈಜೇಷನ್, ಕೃತಕ ಬುದ್ಧಿಮತ್ತೆ ಈ ವಿಷಯಗಳಿಗೆ ಹೆಚ್ಚು ಪ್ರಾಧಾನ್ಯ ನೀಡುತ್ತಿವೆ. ಇಂದಿನ ಉದ್ಯೋಗಕ್ಷೇತ್ರದಲ್ಲಿ ಬೇಡಿಕೆ ಹೆಚ್ಚಿಸಿಕೊಂಡು ಸ್ಥಿರತೆ ಕಾಪಾಡಿಕೊಳ್ಳಲು ವಿದ್ಯಾರ್ಥಿಗಳು ಈ ಕೆಲವು ಕೌಶಲಗಳನ್ನು ರೂಢಿಸಿಕೊಳ್ಳುವುದು ಅನಿವಾರ್ಯವಾಗಿದೆ.

ವಾಣೀಜ್ಯೋದ್ಯಮದ ಅರಿವು

ಉದ್ಯಮ ಕ್ಷೇತ್ರಕ್ಕೆ ಕಾಲಿಡ ಬಯಸುವವರು ಚಾಣಕ್ಷರಾಗಿರಬೇಕು ಎಂಬ ಕಾಲವಿತ್ತು. ಆದರೆ ಇಂದು ಉದ್ಯಮಿಗಳು ಮಾತ್ರ ವ್ಯಾಪಾರ ಚಾಣಾಕ್ಷತೆಯನ್ನು ಹೊಂದಿರಬೇಕು ಎನ್ನುವ ಹಾಗಿಲ್ಲ. ಪ್ರತಿಯೊಬ್ಬರೂ ಉದ್ಯಮ ಕ್ಷೇತ್ರದ ಕುರಿತು ಚಾಣಾಕ್ಷತೆ ಹಾಗೂ ಸಂಪೂರ್ಣ ಜ್ಞಾನವನ್ನು ಹೊಂದುವುದು ಅವಶ್ಯವಾಗಿದೆ. ಒಂದು ಸಂಸ್ಥೆಯನ್ನು ಯಶಸ್ವಿನತ್ತ ಕೊಂಡ್ಯೊಯಲು ಬೇಕಾಗುವ ಮಾರ್ಗಗಳನ್ನು ಯೋಚಿಸುವ ಕೌಶಲವೂ ಬೇಕು. ಮ್ಯಾನೇಜ್‌ಮೆಂಟ್ ಪದವೀಧರರು ತಾವು ಆಯ್ಕೆ ಮಾಡಿಕೊಂಡ ಉದ್ಯೋಗದ ಬಗ್ಗೆ ಅರ್ಥಮಾಡಿಕೊಳ್ಳಲು ಜಾಣ್ಮೆ ಬೆಳೆಸಿಕೊಳ್ಳಬೇಕು.

ಡಿಜಿಟಲ್ ಜ್ಞಾನ

ಸಾಮಾಜಿಕ ಜಾಲತಾಣಗಳ ಬಳಕೆ ಎನ್ನುವುದು ಚಿಕ್ಕ ಮಕ್ಕಳಿಂದ ಹಿಡಿದು ಹಿರಿಯರವರೆಗೂ ಸಾಮಾನ್ಯ ಎಂಬಂತಾಗಿದೆ. ಅದರಲ್ಲೂ ಯುವಜನರು ಸಾಮಾಜಿಕ ಜಾಲತಾಣಗಳ ಬಳಕೆಯಲ್ಲಿ ನಿಪುಣರು. ಇದು ಸದ್ಯದ ಉದ್ಯೋಗರಂಗಕ್ಕೆ ವರದಾನವೂ ಹೌದು. ಡಿಜಿಟಲ್ ಮಾಧ್ಯಮಗಳ ಕುರಿತು ಆಳವಾಗಿ ತಿಳಿದುಕೊಂಡವರಿಗೆ ಉದ್ಯೋಗರಂಗದಲ್ಲಿ ಬೇಡಿಕೆ ಹೆಚ್ಚು. ಉದ್ಯಮ ಕ್ಷೇತ್ರದ ಒಟ್ಟಾರೆ ಬೆಳವಣಿಗೆ ಹಾಗೂ ಯಶಸ್ಸಿಗೆ ಸಾಮಾಜಿಕ ಜಾಲತಾಣವು ಒಂದು ಪ್ರಮುಖ ಅಸ್ತ್ರ ಎಂದರೆ ತಪ್ಪಾಗಲಿಕ್ಕಿಲ್ಲ. ಇದು ಉದ್ಯಮರಂಗದಲ್ಲಿ ನೆಲೆಯೂರಲು ಸಹಾಯ ಮಾಡುವುದು ಸುಳ್ಳಲ್ಲ.

ಸಂವಹನ ಕಲೆ

ಸಂವಹನ ಕಲೆ ಎನ್ನುವುದು ಉದ್ಯೋಗಕ್ಕೆ ಸೇರಬಯಸುವ ಪ್ರತಿಯೊಬ್ಬರಿಗೂ ಬಹಳ ಅವಶ್ಯ. ಯಾವುದೇ ವಯಸ್ಸು, ಕ್ಷೇತ್ರವಾಗಲಿ ಪರಿಣಾಮಕಾರಿ ಸಂವಹನ ಎನ್ನುವುದು ತುಂಬಾ ಮುಖ್ಯ, ಪರಿಣಾಮಕಾರಿ ಸಂವಹನದಿಂದ ಉದ್ಯೋಗಾಕಾಂಕ್ಷಿಗಳು ಯಶಸ್ಸು ಗಳಿಸಲು ಸಾಧ್ಯ. ತಮ್ಮ ಸಂವಹನ ಕೌಶಲದಿಂದ ಸಂಸ್ಥೆಯ ಕುರಿತು ಪ್ರಪಂಚಕ್ಕೆ ತಿಳಿಸಲು ಸಾಧ್ಯವಾಗುತ್ತದೆ. ಉತ್ತಮ ಸಂವಹನವೇ ಸಂದರ್ಶನಗಳಲ್ಲಿ ಪ್ಲಸ್ ಪಾಯಿಂಟ್ ಆಗಿರುತ್ತದೆ.

ಗುಂಪಿನಲ್ಲಿ ಕೆಲಸ ಮಾಡುವುದು

ಟೀಮ್ ಲೀಡರ್ ಅಥವಾ ಒಂದು ತಂಡದ ನಾಯಕ ಎನ್ನಿಸಿಕೊಳ್ಳುವುದು ಸುಲಭದ ಮಾತಲ್ಲ. ಗುಂಪಿನಲ್ಲಿ ಕೆಲಸ ಮಾಡುವುದು ಹಾಗೂ ಮಾಡಿಸುವುದು ಕೂಡ ಒಂದು ಕಲೆ. ಸಂಸ್ಥೆ ಏನು ಬಯಸುತ್ತದೆ ಎನ್ನುವುದನ್ನು ಗುಂಪಿನಲ್ಲಿ ಸೇರಿ ಕೆಲಸ ಮಾಡಿ ತೋರಿಸುವುದು ನಿಜಕ್ಕೂ ಸವಾಲು. ಹಾಗಾಗಿ ಗುಂಪಿನಲ್ಲಿ ಕೆಲಸ ಮಾಡುವ ಕೌಶಲವನ್ನೂ ರೂಢಿಸಿಕೊಳ್ಳಬೇಕು. ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳು ಗುಂಪಿನಲ್ಲಿ ಕೆಲಸ ಮಾಡುವುದು ಹಾಗೂ ಮಾಡಿಸುವುದು ಈ ಎರಡರ ಕುರಿತೂ ಆಳವಾದ ಜ್ಞಾನ ಹೊಂದಿರಬೇಕು.

ಸಮಸ್ಯೆಗೆ ಪರಿಹಾರ

ಯಾವುದೇ ಉದ್ಯೋಗಕ್ಷೇತ್ರದಲ್ಲಿ ಸಮಸ್ಯೆ ಕಾಣಿಸಿಕೊಂಡ ತಕ್ಷಣ ಅದಕ್ಕೆ ಪರಿಹಾರ ಕಂಡುಕೊಳ್ಳುವ ಮಾರ್ಗ ಹುಡುಕುವಂತಹ ಮನೋಭಾವವುಳ್ಳವರನ್ನು ಕ್ಷೇತ್ರ ಹೆಚ್ಚು ಬಯಸುತ್ತದೆ. ತಮ್ಮ ಸಮಸ್ಯೆಯ ಪರಿಹಾರಕ್ಕೆ ಬೇರೆಯವರನ್ನು ಅವಲಂಬಿಸದೇ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವ ಕೌಶಲ ಹೊಂದಿರುವುದು ಅಗತ್ಯವಾಗಿದೆ.

(ಪೂರಕ ಮಾಹಿತಿ: ಪ್ರೊ. ಎಸ್‌.ಕೆ. ಜಾರ್ಜ್)

ಸೌಲಭ್ಯ ನಿರ್ವಹಣೆಗೂ ಕೋರ್ಸ್ ಅಗತ್ಯವೆ?

ಎಸ್‌.ಜಿ. ಕೃಷ್ಣ

ಇತ್ತೀಚೆಗೆ ಮ್ಯಾನೇಜ್‌ಮೆಂಟ್‌ನಲ್ಲಿ ಹೊಸ ಹೊಸ ಶಾಖೆಗಳು ಸೇರ್ಪಡೆಯಾಗುತ್ತಿವೆ. ವಿದ್ಯಾರ್ಥಿಗಳೂ ಕೂಡ ಯಾವುದಕ್ಕೆ ಹೆಚ್ಚು ಬೇಡಿಕೆಯಿದೆಯೋ ಅಂತಹ ಕೋರ್ಸ್‌ಗಳನ್ನು ಮಾಡಿಕೊಂಡು ಉದ್ಯೋಗಕ್ಷೇತ್ರದಲ್ಲಿ ಅವಕಾಶಗಳನ್ನು ಪಡೆಯುತ್ತಿದ್ದಾರೆ. ಈ ನಿಟ್ಟಿನಲ್ಲಿ ಸೌಲಭ್ಯ ನಿರ್ವಹಣೆ ಅಥವಾ ಫೆಸಿಲಿಟಿ ಮ್ಯಾನೇಜ್‌ಮೆಂಟ್ ಸದ್ಯ ಶಿಕ್ಷಣ ವಲಯದಲ್ಲಿ ಹೆಚ್ಚು ಸದ್ದು ಮಾಡುತ್ತಿದೆ.

ಏನಿದು ಸೌಲಭ್ಯ ನಿರ್ವಹಣೆ ಎಂದರೆ ಕಲೆ ಮತ್ತು ವಿಜ್ಞಾನಗಳ ಮಿಶ್ರಣ. ಟೆಕ್ನಿಕಲ್ ಮತ್ತು ಎಂಜಿನಿಯರಿಂಗ್ ಸೇವೆ, ಪರಿಸರ ಆರೋಗ್ಯ ಮತ್ತು ಸುರಕ್ಷತೆ, ಇಂಧನ ಮತ್ತು ಜಲ ನಿರ್ವಹಣೆ, ಯೋಜನೆ ನಿರ್ವಹಣೆ, ಬ್ಯುಸಿನೆಸ್ ಬೆಂಬಲ ಸೇವೆ ಮೊದಲಾದವುಗಳು ಇದರಲ್ಲಿ ಸೇರಿವೆ. ಪ್ರತಿಯೊಂದು ವಿಷಯದಲ್ಲೂ ನೈಪುಣ್ಯದ ಅವಶ್ಯಕತೆಯಿದೆ. ಹಾಗೆಯೇ ಎಲ್ಲವೂ ಮೂಲಸೌಲಭ್ಯವನ್ನು ಅವಲಂಬಿಸಿದೆ.

ಉದಾಹರಣೆಗೆ ಕಟ್ಟಡ ನಿರ್ವಹಣೆಯೂ ಇದರಲ್ಲಿ ಸೇರಿದೆ. ಅಂದರೆ ಈಗಿನ ವಸತಿ ಸಂಕೀರ್ಣದಲ್ಲಿ ನಿರ್ವಹಣಾ ವ್ಯವಸ್ಥೆಯೂ ಇಂತಹ ಸೇವೆಗಳಲ್ಲಿ ಒಂದಾಗಿದೆ. ಹಾಗೆಯೇ ದೊಡ್ಡ ದೊಡ್ಡ ಐಟಿ ಕಂಪನಿಗಳು, ಕೈಗಾರಿಕೆಗಳ ಸಂಕೀರ್ಣವನ್ನೂ ಇದು ಒಳಗೊಂಡಿದೆ. ಇಂತಹ ಕಾರ್ಯಗಳ ವ್ಯಾಪ್ತಿ ಜಾಸ್ತಿಯಾಗುತ್ತ ಹೋದಂತೆ ವೃತ್ತಿಪರ ತಜ್ಞರ ಅವಶ್ಯಕತೆಯೂ ಹೆಚ್ಚಾಗುತ್ತ ಹೋಗುತ್ತದೆ.

ಒಂದು ಕಂಪನಿಯಲ್ಲಿ ಉದ್ಯೋಗಿಗಳು ಯಾವುದೇ ತೊಂದರೆಯಿಲ್ಲದೇ ಕಾರ್ಯನಿರ್ವಹಿಸಬೇಕಾದರೆ ಸೌಲಭ್ಯ ನಿರ್ವಹಣೆ ವ್ಯವಸ್ಥಿತವಾಗಿರಬೇಕು. ಕಂಪನಿಯಲ್ಲಿ ಮಾನವ ಸಂಪನ್ಮೂಲ, ಯಂತ್ರಗಳ ವ್ಯವಸ್ಥೆಯನ್ನು ಅಧ್ಯಯನ ಮಾಡಿದ ಮೇಲೆ ಅಲ್ಲಿ ಈ ತಂಡವು ಹೇಗೆ ಕಾರ್ಯ ನಿರ್ವಹಣೆ ಮಾಡಬೇಕು ಎಂಬುದನ್ನು ನಿರ್ಧರಿಸುತ್ತದೆ. ಇದರಿಂದ ಕಂಪನಿಯ ಮಾಲೀಕರು ಆರ್ಥಿಕವಾಗಿ ಉಳಿತಾಯ ಮಾಡಬಹುದು. ಜೊತೆಗೆ ಸಮಯವೂ ವ್ಯರ್ಥವಾಗದಂತೆ ತಡೆಯಬಹುದು.

ಸೌಲಭ್ಯ ವ್ಯವಸ್ಥಾಪಕರು ನಿತ್ಯದ ಕಾರ್ಯನಿರ್ವಹಣೆಯ ಮೇಲೆ ನಿಗಾ ಇಡಬೇಕು. ಉದಾಹರಣೆಗೆ ಒಂದು ಕಂಪನಿಯ ಹೌಸ್‌ಕೀಪಿಂಗ್ ಕೂಡ ಮಾಡಬೇಕಾಗುತ್ತದೆ. ಸ್ವಚ್ಛತೆ, ಭದ್ರತೆ, ಅದಕ್ಕೆ ಬೇಕಾಗಿರುವ ಉದ್ಯೋಗಿಗಳ ನಿರ್ವಹಣೆ, ಅಲ್ಲಿಯ ತುರ್ತು ಅವಶ್ಯಕತೆಗಳನ್ನು ಪೂರೈಸುವುದು, ಅಗ್ನಿ ಅವಗಢವಾಗದಂತೆ ತಡೆಯುವುದು, ವಿದ್ಯುತ್, ನೀರು, ತ್ಯಾಜ್ಯಗಳ ನಿರ್ವಹಣೆ.. ಎಲ್ಲವೂ ಇವರ ವ್ಯಾಪ್ತಿಯಲ್ಲಿ ಬರುತ್ತವೆ. ಕೆಲವೊಮ್ಮೆ ಎಂಜಿನಿಯರಿಂಗ್ ಸಾಮರ್ಥ್ಯವೂ ಇರಬೇಕಾಗುತ್ತದೆ.

ಅರ್ಹತೆ

ಒಬ್ಬ ಸೌಲಭ್ಯ ವ್ಯವಸ್ಥಾಪಕನಿಗೆ ಕಾರ್ಮಿಕರನ್ನು ನಿರ್ವಹಿಸುವ ಚಾಕಚಕ್ಯತೆ ಇರಬೇಕು. ಒಳ್ಳೆಯ ಸಂವಹನ ಅವಶ್ಯಕ. ತಕ್ಷಣವೇ ನಿರ್ಧಾರ ಕೈಗೊಂಡು ನಿರ್ವಹಿಸುವ ಸಾಮರ್ಥ್ಯವಿರಬೇಕು. ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದವರು ಕೂಡ ಈ ಕ್ಷೇತ್ರದಲ್ಲಿ ಉದ್ಯೋಗ ಗಿಟ್ಟಿಸುತ್ತಿದ್ದಾರೆ.

ಕಂಪನಿ ಅಥವಾ ವಸತಿ ಸಂಕೀರ್ಣದ ಕಟ್ಟಡದಲ್ಲಿ ಸದ್ಯಕ್ಕಂತೂ ಸೌಲಭ್ಯ ವ್ಯವಸ್ಥಾಪಕರನ್ನು ನೇಮಿಸಿಕೊಳ್ಳುತ್ತಿದ್ದಾರೆ. ಇದಕ್ಕೂ ಮೊದಲು ಆಡಳಿತದ ಒಂದು ವಿಭಾಗವೇ ಇದನ್ನು ನೋಡಿಕೊಳ್ಳುತ್ತಿತ್ತು. ಈಗ ಈ ವ್ಯವಸ್ಥೆಯ ಹೊಣೆಗಾರಿಕೆಯನ್ನು ಹೊರ ಗುತ್ತಿಗೆ ನೀಡುವ ಪರಿಪಾಟ ಬೆಳೆದಿದೆ. ಇದರಿಂದ ಕಂಪನಿಯ ಆಡಳಿತ ವ್ಯವಸ್ಥೆ ಮುಖ್ಯವಾದ ಕಾರ್ಯಗಳ ಮೇಲೆ ನಿಗಾ ಇಡಬಹುದು. ಬಹು ರಾಷ್ಟ್ರೀಯ ಕಂಪನಿಗಳು ತಮ್ಮ ವಹಿವಾಟನ್ನು ಹೆಚ್ಚಿಸಿದ ಮೇಲಂತೂ ಈ ಸೌಲಭ್ಯ ನಿರ್ವಹಣೆ ಕ್ಷೇತ್ರದವರಿಗೆ ಬೇಡಿಕೆ ಜಾಸ್ತಿಯಾಗಿದೆ. ಉದ್ಯೋಗಗಳು ಸಾಕಷ್ಟು ಸಂಖ್ಯೆಯಲ್ಲಿ ಸೃಷ್ಟಿಯಾಗುತ್ತಿವೆ. ಎಂಜಿನಿಯರಿಂಗ್, ಮ್ಯಾನೇಜ್‌ಮೆಂಟ್ ಪದವೀಧರರು ಹೆಚ್ಚಿನ ಸಂಖ್ಯೆಯಲ್ಲಿ ಈ ಕ್ಷೇತ್ರಕ್ಕೆ ಕಾಲಿಡುತ್ತಿದ್ದಾರೆ.

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 57

771) ಹೊನ್ಸು, ಹೊಕ್ಕೈಡೊ, ಕ್ವಾಶು, ಶಿ ಕೊಕು ಇವು ಯಾವ ದೇಶದ ದ್ವೀಪಗಳು?
ಎ) ಚೀನಾ ಬಿ) ಸಿಂಗಾಪುರ
ಸಿ) ಮಾಲ್ಡೀವ್ಸ್ ಡಿ) ಜಪಾನ್

772) ಹೊಂದಿಸಿ ಬರೆಯಿರಿ

ನದಿ	ದೇಶ
ಅ. ಇರಾವಡಿ	1. ಮ್ಯಾನ್ಮಾರ್
ಆ. ಲೀನಾ	2. ರಷ್ಯಾ
ಇ. ರೆಡ್	3. ಚೀನಾ
ಈ. ಟೈಗ್ರಿಸ್	4. ಇರಾಕ್

ಅ ಆ ಇ ಈ
ಎ)3412 ಬಿ)3421
ಸಿ)1234 ಡಿ)1243

773) ಹೊಂದಿಸಿ ಬರೆಯಿರಿ

ಅ. ರಾಗಿ	1. ದಾವಣಗೆರೆ
ಆ. ಜೋಳ	2. ರಾಯಚೂರು
ಇ. ಮೆಕ್ಕೆಜೋಳ	3. ತುಮಕೂರು
ಈ. ಭತ್ತ	4. ವಿಜಯಪುರ

ಅ ಆ ಇ ಈ
ಎ)3412 ಬಿ)3421
ಸಿ)1234 ಡಿ)1243

774) ಕೆಳಗಿನ ಯಾವ ಜಿಲ್ಲೆಯು ಕಡಿಮೆ ಅರಣ್ಯ ಪ್ರದೇಶವನ್ನು ಹೊಂದಿದೆ?
ಎ) ಬಾಗಲಕೋಟ ಬಿ) ವಿಜಯಪುರ
ಸಿ) ಗದಗ ಡಿ) ಕಲಬುರ್ಗಿ

775) ಹೊಂದಿಸಿ ಬರೆಯಿರಿ

ಅ. ಕೃಷ್ಣಾ	1. ಹಿಡಕಲ್ ಜಲಾಶಯ
ಆ. ಘಟಪ್ರಭಾ	2. ನವಿಲುತೀರ್ಥ
ಇ. ತುಂಗಭದ್ರಾ	3. ಆಲಮಟ್ಟಿ
ಈ. ಮಲಪ್ರಭಾ	4. ಪಂಪಸಾಗರ

ಅ ಆ ಇ ಈ
ಎ)1234 ಬಿ)2134 ಸಿ)2314 ಡಿ)3142

776) ನಾಗರಹೊಳೆ ಉದ್ಯಾನವನ ಈ ಕೆಳಗಿನ ಯಾವ ಜಿಲ್ಲೆಗಳಲ್ಲಿ ವಿಸ್ತರಿಸಿದೆ?
ಎ) ಕೊಡಗು ಮತ್ತು ಮೈಸೂರು
ಬಿ) ಕೊಡಗು ಮತ್ತು ಚಾಮರಾಜನಗರ
ಸಿ) ಮೈಸೂರು ಮತ್ತು ಮಂಡ್ಯ
ಡಿ) ಮೈಸೂರು ಮತ್ತು ಚಾಮರಾಜನಗರ

777) ಲೀಥಿಯಂ ಯಾವ ರಾಜ್ಯದಲ್ಲಿ ಹೇರಳವಾಗಿದೆ?
ಎ) ಕರ್ನಾಟಕ
ಬಿ) ಕೇರಳ
ಸಿ) ಮಹಾರಾಷ್ಟ್ರ
ಡಿ) ಜಾರ್ಖಂಡ್

778) ಕೆಳಗಿನ ಹೇಳಿಕೆಗಳನ್ನು ಗಮನಿಸಿ.
ಅ) ಪಶ್ಚಿಮ ಘಟ್ಟಗಳ ಕಡೆಯಿಂದ ಪೂರ್ವದ ಕಡೆಗೆ ಹೋದಂತೆ ಮಳೆಯ ಪ್ರಮಾಣ ಕಡಿಮೆಯಾಗುತ್ತದೆ
ಆ) ಉತ್ತರಭಾರತದಿಂದ ದಕ್ಷಿಣ ಭಾರತದ ಕಡೆ ಹೋದಂತೆ ಕಾಲುವೆ ನೀರಾವರಿ ಪ್ರಮಾಣ ಹೆಚ್ಚಿಗೆಯಾಗುತ್ತದೆ
ಎ) 'ಅ' ಮಾತ್ರ ಸರಿ ಬಿ) 'ಆ' ಮಾತ್ರ ಸರಿ
ಸಿ) ಎರಡೂ ಸರಿ ಡಿ) ಎರಡೂ ತಪ್ಪು

779) ಚನ್ನಪಟ್ಟಣದ ಬೊಂಬೆಗಳು ರಾಷ್ಟ್ರ ಮಟ್ಟದಲ್ಲಿ ಪ್ರಸಿದ್ಧ. ಚನ್ನಪಟ್ಟಣ ಯಾವ ಜಿಲ್ಲೆಯಲ್ಲಿದೆ?
ಎ) ಬೆಂಗಳೂರು ಗ್ರಾಮಾಂತರ
ಬಿ) ಹಾಸನ
ಸಿ) ರಾಮನಗರ
ಡಿ) ಮಂಡ್ಯ

780) ಕುಮಾರಧಾರ, ಶಿಶಿಲಾ ನದಿಗಳು ಯಾವ ನದಿಯ ಉಪನದಿಗಳು
ಎ) ಶರಾವತಿ ಬಿ) ಅಘನಾಶಿನಿ
ಸಿ) ನೇತ್ರಾವತಿ ಡಿ) ಗಂಗಾವಳಿ

781. ರಾಜು ವಿನಾಯಕನ ಸಹೋದರ, ಉಮಾ ದಿನೇಶನ ಸಹೋದರಿ, ರಾಜು ಉಮಾಳ ಮಗನಾದರೆ, ವಿನಾಯಕ ಉಮಾಳಿಗೆ ಏನಾಗಬೇಕು?
ಎ) ಮಗ ಬಿ) ಸಹೋದರ
ಸಿ) ಅಳಿಯ ಡಿ) ತಂದೆ

782. ಕಬ್ಬಿಣದ ಚೂರುಗಳಿಗೆ ಸಾರಯುಕ್ತ ಹೈಡ್ರೋಕ್ಲೋರಿಕ್ ಆಮ್ಲವನ್ನು ಸೇರಿಸಿದಾಗ ಏನಾಗುತ್ತದೆ?
ಎ) ಹೈಡ್ರೋಜನ್ ಅನಿಲ ಮತ್ತು ಕಬ್ಬಿಣದ ಕ್ಲೋರೈಡ್ ಉಂಟಾಗುತ್ತವೆ
ಬಿ) ಕ್ಲೋರಿನ್ ಅನಿಲ ಮತ್ತು ಕಬ್ಬಿಣದ ಹೈಡ್ರಾಕ್ಸೈಡ್ ಉಂಟಾಗುತ್ತವೆ.
ಸಿ) ಯಾವುದೇ ಕ್ರಿಯೆ ನಡೆಯುವುದಿಲ್ಲ
ಡಿ) ಕಬ್ಬಿಣದ ಲವಣ ಮತ್ತು ನೀರು ಉಂಟಾಗುತ್ತವೆ

783. ಈ ಕೆಳಗಿನವುಗಳಲ್ಲಿ ಯಾವ ಪ್ರಕಾರದ ಔಷಧಗಳನ್ನು ಅಜೀರ್ಣತೆಯ ಚಿಕಿತ್ಸೆಗೆ ಬಳಸಲಾಗುತ್ತದೆ?
ಎ) ಜೀವಜಿರೋಧಕ ಬಿ) ನೋವುನಿವಾರಕ
ಸಿ) ಆಮ್ಲಶಮಕ ಡಿ) ನಂಜುನಿವಾರಕ

784. 10 ಜನ ಪ್ರತಿದಿನ 6 ಗಂಟೆಗಳಂತೆ ದುಡಿದು ಒಂದು ಕಾರ್ಯವನ್ನು 18 ದಿನದಲ್ಲಿ ಪೂರ್ಣಗೊಳಿಸುವರು. ಇದೇ ಕಾರ್ಯವನ್ನು 15 ಜನರು, 12 ದಿನದಲ್ಲಿ ಪೂರ್ಣಗೊಳಿಸಲು ಪ್ರತಿದಿನ ಎಷ್ಟು ಗಂಟೆ ದುಡಿಯಬೇಕು?
ಎ) 6 ಗಂಟೆ ಬಿ) 8 ಗಂಟೆ
ಸಿ) 9 ಗಂಟೆ ಡಿ) 7 ಗಂಟೆ

785. ನಾನು ಸೂರ್ಯನಿಗೆ ಮುಖ ಮಾಡಿ ನಡೆಯಲು ಆರಂಭಿಸಿದೆ. ಮೊದಲು ಎಡಕ್ಕೆ ತಿರುಗಿ ನಂತರ ಬಲಕ್ಕೆ ತಿರುಗಿದೆ. ಹಾಗಾದರೆ ನಾನು ಈಗ ಯಾವ ದಿಕ್ಕಿಗೆ ಮುಖ ಮಾಡಿದ್ದೇನೆ?
ಎ) ಪೂರ್ವ ಬಿ) ಪಶ್ಚಿಮ
ಸಿ) ಉತ್ತರ ಡಿ) ದಕ್ಷಿಣ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 56ರ ಉತ್ತರಗಳು: 756. ಸಿ, 757. ಸಿ, 758. ಡಿ, 759. ಬಿ, 760. ಸಿ, 761. ಎ, 762. ಸಿ, 763. ಡಿ, 764. ಬಿ, 765. ಬಿ, 766. ಎ, 767. ಸಿ, 768. ಎ, 769. ಬಿ, 770. ಬಿ

ವೃತ್ತಿಯಲ್ಲಿ ತೃಪ್ತಿಯಿಲ್ಲದಿದ್ದರೆ ಏನು ಮಾಡಬೇಕು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್ ಕುಮಾರ್

- **ಕಳೆದ ಹತ್ತು ವರ್ಷಗಳಿಂದ ರಾಜ್ಯ ಸರ್ಕಾರದಲ್ಲಿ ಶುಶ್ರೂಷಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ವೃತ್ತಿಯಲ್ಲಿ ಯಾವುದೇ ಬಡ್ತಿ ಇಲ್ಲ. ವೃತ್ತಿ ಸಮಾಧಾನಕರವಾಗಿಲ್ಲ; ಯಾವುದೇ ರಜೆ ಸಿಗುತ್ತಿಲ್ಲ. ತಂದೆ- ತಾಯಿಯನ್ನು ನೋಡಿಕೊಳ್ಳುವುದಕ್ಕೆ ಆಗುತ್ತಿಲ್ಲ. ಈ ನರ್ಸಿಂಗ್ ಸೇವೆಯ ಬದಲು ನಾನು ಬೇರಾವ ವೃತ್ತಿಯನ್ನು ಮಾಡಬಹುದು.**

ಸಂಜೀವ ಶ್ರೀ ಬೆಳ್ಳೆನವರ, ವಿಜಯಪುರ

ವೃತ್ತಿಯಲ್ಲಿ ಯಶಸ್ಸನ್ನು ಗಳಿಸಲು ವೃತ್ತಿ ಸಂಬಂಧಿತ ಜ್ಞಾನ ಮತ್ತು ಕೌಶಲಗಳ ಜೊತೆಗೆ ಸಕಾರಾತ್ಮಕ ಆಲೋಚನೆ, ನಿಷ್ಠೆ, ಪ್ರಾಮಾಣಿಕತೆ, ಸ್ವಯಂಪ್ರೇರಣೆ ಮತ್ತು ಆತ್ಮವಿಶ್ವಾಸವಿರಬೇಕು. ಹಾಗಿದ್ದರೆ ಮಾತ್ರ, ನಿಮ್ಮ ಕಾರ್ಯಾಚರಣೆ ನಿರೀಕ್ಷೆಯಂತಿರುತ್ತದೆ. ಆದರೆ, ವೃತ್ತಿಯಲ್ಲಿ ಕುಂದುಕೊರತೆಗಳಿದ್ದರೆ, ಅತೃಪ್ತಿಯಿದ್ದರೆ ಮೇಲಾಧಿಕಾರಿಗಳೊಡನೆ ಮುಕ್ತವಾಗಿ ಚರ್ಚಿಸಬೇಕು ಅಥವಾ ಸ್ವಯಂ-ಮೌಲ್ಯಮಾಪನ ಮಾಡಿಕೊಂಡು ಕಾರಣಗಳನ್ನೂ, ಪರಿಹಾರಗಳನ್ನೂ ಕಂಡುಕೊಳ್ಳಬೇಕು. ಇಲ್ಲದಿದ್ದರೆ, ಮುಂದಿನ ವೃತ್ತಿಯಲ್ಲೂ ಯಶಸ್ಸನ್ನು ಗಳಿಸಲು ಕಷ್ಟವಾಗಬಹುದು.

ನೀವು ಈಗಿರುವ ವೃತ್ತಿ ಸಂಬಂಧಿತ ಅನೇಕ ಪ್ಯಾರಾ ಮೆಡಿಕಲ್ ವೃತ್ತಿಗಳಿವೆ. ನಿಮ್ಮ ಸ್ವಾಭಾವಿಕ ಆಸಕ್ತಿಯ ಅನುಸಾರ ಡಿಪ್ಲೊಮಾ/ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಮಾಡಿ ವೃತ್ತಿಯನ್ನು ಬದಲಾಯಿಸಬಹುದು. ಇನ್ನೂ ಗೊಂದಲವಿದ್ದರೆ, ವೃತ್ತಿ ಸಮಾಲೋಚಕರನ್ನು ಸಂಪರ್ಕಿಸಿ.

- **ನಾನು ಎಂಎ (ಅರ್ಥ ಶಾಸ್ತ್ರ) ಮುಗಿಸಿ ಪೊಲೀಸ್ ಹೋಮ್ ಗಾರ್ಡ್ಸ್ ಕೆಲಸ ಮಾಡಿದ್ದೇನೆ. ನನಗೆ ಅಪರಾಧ ಶಾಸ್ತ್ರದಲ್ಲಿ ಆಸಕ್ತಿ ಇದೆ. ಈ ಕೋರ್ಸ್ ಬಗ್ಗೆ ಮತ್ತು ಈ ಕುರಿತ ಪುಸ್ತಕಗಳ ಬಗ್ಗೆ ತಿಳಿಸಿ.**

ಮುನಿರಾಜು ಕೆ, ಊರು ತಿಳಿಸಿಲ್ಲ.

ಅಪರಾಧ ಶಾಸ್ತ್ರದ ಕೋರ್ಸ್ ಕುರಿತು ಇದೇ ತಿಂಗಳ 6ನೇ ತಾರೀಖಿನ ಪ್ರಶ್ನೋತ್ತರದಲ್ಲಿ ಉತ್ತರಿಸಲಾಗಿದೆ. ದಯವಿಟ್ಟು ಓದಿಕೊಳ್ಳಿ. ಅಪರಾಧ ಶಾಸ್ತ್ರ ಸಂಬಂಧಿತ ಅನೇಕ ವಿಷಯಗಳಿವೆ. ಹಾಗಾಗಿ, ನಿಮಗೆ ಆಸಕ್ತಿಯಿರುವ ವಿಷಯದ ಅನುಸಾರ ಪುಸ್ತಕಗಳನ್ನು ಆರಿಸಿಕೊಳ್ಳಬೇಕು.

- **ನಾನು ಪಿಯುಸಿ ಓದಿದ್ದೇನೆ ಹಾಗೂ 2018 ರಿಂದ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ. ನನಗೆ ಪಿಎಸ್‌ಐ ಆಗಬೇಕೆಂಬ ಆಸೆ ಇದೆ. ಪದವಿ ಮಾಡುತ್ತಿದ್ದೇನೆ. ಮುಂದೇನು ಮಾಡಬೇಕೆಂದು ತಿಳಿಸಿ.**

ಹುಸೇನ್ ಮುಲ್ತಾನಿ, ಬೆಳಗಾವಿ.

- **ನಾನು ಬಿಎಸ್‌ಸಿ ಅಂತಿಮ ವರ್ಷದ ವಿದ್ಯಾರ್ಥಿ. ಪಿಎಸ್‌ಐ ಪರೀಕ್ಷೆಯ ದೈಹಿಕ ಮಾನದಂಡಗಳೇನು?**

ಹೆಸರು, ಊರು ತಿಳಿಸಿಲ್ಲ.

ಪೊಲೀಸ್ ಇಲಾಖೆಯಲ್ಲಿ ಕನಿಷ್ಠ 5 ವರ್ಷಗಳ ಸೇವೆಯ ನಂತರ, ಪಿಎಸ್‌ಐ ಹುದ್ದೆಗೆ ಅರ್ಜಿ ಸಲ್ಲಿಸಬಹುದು. ಕರ್ನಾಟಕ ಪಿಎಸ್‌ಐ ನೇಮಕಾತಿ ಪ್ರಕ್ರಿಯೆ, ಪರೀಕ್ಷೆಗಳ ವಿವರ, ದೈಹಿಕ ಮಾನದಂಡಗಳು ಮತ್ತು ವಿಷಯಸೂಚಿಗೆ ಗಮನಿಸಿ: https://prepp.in/karnataka-police-exam

- **ನಾನು ದ್ವಿತೀಯ ಪಿಯುಸಿ (ವಿಜ್ಞಾನ) ದಲ್ಲಿ ಎರಡು ಬಾರಿ ಅನುತ್ತೀರ್ಣನಾಗಿ ಈಗಷ್ಟೇ ಉತ್ತೀರ್ಣನಾಗಿದ್ದೇನೆ. ನನಗೆ ಮುಂದಿನ ನಿರ್ಧಾರಗಳ ಬಗ್ಗೆ ಗೊಂದಲವಿದೆ. ಏನು ಮಾಡಿದರೆ ಒಳಿತು?**

ಹೆಸರು, ಊರು ತಿಳಿಸಿಲ್ಲ.

ನೀವು ಇಷ್ಟಪಡುವ ವೃತ್ತಿಗೂ, ನಿಮ್ಮಲ್ಲಿರುವ ಪ್ರತಿಭೆಗೂ ಸಾಮ್ಯತೆ ಇರಬೇಕು. ನಿಮ್ಮ ಸಾಮರ್ಥ್ಯ ಮತ್ತು ಆಸಕ್ತಿಯ ಆಧಾರದ ಮೇಲೆ ಮೊದಲು ಸೂಕ್ತವಾದ ವೃತ್ತಿ ಮತ್ತು ಅದರಂತೆ ಕೋರ್ಸ್ ಆಯ್ಕೆಯಿರಲಿ.

ಪಿಯುಸಿ (ವಿಜ್ಞಾನ) ನಂತರ ವೃತ್ತಿಯ ಆಯ್ಕೆಯಂತೆ ಮಾಡಬಹುದಾದ ಕೋರ್ಸ್‌ಗಳೆಂದರೆ ಎಂಬಿಬಿಎಸ್, ಬಿಇ/ ಬಿಟೆಕ್/ ಬಿಆರ್ಕ್, ಬಿಎಸ್‌ಸಿ (50ಕ್ಕೂ ಹೆಚ್ಚು ವಿಷಯಗಳು), ಬಿಎಸ್‌ಸಿ-ಕೃಷಿ/ ಫಾರ್ಮ್ ಸಂಬಂಧಿತ, ಬಿಎಸ್‌ಸಿ-ಪ್ಯಾರಾ ಮೆಡಿಕಲ್, ಬಿಫಾರ್ಮ, ಬಿಸಿಎ, ಬಿಬಿಎ, ಎಂಬಿಎ (ಇಂಟಗ್ರೇಡೆಡ್), ಬಿಕಾಂ, ಸಿಎ, ಎಸಿಎಸ್ ಇತ್ಯಾದಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ.

ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಮೆರ್ಕ್ ಇಂಡಿಯಾ ಚಾರಿಟೆಬಲ್ ಟ್ರಸ್ಟ್ (ಎಂಐಸಿಟಿ) ಸ್ಕಾಲರ್‌ಶಿಪ್ ಪ್ರೋಗ್ರಾಮ್ 2021–22

ವಿವರ: 10ನೇ ತರಗತಿ ಉತ್ತೀರ್ಣರಾದವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪದವಿವರೆಗೆ ಈ ವಿದ್ಯಾರ್ಥಿ ವೇತನ ಅವರಿಗೆ ಸಹಕಾರಿಯಾಗಲಿದೆ.

ಅರ್ಹತೆ: ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಬೆಂಗಳೂರು, ಮುಂಬೈ, ಥಾಣೆ, ನವಿ ಮುಂಬೈನಲ್ಲಿ ವಾಸಿಸುತ್ತಿರಬೇಕು. 10ನೇ ತರಗತಿಯಲ್ಲಿ ಕನಿಷ್ಠ ಶೇ 80 ರಷ್ಟು ಅಂಕಗಳಿಂದ ಉತ್ತೀರ್ಣಗೊಂಡಿರಬೇಕು. ಕುಟುಂಬದ ತಿಂಗಳ ಆದಾಯವು ₹ 20 ಸಾವಿರಕ್ಕಿಂತ ಕಡಿಮೆ ಇರಬೇಕು.

ಆರ್ಥಿಕ ಸಹಾಯ: ವರ್ಷಕ್ಕೆ ₹ 35 ಸಾವಿರ, ಪದವಿ ಮುಗಿಯುವವರೆಗೂ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 4 ಅಕ್ಟೋಬರ್, 2021

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ

ಹೆಚ್ಚಿನ ಮಾಹಿತಿಗೆ: www.b4s.in/praja/MSP5

ನಿಕಾನ್ ಸ್ಕಾಲರ್‌ಶಿಪ್ ಪ್ರೋಗ್ರಾಮ್ 2021–22

ವಿವರ: ಪಿಯುಸಿ ಮುಗಿಸಿ, ಫೋಟೋಗ್ರಫಿ ಕೋರ್ಸ್ ಓದಲು ಇಚ್ಛಿಸುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹತೆ: ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯವು ₹ 6 ಲಕ್ಷಕ್ಕಿಂತ ಕಡಿಮೆ ಇರಬೇಕು.

ಆರ್ಥಿಕ ಸಹಾಯ: ₹ 1 ಲಕ್ಷದವರೆಗೆ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30 ಸೆಪ್ಟೆಂಬರ್, 2021

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ

ಹೆಚ್ಚಿನ ಮಾಹಿತಿಗೆ: www.b4s.in/praja/NSP5

ಕೃಪೆ: buddy4study.com



ಸುಭಾಷಿತ

ತಪ್ಪುಗಳನ್ನು ವೈಫಲ್ಯಗಳೆಂದು ನಾನು ಎಂದಿಗೂ ತಿಳಿಯುವುದಿಲ್ಲ. ಅವು, ಯಾವುದೆಲ್ಲ ಕೆಲಸ ಮಾಡುವುದಿಲ್ಲ ಎಂಬುದನ್ನು ಕಂಡುಕೊಳ್ಳಲು ಸಿಗುವ ಅವಕಾಶಗಳಾಗಿರುತ್ತವೆ ಅಷ್ಟೆ. -ಥಾಮಸ್ ಆಲ್ವ ಎಡಿಸನ್

ಇನ್ಫೊಸಿಸ್ ಹಾಗೂ ದೇಶದ್ರೋಹದ ಆರೋಪ ಮಾತುಗಳು ಘನತೆ ಕಳೆದುಕೊಂಡ ಲಕ್ಷಣ

'ಇನ್ಫೊಸಿಸ್' ಎಂಬುದು ಭಾರತದ, ಅದರಲ್ಲೂ ಮುಖ್ಯವಾಗಿ ಕನ್ನಡ ನಾಡಿನ ಅಸಂಖ್ಯ ಕುಟುಂಬಗಳ ಪಾಲಿಗೆ ಒಂದು ತಂತ್ರಾಂಶ ಕಂಪನಿಯ ಹೆಸರಷ್ಟೇ ಅಲ್ಲ. ಅದು ಅವರ ಪಾಲಿಗೆ ಬದುಕು ಕಟ್ಟಿಕೊಟ್ಟ ಸಂಸ್ಥೆಯೂ ಹೌದು. ಭಾರತವು ಆರ್ಥಿಕ ಉದಾರೀಕರಣ ಪ್ರಕ್ರಿಯೆಗೆ ತೆರೆದುಕೊಂಡ ನಂತರದ ಕೆಲವೇ ವರ್ಷಗಳಲ್ಲಿ 'ಇನ್ಫೊಸಿಸ್', ತನ್ನ ಷೇರುಗಳನ್ನು ಸಾರ್ವಜನಿಕರಿಗೆ ಖರೀದಿಗೆ ಮುಕ್ತವಾಗಿಸಿತು. ಎನ್.ಆರ್. ನಾರಾಯಣಮೂರ್ತಿ, ನಂದನ್ ನಿಲೇಕಣಿ, ಎಸ್.ಡಿ. ಶಿಬುಲಾಲ್, ಎಸ್. ಗೋಪಾಲಕೃಷ್ಣನ್ ಅವರಂತಹ ಸಾಹಸಿಗರು ಕಟ್ಟಿದ ಇನ್ಫೊಸಿಸ್, ಆ ಮೂಲಕ ನಿಜ ಅರ್ಥದಲ್ಲಿ ಜನರ ಕಂಪನಿ ಆಯಿತು. ಲಕ್ಷಾಂತರ ಮಂದಿ ನೌಕರರು ಈ ಕಂಪನಿಯ ಮೂಲಕ ಬದುಕು ಕಂಡುಕೊಂಡಿದ್ದಾರೆ. ಲಕ್ಷಾಂತರ ಮಂದಿ ಹೂಡಿಕೆದಾರರು, ಈ ಐ.ಟಿ. ದೈತ್ಯದಲ್ಲಿ ಹೂಡಿಕೆ ಮಾಡಿ ಸಂಪತ್ತು ಸೃಷ್ಟಿಸಿಕೊಂಡಿದ್ದಾರೆ. ದೇಶವು ಆರ್ಥಿಕವಾಗಿ ಮುಕ್ತವಾದ ನಂತರದಲ್ಲಿ ಈ ಕಂಪನಿಯು ಕನ್ನಡ ಮಣ್ಣಿನಲ್ಲಿ ತನಗೆ ತಾನೇ ಸಾಟಿ ಎಂಬ ರೀತಿಯಲ್ಲಿ ಬೆಳೆದು ನಿಂತಿದೆ. ಬಡ ಹಾಗೂ ಮಧ್ಯಮ ವರ್ಗದ ಸಹಸ್ರಾರು ಕುಟುಂಬಗಳಿಗೆ ಶ್ರೀಮಂತಿಕೆ ತಂದುಕೊಡುವಲ್ಲಿ 'ಇನ್ಫೊಸಿಸ್' ಕೊಡುಗೆ ಗುರುತರವಾದುದು. ಹೂಡಿಕೆದಾರರಿಗೆ ಸಂಪತ್ತು ಸೃಷ್ಟಿಸಿಕೊಡುವಲ್ಲಿ ದೇಶದ ಮುಂಚೂಣಿ ಕಂಪನಿಗಳ ಸಾಲಿನಲ್ಲಿ 'ಇನ್ಫೊಸಿಸ್'ಗೆ ಒಂದು ಸ್ಥಾನ ಇದ್ದೇ ಇರುತ್ತದೆ. ಮಧ್ಯಮ ವರ್ಗಕ್ಕೆ ಸೇರಿದ ನಾರಾಯಣಮೂರ್ತಿ ಅವರಂತಹ ಉದ್ಯಮಿಗಳು ಭಾರತದ ನೆಲದಲ್ಲಿ ಸಹಸ್ರಾರು ಕೋಟಿ ರೂಪಾಯಿ ಬೆಲೆಬಾಳುವ ಉದ್ಯಮವೊಂದನ್ನು ಕಟ್ಟಬಲ್ಲರು, ಆ ಉದ್ಯಮವನ್ನು ಜಾಗತಿಕ ಮಟ್ಟದಲ್ಲಿ ಒಂದು ಬ್ರ್ಯಾಂಡ್ ಆಗಿ ಬೆಳೆಸಬಲ್ಲರು ಎಂಬುದರ ಸಂಕೇತ 'ಇನ್ಫೊಸಿಸ್'. ಇಂತಹ ಕಂಪನಿಯ ಬಗ್ಗೆ ಈಗ ತೀರಾ ಹಗುರವೂ ಅಕ್ಷಮ್ಯ ಅಪಾಯಕಾರಿಯೂ ಆದ ಮಾತುಗಳು ಆಡಳಿತಾರೂಢ ಪಕ್ಷಕ್ಕೆ ಹತ್ತಿರವಾಗಿ ಇರುವವರಿಂದ ಬಂದಿವೆ.

ಈಗ ಆಡಿರುವ ಮಾತುಗಳು ದೇಶದ ಉದ್ಯಮ ವಲಯ, ಹೂಡಿಕೆದಾರರ ಸಮೂಹದ ಆತ್ಮಸ್ಥೈರ್ಯವನ್ನು ಕುಗ್ಗಿಸುವಂತಹವು

ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಜೊತೆ ನಂಟು ಹೊಂದಿರುವ 'ಪಾಂಚಜನ್ಯ' ವಾರಪತ್ರಿಕೆಯಲ್ಲಿ ಪ್ರಕಟವಾದ ಲೇಖನವೊಂದರಲ್ಲಿ 'ಇನ್ಫೊಸಿಸ್' ಬಗ್ಗೆ ಸಲ್ಲದ ಮಾತುಗಳನ್ನು ಆಡಲಾಗಿದೆ. ಆದಾಯ ತೆರಿಗೆ ವಿವರ ಸಲ್ಲಿಸಲು ಅನುವು ಮಾಡಿಕೊಡುವ ಹೊಸ ಪೋರ್ಟಲ್‌ನಲ್ಲಿ ಹಲವು ಸಮಸ್ಯೆಗಳು ಇರುವುದು ವರದಿಯಾಗಿದೆ. ಈ ಪೋರ್ಟಲ್ ಅಭಿವೃದ್ಧಿಪಡಿಸಿದ್ದು 'ಇನ್ಫೊಸಿಸ್'. ಪೋರ್ಟಲ್‌ನಲ್ಲಿ ಇರುವ ಸಮಸ್ಯೆಗಳನ್ನು ಸೆಪ್ಟೆಂಬರ್ 15ರೊಳಗೆ ಸರಿಪಡಿಸಬೇಕು ಎಂದು ಕೇಂದ್ರ ಸರ್ಕಾರವು ಕಂಪನಿಗೆ ತಾಕೀತು ಮಾಡಿದೆ. ಈ ಹಿನ್ನೆಲೆಯಲ್ಲಿ ಲೇಖನವೊಂದನ್ನು ಪ್ರಕಟಿಸಿರುವ 'ಪಾಂಚಜನ್ಯ' ಪತ್ರಿಕೆಯು ಪೋರ್ಟಲ್‌ನಲ್ಲಿ ಸಮಸ್ಯೆಗಳು ಇರುವುದರ ಹಿಂದೆ ದೇಶವಿರೋಧಿ ಷಡ್ಯಂತ್ರ ಇದೆಯೇ ಎಂಬ ಪ್ರಶ್ನೆ ಎತ್ತಿರುವುದಾಗಿ ವರದಿಯಾಗಿದೆ. ಇಂತಹ ಮಾತುಗಳ ಬಗ್ಗೆ ಸಾರ್ವಜನಿಕ ವಲಯದಲ್ಲಿ ಪ್ರತಿರೋಧ ವ್ಯಕ್ತವಾಗುತ್ತಿದ್ದಂತೆ, ಆರ್‌ಎಸ್‌ಎಸ್‌ನ ಹಿರಿಯ ಪದಾಧಿಕಾರಿಯೊಬ್ಬರು ಲೇಖನಕ್ಕೂ ಸಂಘಕ್ಕೂ ಸಂಬಂಧವಿಲ್ಲ, ಪತ್ರಿಕೆಯು ಸಂಘದ ಮುಖವಾಣಿ ಅಲ್ಲ ಎಂಬ ವಿವರಣೆ ನೀಡಿದ್ದಾರೆ. ಈ ವಿವರಣೆ ಬಂದ ನಂತರದಲ್ಲಿ ಆರ್‌ಎಸ್‌ಎಸ್‌ನ ಇನ್ನೊಬ್ಬ ಹಿರಿಯ ಪದಾಧಿಕಾರಿಯು, 'ಪತ್ರಿಕೆಯು ಧರ್ಮಯುದ್ಧ ನಡೆಸುತ್ತಿದೆ' ಎಂದು ಶ್ಲಾಘಿಸಿರುವುದು ವರದಿಯಾಗಿದೆ. ಆಳುವ ಪಕ್ಷಕ್ಕೆ ಹತ್ತಿರವಾಗಿರುವ ಸಂಘಟನೆಗೆ ಸೇರಿದವರು ನಡೆಸುತ್ತಿರುವ ಪತ್ರಿಕೆಯಲ್ಲಿ ಇಂತಹ ಮಾತುಗಳು ಪ್ರಕಟವಾಗುವುದು, ಉದ್ಯಮ ವಲಯದಲ್ಲಿ ಹಾಗೂ ಹೂಡಿಕೆದಾರರ ಸಮೂಹದ ಮೇಲೆ ತೀರಾ ಕೆಟ್ಟ ಪರಿಣಾಮ ಉಂಟುಮಾಡಬಲ್ಲವು. ಆಡಳಿತ ಪಕ್ಷದ ಜತೆ ಸೈದ್ಧಾಂತಿಕ ಸಂಬಂಧ ಹೊಂದಿದ ಕೆಲವರು ಮುಸ್ಲಿಮರನ್ನು, ಎಡಪಂಥೀಯರನ್ನು, ಬುದ್ಧಿಜೀವಿಗಳನ್ನು, ಕೆಲವು ಲೇಖಕರು ಮತ್ತು ಕಲಾವಿದರನ್ನು 'ದೇಶದ್ರೋಹಿ'ಗಳು ಎಂದು ಚಿತ್ರಿಸಲು ಯತ್ನಿಸಿದ್ದು ಇದೆ. ಬಹುರಾಷ್ಟ್ರೀಯ ಕಂಪನಿಗಳ ಬಗ್ಗೆ ದ್ವೇಷ ಕಾರಿದ್ದು ಕೂಡ ಇದೆ. ಆದರೆ, 'ಇನ್ಫೊಸಿಸ್'ನಂತಹ ಭಾರತ ಮೂಲದ ಬಹುರಾಷ್ಟ್ರೀಯ ಕಂಪನಿಯೊಂದರ ಬಗ್ಗೆ ಸಡಿಲ ಮಾತುಗಳನ್ನು ಆಡಿದ ನಿದರ್ಶನ ಇರಲಿಲ್ಲ. ಈಗ ಅದೂ ಆಗಿದೆ. ತಮ್ಮ ಸಿದ್ಧಾಂತಕ್ಕೆ ಸರಿಕಾಣದವರನ್ನೆಲ್ಲ 'ದೇಶದ್ರೋಹಿಗಳು' ಅಥವಾ 'ದೇಶದ್ರೋಹಿಗಳ ಜೊತೆ ಶಾಮೀಲಾದವರು' ಎಂದು ದೂಷಿಸುವುದು ಇಡೀ ಸಮಾಜದ ಹಿತವನ್ನು ಕೆಡಿಸುವ ಪ್ರವೃತ್ತಿ. ಕೇಂದ್ರ ಸಚಿವ ಪೀಯೂಷ್ ಗೋಯಲ್ ಅವರು ಟಾಟಾ ಸಮೂಹದ ಬಗ್ಗೆಯೂ ಈಚೆಗೆ ಹಗುರವಾದ ಮಾತು ಆಡಿದ್ದು ವರದಿಯಾಗಿದೆ.

'ಇನ್ಫೊಸಿಸ್' ಅಭಿವೃದ್ಧಿಪಡಿಸಿದ ಪೋರ್ಟಲ್‌ನಲ್ಲಿ ದೋಷಗಳು ಇವೆ. ಅವು ತಾಂತ್ರಿಕ ಸಮಸ್ಯೆಗಳು. ಅವುಗಳನ್ನು ಪರಿಹರಿಸಬಹುದು. ಆ ತಾಂತ್ರಿಕ ಸಮಸ್ಯೆಗಳ ವಿಚಾರವಾಗಿ, ಗುತ್ತಿಗೆ ಒಪ್ಪಂದದ ನಿಯಮಗಳ ಅನುಸಾರ ಕಂಪನಿಯ ವಿರುದ್ಧ ಕ್ರಮವನ್ನೂ ಜರುಗಿಸಲು ಅವಕಾಶ ಇದ್ದಿರಬಹುದು. ಆದರೆ, ತಾಂತ್ರಿಕ ಲೋಪವೊಂದನ್ನು ದೇಶದ್ರೋಹಕ್ಕೆ ಸಮ ಎಂಬಂತೆ ಚಿತ್ರಿಸುವುದು ಮಾತು ಸೋತ ವ್ಯಕ್ತಿಗಳ ಲಕ್ಷಣ. ದೊಡ್ಡ ಸಂಘಟನೆಗಳಿಗೆ ಸೇರಿದವರು, ಅಂತಹ ಸಂಘಟನೆಗಳ ಜೊತೆ ನಂಟು ಹೊಂದಿರುವವರು ಹೇಳಿಕೊಳ್ಳುವಂತಹ ಮಾತುಗಳು ಸೋಲುವಂತಹವು. ಈಗ ಆಡಿರುವ ಮಾತುಗಳು ದೇಶದ ಉದ್ಯಮ ವಲಯ, ಹೂಡಿಕೆದಾರರ ಸಮೂಹದ ಆತ್ಮಸ್ಥೈರ್ಯವನ್ನು ಹಾಳುಮಾಡುತ್ತವೆ. ಇನ್ಫೊಸಿಸ್ ಕಂಪನಿಯು 'ತುಕ್ಡೆ ತುಕ್ಡೆ ಗ್ಯಾಂಗ್'ಗೆ ಸಹಾಯ ಮಾಡುತ್ತಿರಬಹುದು, ನಕ್ಸಲರಿಗೆ, ಎಡಪಂಥೀಯರಿಗೆ ಸಹಾಯ ಮಾಡುತ್ತಿರಬಹುದು ಎಂದು ಅನುಮಾನಿಸುವುದು ಕಂಪನಿಯ ಹೂಡಿಕೆದಾರರಿಗೆ ಪರೋಕ್ಷವಾಗಿ ಬೆದರಿಕೆ ಒಡ್ಡುವುದಕ್ಕೆ ಸಮ. ಘನತೆ ಕಳೆದುಕೊಂಡ ಮಾತುಗಳು ದೇಶಪ್ರೇಮಿಗಳ ಲಕ್ಷಣ ಅಲ್ಲ; ಅಂಕೆ ತಪ್ಪಿದ ಮಾತುಗಳಿಂದ ದೇಶ ಕಟ್ಟಲು ಸಾಧ್ಯವಿಲ್ಲ. ದೇಶ ಅಂದರೆ ಸಿದ್ಧಾಂತವಲ್ಲ. ತಮಗೆ ಸರಿಕಾಣದವರನ್ನೆಲ್ಲ ದೇಶದ್ರೋಹಿಗಳು ಎಂಬಂತೆ ಚಿತ್ರಿಸುವುದರಿಂದ ದೇಶಕ್ಕೆ, ದೇಶವಾಸಿಗಳಿಗೆ ಯಾವ ಅನುಕೂಲವೂ ಇಲ್ಲ.

ದಿನದ ಟ್ವೀಟ್

ಅಂದಿನಂಥದ್ದೇ ವಿದ್ಯಮಾನ

ಗುಜರಾತ್‌ನ ಮುಂದಿನ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಮೊದಲ ಬಾರಿಗೆ ಶಾಸಕರಾದವರು: ದೆಹಲಿಯಲ್ಲಿ ನಿರ್ಧಾರ ಕೈಗೊಳ್ಳಲಾಯಿತು, ಗಾಂಧಿನಗರದಲ್ಲಿ ಜಾರಿಗೆ ತರಲಾಗಿದೆ. ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ ಇಂದಿರಾ ಆಡಳಿತ ಅವಧಿಯಲ್ಲಿ ನಡೆಯುತ್ತಿದ್ದ ವಿದ್ಯಮಾನಗಳ ಛಾಯೆ ಈಗ ಬಿಜೆಪಿಯಲ್ಲಿ ಮೋದಿ ಅವಧಿಯಲ್ಲಿ ನಡೆಯುತ್ತಿದೆ: ಅಷ್ಟೇನೂ ರಾಜಕೀಯ ಪ್ರಭಾವ ಇಲ್ಲದ, ಆದರೆ ಜಾತಿ ಸಮೀಕರಣದ ಹಿನ್ನೆಲೆಯಲ್ಲಿ ಸೂಕ್ತವೆನ್ನಿಸುವ ಮತ್ತು ವಿವಾದಾತ್ಮಕವಲ್ಲದ ಆಯ್ಕೆ.

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ

ವಿವಿಧ ಸಮುದಾಯಗಳ ನಿಖರವಾದ ಜನಸಂಖ್ಯೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಜಾತಿ ಆಧಾರಿತ ಜನಗಣತಿ ಅಗತ್ಯ. ಮೀಸಲಾತಿ ಹೆಚ್ಚಿಸುವಂತೆ ಕೋರಿ ವಿವಿಧ ಸಮುದಾಯಗಳಿಂದ ಬೇಡಿಕೆ ಬರುತ್ತಿದೆ. ವೈಯಕ್ತಿಕವಾಗಿ ನಾನು ಜಾತಿ ಆಧಾರಿತ ಜನ ಗಣತಿಯ ಪರವಾಗಿ ಇದ್ದೇನೆ. ಆದರೆ ಆ ಬಗ್ಗೆ ಅಂತಿಮವಾಗಿ ನಿರ್ಧಾರ ಕೈಗೊಳ್ಳಬೇಕಾದವರು ಪ್ರಧಾನಿ ನರೇಂದ್ರ ಮೋದಿ ಅವರು.

ರಾಮದಾಸ್ ಆಠವಳೆ, ಕೇಂದ್ರ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 13-9-1996

• ಮಹಿಳೆಯರಿಗೆ ಮೀಸಲು ಮಸೂದೆ ಮಂಡನೆ

ನವದೆಹಲಿ, ಸೆ. 12 (ಯುಎನ್‌ಐ)– ಲೋಕಸಭೆಯಲ್ಲಿ ಹಾಗೂ ರಾಜ್ಯ ವಿಧಾನ ಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡುವ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಇಂದು ಲೋಕಸಭೆಯಲ್ಲಿ ಮಂಡಿಸಿದರು.

ಇದು ಸಂವಿಧಾನಕ್ಕೆ 81ನೇ ತಿದ್ದುಪಡಿಯಾಗಲಿದೆ.

ಸದನದಲ್ಲಿ ಪ್ರಶ್ನೋತ್ತರ ವೇಳೆಯನ್ನು ರದ್ದುಪಡಿಸಿದ ಸ್ಪೀಕರ್ ಪಿ.ಎ. ಸಂಗ್ಮಾ ಅವರು, ಈ ಮಸೂದೆ ಮಂಡಿಸಲು ಪ್ರಧಾನಿ ಅವರಿಗೆ ಅವಕಾಶ ಮಾಡಿಕೊಟ್ಟು ಸದನದ ಕಾರ್ಯಕಲಾಪವನ್ನು ಒಂದು ಗಂಟೆ ಕಾಲ ಮುಂದೂಡಿದರು.

ಪ್ರಧಾನಿ ಅವರು ಈ ಮಸೂದೆಯನ್ನು ಏಕಕಾಲಕ್ಕೆ ರಾಜ್ಯಸಭೆಯಲ್ಲೂ ಮಂಡಿಸಲು ಯತ್ನಿಸಿದಾಗ, ಏಕಕಾಲಕ್ಕೆ ಉಭಯ ಸದನಗಳಲ್ಲೂ ಈ ಮಸೂದೆ ಮಂಡಿಸಲು ಸಾಧ್ಯವಿಲ್ಲ ಎಂದು ರಾಜ್ಯಸಭೆ ಅಧ್ಯಕ್ಷ ಉಪರಾಷ್ಟ್ರಪತಿ ಕೆ.ಆರ್. ನಾರಾಯಣನ್ ತಿಳಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 13-9-1971

• ಕ್ರಿಕೆಟ್ ವೀರರಿಗೆ ದೆಹಲಿಯ ಪ್ರೀತಿಯ ಅದ್ದೂರಿ ಸ್ವಾಗತ

ನವದೆಹಲಿ, ಸೆ. 12– ಇಂಗ್ಲೆಂಡಿನ ಮೇಲೆ ಐತಿಹಾಸಿಕ ವಿಜಯ ಗಳಿಸಿ ಹಠಾತ್ತನೆ ಭಾರತವನ್ನು ವಿಶ್ವದ ಪ್ರಬಲ ಕ್ರಿಕೆಟ್ ರಾಷ್ಟ್ರಗಳಲ್ಲೊಂದನ್ನಾಗಿ ಮಾಡಿದ ವಿಜಯೀ ಭಾರತದ ಕ್ರಿಕೆಟ್ ಟೀಂ ಇಂದು ಬೆಳಿಗ್ಗೆ ಇಲ್ಲಿಗೆ ಆಗಮಿಸಿದಾಗ ಅತ್ಯಂತ ಪ್ರೀತಿ ಪುರಸ್ಕಾರದ ಸ್ವಾಗತವನ್ನು ನೀಡಲಾಯಿತು.

12 ವಾರಗಳ ಇಂಗ್ಲೆಂಡ್ ಪ್ರವಾಸದ ನಂತರ ಮ್ಯಾನೇಜರ್ ಹೇಮು ಅಧಿಕಾರಿ ಮತ್ತು ಖಜಾಂಚಿ ರಾಮ ಪ್ರಕಾಶ ಮೆಹ್ತಾ ಅವರ ಜೊತೆ 13 ಜನ ಸದಸ್ಯರ ಕ್ರಿಕೆಟ್ ತಂಡ ಪಾಲಂ ವಿಮಾನ ನಿಲ್ದಾಣದಲ್ಲಿ ಬಂದಿಳಿದಾಗ, ಮೂರು ಸಹಸ್ರಕ್ಕೂ ಹೆಚ್ಚು ಜನ ಭಾರಿ ಹರ್ಷ ಧ್ವನಿ ಮಾಡಿ ಆತ್ಮೀಯ ಸ್ವಾಗತ ನೀಡಿದರು.

ಚಾರಿತ್ರ್ಯ– ಪಾವಿತ್ರ್ಯ ಎಂಬ ಪದಗಳು ಎಳೆಯ ಹುಡುಗಿಯರ ಭಾವಕೋಶವನ್ನು ಕತ್ತರಿಸುವ ಕತ್ತಿಗಳಾಗದಿರಲಿ

ಕನಸುಗಾರ್ತಿಯರು ಮತ್ತು ಭಯದ ಕಾರ್ಖಾನೆ

ವಿಶ್ಲೇಷಣೆ

ಡಾ. ಗೀತಾ ವಸಂತ

ಅತ್ಯಾಚಾರದಂಥ ಕ್ರೌರ್ಯವು ಸಂಭವಿಸಿದಾಗ ಸಮಾಜ ಒಮ್ಮೆ ಬೆಚ್ಚಿಬೀಳುತ್ತದೆ. ಹೆಣ್ಣಿಗೆ ತಾನು ಭಯದ ಕಾರ್ಖಾನೆಯ ಉತ್ಪನ್ನ ಎಂಬುದು ಮತ್ತೊಮ್ಮೆ ನೆನಪಾಗುತ್ತದೆ. ಸದಾ ತನ್ನ ದೇಹದ ಸುರಕ್ಷತೆಯ ಕುರಿತು ತಲ್ಲಣಿಸುತ್ತಲೇ ಇರಬೇಕೆಂಬ ವಾಸ್ತವವು ಆಕೆಯನ್ನು ಕಂಗೆಡಿಸತೊಡಗುತ್ತದೆ. ಅವಳ ಮೇಲಿನ ನಿರ್ಬಂಧಗಳು ಇನ್ನಷ್ಟು ಬಿಗಿಯಾಗಲಾರಂಭಿಸುತ್ತವೆ. ಮಾರಲ್ ಪೊಲೀಸಿಂಗ್ ಎಲ್ಲರಿಂದ ಎಗ್ಗಿಲ್ಲದೆ ನಡೆಯತೊಡಗುತ್ತದೆ. ಅವಳ ದೃಢ ಹೆಜ್ಜೆಗಳಿಗೆ ಸಣ್ಣ ಕಂಪನ. ಎಷ್ಟೋ ಹೋರಾಟಗಳಿಂದ ಪಡೆದುಕೊಂಡ ಮುಕ್ತಿ ಮತ್ತೆ ಗಗನ-ಕುಸುಮವಾದೀತೇನೋ ಎಂಬ ಆತಂಕ, ಮುಂದಿಟ್ಟ ಹೆಜ್ಜೆಗಳನ್ನು ಮತ್ತೆ ಹಿಂದೆ ಎಳೆದು ನಿಲ್ಲಿಸಬಹುದೇ ಎಂಬ ಅವ್ಯಕ್ತ ಭಯ ಕಾಡಲಾರಂಭಿಸುತ್ತದೆ. ವಿಶೇಷವಾಗಿ, ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ಹಂತದಲ್ಲಿರುವ ಹದಿಹರೆಯದ ಹುಡುಗಿಯರ ಮಾನಸಿಕತೆಯ ಕುರಿತು ಈ ಸಂದರ್ಭದಲ್ಲಿ ಹೆಚ್ಚು ಯೋಚಿಸುವುದು ಅಗತ್ಯ.

ಸಮಾಜದಲ್ಲಿ ಯಾರೊಂದಿಗೆ ಹೇಗೆ ವರ್ತಿಸಬೇಕು? ಯಾವ ಗಂಡಸನ್ನು ಎಷ್ಟು ನಂಬಬೇಕು? ಹೆಣ್ಣು–ಗಂಡಿನ ಸಂಬಂಧದ ಸ್ವರೂಪವೇನು? ಹಾಗೂ ಅದರಲ್ಲಿ ತಮ್ಮ ತೊಡಗುವಿಕೆ ಹೇಗಿರಬೇಕು ಎಂದೆಲ್ಲ ಅವರು ಗೊಂದಲಕ್ಕೊಳಗಾಗುತ್ತಾರೆ. ಸರಿಯಾದ ಉತ್ತರ ಪೋಷಕರಿಂದಾಗಲೀ ಶಿಕ್ಷಕರಿಂದಾಗಲೀ ದೊರೆಯದೆ ವಿಚಿತ್ರ ಕಾಂಪ್ಲೆಕ್ಸ್‌ಗಳಲ್ಲಿ ನರಳುತ್ತಾರೆ.

ಒಂದು ಅತ್ಯಾಚಾರ ಪ್ರಕರಣ ವರದಿಯಾದ ಕೂಡಲೇ ಎಲ್ಲ ಮಾಧ್ಯಮಗಳು ಜಾಗೃತವಾಗುತ್ತವೆ. ಆ ಹುಡುಗಿ ಯಾರು, ಅವಳ ಹಿನ್ನೆಲೆ ಏನು, ಅವಳು ಆ ಸ್ಥಳಕ್ಕೆ ಆ ಸಮಯದಲ್ಲಿ ಯಾಕೆ ಹೋಗಬೇಕಿತ್ತು ಎಂಬ ಪ್ರಶ್ನೆಗಳೆಲ್ಲ ಉದ್ಭವಿಸುತ್ತವೆ. ನಂತರ ಅತ್ಯಾಚಾರಿಗಳು ಯಾರು, ಅವರ ಹಿನ್ನೆಲೆಯೇನು? ಅವರು ಸಿಕ್ಕಿಬಿದ್ದರಾ? ಅವರಿಗೆ ಏನು ಶಿಕ್ಷೆ ಕೊಡಬೇಕು ಎಂಬ ಚರ್ಚೆಗಳೂ ನಡೆಯುತ್ತವೆ. ಇನ್ನು ಸಾಮಾಜಿಕ ಜಾಲತಾಣಗಳಲ್ಲಿ, ಆ ಹುಡುಗಿಯ ಜಾತಿ ಯಾವುದು? ಅವಳು ತನ್ನ ಜಾತಿಯಿಂದಾಗಿ ಹೆಚ್ಚಿನವರ ಅನುಕಂಪ ಪಡೆಯುತ್ತಿದ್ದಾಳೆಯೇ? ಪ್ರತಿಭಟನೆ ದಾಖಲಿ ಸುತ್ತಿರುವವರು ಯಾವ ಸಮುದಾಯದವರು ಎಂದು ಅಂಕಿ ಅಂಶಗಳೊಡನೆ ಲೆಕ್ಕಾಚಾರಗಳು ನಡೆಯತೊಡಗುತ್ತವೆ.

ಇನ್ನು ಕೆಲವರು ಅತ್ಯಾಚಾರಕ್ಕೊಳಗಾದವಳ ಚಾರಿತ್ರ್ಯದ ಕುರಿತು ಸಂಶೋಧನೆ ನಡೆಸಿದವರಂತೆ ಮಾತಾಡತೊಡಗುತ್ತಾರೆ. ಅತ್ಯಾಚಾರಗಳಾಗಲು ಅವರ ಸ್ವಚ್ಛಂದ ನಡವಳಿಕೆಯೇ ಕಾರಣ, ಅವರು ತೊಡುತ್ತಿದ್ದ ಬಟ್ಟೆಯೇ ಕಾರಣ ಎಂದೆಲ್ಲ ಕಾರಣಗಳ ಪಟ್ಟಿ ಬೆಳೆಯುತ್ತದೆ. ಹೆಣ್ಣುಮಕ್ಕಳು ಸಂಜೆ ವೇಳೆ ಕ್ಯಾಂಪಸ್‌ಗಳಲ್ಲಿ ಒಂಟಿಯಾಗಿ ಸುತ್ತಾಡಬಾರದೆಂದು ಶಿಕ್ಷಣ ಸಂಸ್ಥೆಗಳು ಸುತ್ತೋಲೆ ಹೊರಡಿಸುತ್ತವೆ. ಹೆಣ್ಣುಮಕ್ಕಳಿಗೆ ಪೋಷಕರು ಸಂಸ್ಕಾರ ಕಲಿಸಿ, ಅವರ ಮೇಲೆ ಕಣ್ಣಿಡಬೇಕು ಎಂದು 'ಸಭ್ಯ' ನಾಗರಿಕರೆನಿಸಿಕೊಂಡವರು ಹುಯಿಲಿಡುತ್ತಾರೆ. ಅಲ್ಲಿಗೆ ಅದುವರೆಗೂ ಗಳಿಸಿಕೊಂಡಿದ್ದ ಹುಡುಗಿಯರ ಧೈರ್ಯ, ಆತ್ಮವಿಶ್ವಾಸಗಳು ಅಲುಗಾಡಲಾರಂಭಿಸುತ್ತವೆ. ನಿರ್ಭಯವೇ ಸ್ವಾತಂತ್ರ್ಯ ಎಂಬ ಮಾತು ನೆಲ ಕಚ್ಚುತ್ತದೆ.

ಅವಳ ದೇಹವೇ ಅವಳ ವಿಧಿ ಎಂಬಂಥ ಹಳೆಯ ಹಳವಂಡಗಳಿಂದ ಲಿಬರೇಟ್ ಆದ ಇಂದಿನ ಯುವತಿಯರ ಜೀವನದೃಷ್ಟಿಯು ಸಹಜವಾಗಿಯೇ ಬದಲಾಗಿದೆ. ತಮ್ಮ ಸಾಮರ್ಥ್ಯಗಳ ಅರಿವು, ಸಾಧ್ಯತೆಗಳ ವಿಸ್ತಾರ ಅವರಿಗೆ ಮನವರಿಕೆಯಾಗುತ್ತಿದೆ. ಬರಿಯ ದೇಹವಾಗಿ ಉಳಿಯಲು ಅವರ ಚೈತನ್ಯವು ತಯಾರಿಲ್ಲ. ಇಂಥ ಸಂದರ್ಭದಲ್ಲಿ ಅವರ ವೈಯಕ್ತಿಕತೆಯನ್ನು ಗಾಸಿಗೊಳಿಸದೆ ಸಾಮಾಜಿಕ ನೀತಿಸಂಹಿತೆಯನ್ನು ಅವರಿಗೆ ತಿಳಿಸುವ ಅಗತ್ಯವಿದೆ.

ಹದಿಹರೆಯದ ಹುಡುಗ ಹುಡುಗಿಯರ ಭಾವಕೋಶವನ್ನು ಹೊಸಕಿಹಾಕದೇ ಸಲಹುವುದು ಹೇಗೆ? ಅವರ ಆತ್ಮವಿಶ್ವಾಸ ಹಾಗೂ ವ್ಯಕ್ತಿತ್ವದ ಘನತೆಗಳು ಕಳೆಯದ ಹಾಗೆ ಕಾಪಿಡುವುದು ಹೇಗೆ? ಸ್ನೇಹ, ಪ್ರೇಮ, ಕಾಮಗಳ ನಡುವಿನ ಸೂಕ್ಷ್ಮ ಗೆರೆಯನ್ನು ಗುರುತಿಸಲು ಕಲಿಸುವುದು ಹೇಗೆ? ಹೆಣ್ಣು ಗಂಡಿನ ಸಂಬಂಧದ ಘನತೆಯನ್ನು ಅವರಿಗೆ ಅರ್ಥ ಮಾಡಿಸುವುದು ಹೇಗೆ? ಇದೆಲ್ಲ ಶಿಕ್ಷಣ ಸಂಸ್ಥೆಗಳ ಮುಂದಿರುವ ಸವಾಲು. ನೀತಿ ಶಿಕ್ಷಣ ಹಾಗೂ ಲೈಂಗಿಕ ಶಿಕ್ಷಣದಾಚೆ ಒಂದು ಆಪ್ತಸಲಹೆಯ ಅಗತ್ಯ ಅಲ್ಲಿರುತ್ತದೆ.

ಸ್ತ್ರೀತ್ವ ಹಾಗೂ ಪುರುಷತ್ವದ ಬಗೆಗಿನ ತೆಳುವಾದ ಕಲ್ಪನೆಗಳನ್ನು ಅಥವಾ ಅಪಕಲ್ಪನೆಗಳನ್ನು ಅವರ ಸುತ್ತಲ ಪರಿಸರದಿಂದ ಅವರೀಗಾಗಲೇ ಪಡೆದಿರುತ್ತಾರೆ. ಶಿಕ್ಷಣವು ಅದನ್ನು ಸರಿಯಾದ ವಿವೇಚನೆಯ ಮೂಲಕ ತಿದ್ದುವ ಕೆಲಸವನ್ನು ಮಾಡಬೇಕು. ಇದಕ್ಕೆ ಲಿಂಗಸೂಕ್ಷ್ಮತೆ ಹಾಗೂ ಲಿಂಗಸಂವೇದನಾಶೀಲತೆಯಿರುವ ಪ್ರಾಧ್ಯಾಪಕರು ಬೇಕು. ಅನೇಕ ಸಲ ನಮ್ಮ ಪ್ರಾಧ್ಯಾಪಕರೇ ಪೂರ್ವ-ಗ್ರಹಪೀಡಿತರಾಗಿರುತ್ತಾರೆ. ಹುಡುಗಿಯರ ಆತ್ಮವಿಶ್ವಾಸ ತುಂಬಿದ ಮಾತುಕತೆ ಹಾಗೂ ಧೀರ ನಿಲುವು ಅವರ ಅಹಂಗೆ ಸವಾಲಾಗಿ ಕಾಣತೊಡಗುತ್ತವೆ. ಮುಕ್ತವಾಗಿ ನಗುತ್ತ ಹುಡುಗರೊಂದಿಗೆ ಮಾತನಾಡುವ, ಹೆಣ್ಣೆಂಬ ಅನಗತ್ಯ ಲಜ್ಜೆಯ ಭಾರ ಹೊರದ, ಕೀಳರಿಮೆ, ಮುಚ್ಚುಮರೆ ಗೊತ್ತೇ ಇರದ ಹೆಣ್ಣುಮಕ್ಕಳು ಅವರಿಗೆ ಸ್ವೇಚ್ಛಾಚಾರಿಗಳಂತೆ ತೋರುತ್ತಾರೆ. ಅವರ ಭಾವಭಂಗಿಗಳೆಲ್ಲ ಉದ್ರೇಕಕಾರಿಯಾಗಿ ತೋರುತ್ತವೆ. ತಮ್ಮ ಅನುಮಾನಗಳೆಲ್ಲ ಸತ್ಯವೇ ಎನ್ನುವಂತೆ ಸ್ಥಾಪಿಸಿ ಎಲ್ಲರ ಮುಂದೆ ಅಂಥ ವಿದ್ಯಾರ್ಥಿನಿಯರನ್ನು ಹಾದಿ ತಪ್ಪಿದವರೆಂದು ಬ್ರ್ಯಾಂಡ್ ಮಾಡಿಬಿಡುತ್ತಾರೆ. ಇದರಿಂದ ಸೂಕ್ಷ್ಮಮನದ ಹೆಣ್ಣುಮಕ್ಕಳ ಮನಸ್ಸು ಮುರಿದುಹೋಗುತ್ತದೆ. ಆತ್ಮವಿಶ್ವಾಸ ಕುಸಿದು ಖಿನ್ನತೆ ಆವರಿಸುತ್ತದೆ. ಆಕೆ ಸಹಜವಾಗಿ ಅರಳುತ್ತಿರುವ ತನ್ನತನವನ್ನು ಕಳಚಿಟ್ಟು, ತಾನು ಹೇಗಿದ್ದರೆ ಸರಿ, ಯಾರನ್ನು ಮೆಚ್ಚಿಸಿ ಬದುಕಬೇಕು ಎಂಬ ಭಾವನಾತ್ಮಕ ತುಯ್ತಕ್ಕೊಳಗಾಗುತ್ತಾಳೆ. ಸ್ವತಃ ಸ್ತ್ರೀಯರಾದ ಅಧ್ಯಾಪಕಿಯರು, ವಾರ್ಡನ್‌ಗಳೂ ಇದಕ್ಕೆ ಕಾರಣರಾಗುವುದಿದೆ. ದೇಹದ ಮೇಲೆ ಆಗುವುದು ಮಾತ್ರ ಅತ್ಯಾಚಾರವಲ್ಲ ಅಲ್ಲವೇ?

ನಮ್ಮ ಸಮಾಜಶಾಸ್ತ್ರೀಯ ಹಾಗೂ ಮನಃಶಾಸ್ತ್ರೀಯ ತಿಳಿವಳಿಕೆಯನ್ನು ಬರಿಯ ಸಿಲಬಸ್ ಆಗಿ ಕಾಣದೇ ಜೀವಂತ ವ್ಯಕ್ತಿಗಳ ನೆಲೆಗೆ ವಿಸ್ತರಿಸಿ ನೋಡುವ ಅಗತ್ಯವಿದೆ. ಲಿಂಗಸಂವೇದನಾಶೀಲತೆ, ಸಬಲೀಕರಣ, ಸಮಾನತೆ, ಸಾಮಾಜಿಕ ನ್ಯಾಯ ಎಲ್ಲವನ್ನೂ ತಾತ್ವಿಕ ಪರಿಕಲ್ಪನೆಗಳಾಗಿರಲು ಬಿಡದೇ ಅವನ್ನು ಬದುಕಲು ಕಲಿಸದಿದ್ದರೆ ಆ ಶಿಕ್ಷಣವು ವ್ಯರ್ಥ. 'ಶಿಕ್ಷಣವೆಂದರೆ ಚಾರಿತ್ರ್ಯ ನಿರ್ಮಾಣ' ಎಂಬ ವಿವೇಕಾನಂದರ ಸೂಕ್ತಿಯನ್ನು ಹಲವೆಡೆ ಉಲ್ಲೇಖಿಸುವ ನಾವು, ಚಾರಿತ್ರ್ಯ ಎಂಬ ಪದದ ವಿಶಾಲ ಹಾಗೂ ಘನವಾದ ಅರ್ಥವನ್ನು ಮನನ ಮಾಡಿಕೊಳ್ಳಬೇಕಿದೆ. ಅಧ್ಯಾಪಕರಿಂದ, ಪಿಎಚ್.ಡಿ ಗೈಡುಗಳಿಂದಲೇ ಲೈಂಗಿಕ ಕಿರುಕುಳ ನಡೆಯುವುದು ಆಗಾಗ ಬಯಲಾಗುತ್ತ ಅಧಿಕಾರದ ನಾನಾ ಚಹರೆಗಳು ಭಯ ಹುಟ್ಟಿಸುತ್ತವೆ. ಮನೆಯಲ್ಲೇ ಕಿರುಕುಳಕ್ಕೊಳಗಾಗುವ ಹುಡುಗಿಯರಂತೂ ಧ್ವನಿಯನ್ನೇ ಕಳೆದುಕೊಂಡು ಸ್ತಬ್ಧರಾಗಿಬಿಡುತ್ತಾರೆ.

ಇಲ್ಲಿ ಯಾರಿಗೆ ಯಾರು ಶಿಕ್ಷಣ ಕೊಡಬೇಕು? ಈ ಚಾರಿತ್ರ್ಯ ಹಾಗೂ ಪಾವಿತ್ರ್ಯ ಎಂಬ ಪದಗಳು ತಮ್ಮ ಪ್ರಜ್ಞೆಯನ್ನು ವಿಸ್ತರಿಸಿಕೊಳ್ಳುತ್ತಿರುವ ಎಳೆಯ ಹುಡುಗಿಯರ ಭಾವಕೋಶವನ್ನು ಕತ್ತರಿಸುವ ಕತ್ತಿಗಳಾಗದೆ ನಮ್ಮ ಅಂತರಂಗವನ್ನು ಕಾಣುವ ಕನ್ನಡಿಗಳಾಗಿದ್ದರೇ ಸೂಕ್ತ.

ಸ್ವಾತಂತ್ರ್ಯವು ನಿಜವಾದ ಅರ್ಥ ಪಡೆದುಕೊಳ್ಳುವುದು ಹೆಣ್ಣುಮಕ್ಕಳು ಮಧ್ಯರಾತ್ರಿಯಲ್ಲೂ ನಿರ್ಭಯವಾಗಿ ಸಂಚರಿಸುವಂತಾದಾಗ ಎಂಬ ಗಾಂಧೀಜಿಯವರ ಮಾತು ಇಂದಿನ ದಿನಗಳಲ್ಲಿ ಅಣಕದಂತೆ ಭಾಸವಾಗುತ್ತಿದೆ. ಈ ಸ್ವಾತಂತ್ರ್ಯ ಎಲ್ಲೋ ಮಧ್ಯರಾತ್ರಿಯ ಮೋಜುಮಸ್ತಿಯ ನಶೆಯಲ್ಲಿ ಅಲೆವ ಕೆಲವೇ ಕೆಲವು 'ಸೋಕಾಲ್ಡ್' ಆಧುನಿಕ ಹೆಣ್ಣುಗಳ ಪಾಲಾಗಿದೆ. ದುಡಿಮೆಯ ಮೂಲಕ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಬಯಸುವ ಮಹಿಳೆಯರು ಪ್ರಾಣ ಅಂಗೈಲಿ ಹಿಡಿದು ಓಡಾಡಬೇಕಿರುವುದೇ ಕಟುವಾಸ್ತವ.

ಬದುಕಿನ ಕೇಂದ್ರವನ್ನು ವಿಸ್ತರಿಸಹೊರಟ ಈ ಹೊಸಹೆಣ್ಣುಗಳು ಸೋಲೊ ಟ್ರಾವೆಲರ್‌ಗಳಾಗಿ ತಮ್ಮ ಲೋಕದರ್ಶನದ ಕನಸಿಗೆ ರೆಕ್ಕೆ ಹಚ್ಚುತ್ತಿದ್ದಾರೆ. ತಮ್ಮಿಷ್ಟದ ಕೋರ್ಸುಗಳನ್ನು ಕಲಿಯಲು, ತಮ್ಮ ಸಾಮರ್ಥ್ಯಕ್ಕೆ ತಕ್ಕ ವೃತ್ತಿ ಬದುಕನ್ನು ಕಟ್ಟಿಕೊಳ್ಳಲು ಕಾಣದ ಊರುಗಳ ಬಾಗಿಲು ಬಡಿಯುತ್ತಿದ್ದಾರೆ. ಇವರೆಲ್ಲ ಹಾದಿ ತಪ್ಪಿದವರಲ್ಲ. ತಮ್ಮ ಹೆಣ್ತನಕ್ಕೆ ಘನತೆಯ ಆಯಾಮ ಸೃಷ್ಟಿಸಿಕೊಳ್ಳಲೆತ್ನಿಸುತ್ತಿರುವ ಸೂಕ್ಷ್ಮಮನದ ದಿಟ್ಟೆಯರು. ಸಾಮಾಜಿಕ ಅಭಿವೃದ್ಧಿ ಹಾಗೂ ಪರಿವರ್ತನಶೀಲ ಹಾದಿಯಲ್ಲಿ ತಮ್ಮ ಹೆಜ್ಜೆಯನ್ನೂ ಮೂಡಿಸುತ್ತಿರುವ ಕನಸುಗಾರ್ತಿಯರು. ಅವರನ್ನು ಭಯದ ಕಾರ್ಖಾನೆಯಲ್ಲಿ ಕತ್ತರಿಸುವುದು ಬೇಡ.

ಲೇಖಕಿ: ಸಹಾಯಕ ಪ್ರಾಧ್ಯಾಪಕಿ, ವಿಶ್ವವಿದ್ಯಾಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾಲಯ

ಚುರುಮುರಿ

ಚೌತಿ: ಚೌಕ ಚರ್ಚೆ

• ಕೆ.ವಿ. ರಾಜಲಕ್ಷ್ಮಿ

ಗಣೇಶ ಚೌತಿ ಕುರಿತು ಚೌಕ ಚರ್ಚೆ- ನಾನು, ನನ್ನವಳು, ಪುಟ್ಟಿ ಮತ್ತು ಅತ್ತೆ- ಚೌಕದ ನಾಲ್ಕು ಮೂಲೆಗಳು, ಮಾತುಗಳು ಖಡಕ್ ಎಂದರೆ ಅತ್ತೆ, ತೀಕ್ಷ್ಣ ಎಂದರೆ ನನ್ನವಳು, ತಮಾಷೆ, ಕೀಟಲೆ ಎಂದರೆ ಪುಟ್ಟಿ, ಸಪ್ಪೆ ಎಂದರೆ ನನ್ನದೇ...

'ಅಲಂಕಾರ ಹೆಚ್ಚು ಇಲ್ಲ, ಮಲ್ಲಿಗೆ ಮೊಳ ಐವತ್ತು, ಕನಕಾಂಬರದ ಬೆಲೆ ಅಂಬರಕ್ಕೇರಿದೆ, ಮನೆ ಮುಂದೆ ಬೆಳೆದಿರೋ ಗರಿಕೆ ಜೊತೆಗೆ ಕಾಕಡ ಇದೆ, ಭಕ್ತಿ ಮುಖ್ಯ ಅಲ್ವೇ?'

'ಆಡಂಬರಕ್ಕೆ ಕೊಕ್ಕೆ, ಕೊರೊನಾ ಹೆದರಿಕೆ'.

'ಈ ಪಾಟಿ ನಿರ್ಬಂಧಗಳು, ಬೀದಿ ಗಣೇಶನ ದರ್ಶನದ ಜೊತೆಗೆ ಚರುಪಿಗೂ ಕೊಕ್'.

'ಉಡುಗೆ ತೊಡುಗೆ ಮನೆಮಟ್ಟಿಗೆ, ನೆರೆಹೊರೆಗೆ ಕೊಡುಗೆ ಕೊಡೋಕ್ಕೂ ಭಯ, ಎಲ್ಲಿ ಏನು ಅಮರಿಕೊಳ್ಳುತ್ತೋ ಅನ್ನೋ ಆತಂಕ'.

'ಊಟೋಪಚಾರಕ್ಕೆ ಲಿಮಿಟ್ ಇರಲಿ, ಆರೋಗ್ಯದ ದೃಷ್ಟಿಯಿಂದ. ನಾಲ್ಕು ಕಡುಬು ಜಾಸ್ತಿ ತಿಂದು ಹೊಟ್ಟೆ ಉಬ್ಬರಿಸಿದರೆ ಅನುಭವಿಸೋಕ್ಕಾಗೋಲ್ಲ'.

'ಎಲ್ಲಿಗೆ ಹೋದರೂ ಎಲ್ಲಿಂದ ಬಂದರೂ ಸ್ಯಾನಿಟೈಸ್ ಆಗೋದು ಮರೀಬೇಡಿ'.

'ಏನಾದರೂ ಸರಿ, ಮಾಸ್ಕೊಳಗೆ ಮಂತ್ರ, ಸೋಷಿಯಲ್ ಡಿಸ್ಟೆನ್ಸ್ ಕಾಪಾಡ್ಕೋತಾ ಅರ್ಚನೆ, ಹೋಂ ಮೇಡ್ ನೈವೇದ್ಯ ಒಳ್ಳೆಯದು'.

'ಐದಡಿ ಗಣೇಶಾನೂ ಸಿಗಲಾರದು, ಸಾರ್ವಜನಿಕವಾಗಿ ಕೂರಿಸೋಕ್ಕೂ ನಾಲ್ಕಡಿ ರಿಸ್ಟ್ರಿಕ್ಷನ್ನು...'

'ಒಣ ಒಣ ಫೀಲಿಂಗ್. ಮೊದಲಿನ ಸ್ಥಿತಿಗೆ ಯಾವಾಗ ಬರುವುದೋ' ಕಂಠಿ ಬಂದ, ಕೈಯಲ್ಲಿ ಮೋದಕ. ಡಿಸ್ಕಷನ್ ಮಧ್ಯೆ, 'ಓವರ್ ನೈಟ್ ಡಿಸಿಷನ್ನು, ಬಾಸ್ ಓಣೀಲೂ ಗಣೇಶೋತ್ಸವ, ನಮ್ಮದೇ ಲೀಡು... ಔತಣ, ಸತ್ಕಾರ ಇದೆ, ನಿಮ್ಮನ್ನೂ ಕರೆಯೋಕ್ಕೆ ಹೇಳಿದ್ದಾರೆ' ಅಂದ.

'ಆಹಾ, ಅದೆಷ್ಟು ಸೊಗಸು!' ಹೊಸ ಉತ್ಸಾಹ ಪುಟಿಯಿತು, ಮನೆಮಂದಿಗೆಲ್ಲ ಸಡಗರ ಗಣೇಶೋತ್ಸವ ನೆನೆದು.

'ಗಂಟೆ ಏಳಾದ್ರೂ ಏಳೋಕ್ಕೇನು ಧಾಡಿ? ರಾತ್ರಿ ಪೂರ್ತಿ ಮೊಬೈಲ್ ಉಜ್ಜೋದು, ಸೂರ್ಯ ನೆತ್ತಿಗೆ ಬಂದ್ರೂ ಹಾಸಿಗೆಗೆ ಅಂಟಿರೋದು' ನನ್ನವಳ ಸುಪ್ರಭಾತ ಶುರುವಾಗಿತ್ತು, ಪುಟ್ಟಿಯನ್ನು ಉದ್ದೇಶಿಸುವ ನೆಪದಲ್ಲಿ.

ನನ್ನ ಕನಸೆಲ್ಲ ಕರಗಿ, ಕೈಯುಜ್ಜುತ್ತಾ 'ಕರಾಗ್ರೇ ವಸತೇ...' ಗುನುಗಿ ಮೇಲೆದ್ದೆ.

ಸಂಗತ

ಸಂಘರ್ಷರಹಿತ ಸರಳ ಮಾರ್ಗ

ಸರ್ಕಾರದ ವಿವಿಧ ಯೋಜನೆಗಳಿಗೆ ಗುತ್ತಿಗೆ ಆಧಾರದ ಮೇಲೆ ಭೂಮಿ ಪಡೆಯುವುದರಿಂದ ರೈತರಿಗೆ ಹೆಚ್ಚು ನೋವಾಗುವುದಿಲ್ಲ, ಅವರ ನಿರಂತರ ಆದಾಯಕ್ಕೆ ದಾರಿಯಾಗುತ್ತದೆ

• ಮಲ್ಲಿಕಾರ್ಜುನ ಹೆಗ್ಗಳಗಿ

ಕಾಲಕ್ಕೆ ವಿಚಿತ್ರ ಶಕ್ತಿಯಿದೆ ಎನಿಸುತ್ತದೆ. ತುಮಕೂರು ಜಿಲ್ಲೆಯ ಪಾವಗಡ ಕೆಲವು ವರ್ಷಗಳ ಹಿಂದೆ ತೋಳಗಳ ದಾಳಿಗೆ ಕುಖ್ಯಾತಿ ಗಳಿಸಿತ್ತು. ಈಗ ಅಲ್ಲಿ ವಿಶ್ವದ ಅತಿದೊಡ್ಡ, ದಿನಕ್ಕೆ 2,000 ಮೆಗಾವಾಟ್ ಸೌರವಿದ್ಯುತ್ ಉತ್ಪಾದಿಸುವ ಸಾಮರ್ಥ್ಯದ ಪಾರ್ಕ್ ಆರಂಭವಾಗಿ ಜಗತ್ತಿನ ಗಮನ ಸೆಳೆಯತೊಡಗಿದೆ.

ಈ ಯೋಜನೆಗೆ ದೊಡ್ಡ ಪ್ರಮಾಣದಲ್ಲಿ (12,700 ಎಕರೆ) ಭೂಮಿ ಬೇಕಾಗಿತ್ತು. ಸರ್ಕಾರವು ರೈತರಿಂದ ಭೂಮಿ ವಶಪಡಿಸಿಕೊಳ್ಳುವ ಬದಲಾಗಿ ಗುತ್ತಿಗೆ ಆಧಾರದ ಮೇಲೆ ಪಡೆದುಕೊಂಡಿರುವುದು ವಿಶೇಷ. ಭೂಮಿ ಪಡೆಯುವುದಕ್ಕಾಗಿ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಯಿತು. ಕೃಷಿ ಅಧಿಕಾರಿಗಳು ಸಮಿತಿಯ ಸದಸ್ಯರಾಗಿದ್ದರು. ಈ ಭಾಗದ ರೈತರು ವರ್ಷಕ್ಕೆ ಒಂದು ಎಕರೆಗೆ ಎಷ್ಟು ಆದಾಯ ಪಡೆಯುತ್ತಾರೆ ಎಂಬುದನ್ನು ವೈಜ್ಞಾನಿಕವಾಗಿ ಲೆಕ್ಕ ಹಾಕಲಾಯಿತು. ಇದರ ಆಧಾರದ ಮೇಲೆ ಪ್ರತೀ ಎಕರೆಗೆ ಪ್ರತೀ ವರ್ಷ ₹ 21 ಸಾವಿರ ಕೊಡುವ ಒಪ್ಪಂದ ಮಾಡಿಕೊಳ್ಳಲಾಗಿದೆ. ಎರಡು ವರ್ಷಗಳಿಗೊಮ್ಮೆ ಶೇ 5ರಷ್ಟು ಹೆಚ್ಚಿಸಲು ಅವಕಾಶವಿದೆ. ಕಳೆದ ಎರಡು ವರ್ಷಗಳಿಂದ ರೈತರು ಹಣ ಪಡೆಯುತ್ತಿದ್ದಾರೆ. 25 ವರ್ಷಗಳ ನಂತರ ಒಪ್ಪಂದದ ಮರುಪರಿಶೀಲನೆ ಮಾಡಬಹುದಾಗಿದೆ.

ಯಾವುದೇ ವಿವಾದ ಇಲ್ಲದೆ ರೈತರು ಸಂತೋಷದಿಂದ ಭೂಮಿ ನೀಡಿದ್ದಾರೆ. ಅವರ ಮಾಲೀಕತ್ವದ ಹಕ್ಕು ಉಳಿದಿದೆ. ಭೂಮಿ ನೀಡಿದ್ದಕ್ಕೆ ನಿರಂತರ ಆದಾಯದ ಗ್ಯಾರಂಟಿ ದೊರೆತಿದೆ.

ವಿಜಯಪುರ ಜಿಲ್ಲೆಯ ಕೂಡಗಿ ವಿದ್ಯುತ್ ಸ್ಥಾವರ ನಿರ್ಮಾಣಕ್ಕೆ ಭೂಮಿ ವಶಪಡಿಸಿಕೊಳ್ಳುವ ಸಂದರ್ಭದಲ್ಲಿ (2008- 2012) ಸರ್ಕಾರ ಮತ್ತು ರೈತರ ಮಧ್ಯೆ ಒಂದು ರೀತಿಯ ಯುದ್ಧವೇ ನಡೆಯಿತು. ರೈತರ ಪ್ರತಿಭಟನೆಯ ಕಾಲಕ್ಕೆ ಗುಂಡು ಹಾರಿಸಲಾಯಿತು. ರೈತರು ಕೋರ್ಟ್, ಪೊಲೀಸ್ ಠಾಣೆಗಳಿಗೆ ಅಲೆಯುತ್ತಿದ್ದಾರೆ. ಭೂಮಿಯ ಜೊತೆಗೆ ನೆಮ್ಮದಿಯನ್ನೂ ಕಳೆದುಕೊಂಡು ಮರುಗುತ್ತಿದ್ದಾರೆ.

ಸರ್ಕಾರಿ ಯೋಜನೆಗಳಿಗೆ, ಕೈಗಾರಿಕೆಗಳಿಗೆ ಭೂಮಿ ವಶಪಡಿಸಿಕೊಳ್ಳುವುದು ತೀರಾ ಕಠಿಣವಾದ ಕೆಲಸ. ಒಂದು ಪ್ರದೇಶದಲ್ಲಿ ಕೈಗಾರಿಕೆ ಬರುತ್ತದೆ ಎಂದು ಗೊತ್ತಾಗುತ್ತಲೇ ಅಲ್ಲಿ ಏಜೆಂಟರು, ಸಮಯಸಾಧಕರು, ಹೋರಾಟಗಾರರು, ಮೋಜು ನೋಡುವವರು ಹುಟ್ಟಿಕೊಳ್ಳುತ್ತಾರೆ. ಮಾರಲು ಭೂಮಾಲೀಕರ ಬಳಿ ಸರಿಯಾದ ದಾಖಲೆಗಳಿರುವುದಿಲ್ಲ. ಮೂರ್ನಾಲ್ಕು ತಲೆಮಾರುಗಳಿಂದ ವಾರಸಾ ಆಗಿರುವುದಿಲ್ಲ. ಸಹೋದರರ ನಡುವೆ ಮೌಖಿಕವಾಗಿ ಭೂಮಿ ಹಂಚಿಕೆಯಾಗಿರುತ್ತದೆ. ಆದರೆ ಅದನ್ನು ಭೂಮಿ ಕೇಂದ್ರದಲ್ಲಿ ದಾಖಲಿಸಿರುವುದಿಲ್ಲ. ಬಹಳಷ್ಟು ರೈತರು ಭೂಮಿಯ ಆಧಾರದ ಮೇಲೆ ಬ್ಯಾಂಕುಗಳಲ್ಲಿ ಸಾಲ ಪಡೆದಿರುತ್ತಾರೆ. ಅದು ಕೆಲವು ಸಂದರ್ಭದಲ್ಲಿ ಕುಟುಂಬದ ಇತರ ಸದಸ್ಯರಿಗೆ ತಿಳಿದಿರುವುದಿಲ್ಲ. ಭೂಮಿಯ ಕ್ಷೇತ್ರಮಾಹಿತಿ ಸರಿಯಾಗಿ ಇರುವುದಿಲ್ಲ. ಕೋರ್ಟಿನಲ್ಲಿ ವ್ಯಾಜ್ಯಗಳಿರುತ್ತವೆ. ಇವುಗಳನ್ನೆಲ್ಲ ಸರಿಪಡಿಸಿದ ನಂತರವೇ ಭೂಮಿ ಖರೀದಿಗೆ ಒಪ್ಪಿಗೆ ದೊರೆಯುತ್ತದೆ. ಇವನ್ನೆಲ್ಲ ನಿಭಾಯಿಸುವಲ್ಲಿ ಉದ್ದಿಮೆ ಸ್ಥಾಪಿಸುವವರ ಉತ್ಸಾಹ ಕುಗ್ಗಿ ಹೋಗುತ್ತದೆ. ಬಹಳ ಸಮಯವೂ ವ್ಯರ್ಥವಾಗುತ್ತದೆ.

ದೇಶದಲ್ಲಿ ಈಗ ಸ್ಥಾಪಿಸಲು ಉದ್ದೇಶಿಸಿರುವ ಎಲ್ಲ ಸಣ್ಣ ಹಾಗೂ ದೊಡ್ಡ ಕೈಗಾರಿಕೆಗಳು ಹಾಗೂ ಯೋಜನೆಗಳು ಸೇರಿ ಬೇಕಾಗುವ ಜಮೀನು ಶೇ 0.02ರಷ್ಟು ಭಾಗ ಮಾತ್ರ (ಅಂದರೆ 10 ಸಾವಿರ ಎಕರೆಗೆ 2 ಎಕರೆ). ದೇಶದ ಒಟ್ಟು ಸಾಗುವಳಿ ಕ್ಷೇತ್ರಕ್ಕೆ ಹೋಲಿಸಿದರೆ ಇದು ಅತಿ ಅಲ್ಪ. ಆಹಾರ ಭದ್ರತೆಗೆ ಯಾವುದೇ ತೊಂದರೆ ಇಲ್ಲ ಮಾತ್ರವಲ್ಲ, ಕೃಷಿಗೂ ಅನೇಕ ರೀತಿಯಲ್ಲಿ ನೆರವಾಗುತ್ತದೆ.

ಭೂಮಿ ವಶಪಡಿಸಿಕೊಂಡು ಖರೀದಿಸಲು ಒಮ್ಮೆಲೇ ಸಾವಿರಾರು ಕೋಟಿ ರೂಪಾಯಿ ಹೂಡಬೇಕಾಗುತ್ತದೆ. ಗುತ್ತಿಗೆ ಪಡೆಯುವುದರಿಂದ ಸರ್ಕಾರಕ್ಕೆ ಹಾಗೂ ಕೈಗಾರಿಕಾ ಸಂಸ್ಥೆಗಳಿಗೆ ದೊಡ್ಡ ಪ್ರಮಾಣದಲ್ಲಿ ಹಣ ಹೊಂದಿಸುವ ಭಾರ ಕಡಿಮೆಯಾಗುತ್ತದೆ.

ಉತ್ತರ ಕರ್ನಾಟಕ ಭಾಗದ ಕೃಷ್ಣಾ ಮೇಲ್ದಂಡೆ ಅತ್ಯಂತ ದೊಡ್ಡ ನೀರಾವರಿ ಯೋಜನೆ. ಇದಕ್ಕೆ ಎರಡು ಹಂತಗಳಲ್ಲಿ ಭೂಮಿ ವಶಪಡಿಸಿಕೊಳ್ಳಲಾಗಿದೆ. ಬೆಲೆ ನಿಗದಿ, ಪರಿಹಾರ ಹಣದ ಬಗ್ಗೆ ಬಹಳಷ್ಟು ಗೊಂದಲಗಳಿವೆ. ಈಗ ಮೂರನೇ ಹಂತಕ್ಕಾಗಿ ಸುಮಾರು 20 ಸಾವಿರ ಎಕರೆ ಭೂಮಿ ವಶಪಡಿಸಿಕೊಳ್ಳುವ ಪ್ರಕ್ರಿಯೆ ಬಿರುಸಿನಿಂದ ಆರಂಭವಾಗಿದೆ. ರೈತರು ಪ್ರತಿರೋಧ ಒಡ್ಡುತ್ತಿದ್ದಾರೆ. ಹೋರಾಟ ಉಗ್ರ ರೂಪ ಪಡೆಯುತ್ತಿದೆ.

ರೈತವರ್ಗಕ್ಕೆ ಭೂಮಿಯ ಬಗ್ಗೆ ಅಪಾರ ಪ್ರೀತಿ, ಭಕ್ತಿ ಇರುತ್ತದೆ. ಭೂಮಿಯನ್ನು ಭೂಮಾತೆ ಎಂದು ಪೂಜಿಸುತ್ತಾರೆ. ಭೂಮಿ ರೈತರ ಪಾಲಿಗೆ ಭೌತಿಕ ನೆಲವಲ್ಲ. ಅದು ಭಾವನಾತ್ಮಕ ಸಂಬಂಧ ಹೊಂದಿದ ಸಂಪತ್ತು. ರಾಜ್ಯದಲ್ಲಿ ಮಲಪ್ರಭಾ, ಘಟಪ್ರಭಾ, ಮಹದಾಯಿ, ಕಾವೇರಿ ನೀರಾವರಿ ಯೋಜನೆಗಳನ್ನು ವಿಸ್ತರಿಸುವ ಕಾರ್ಯ ನಡೆಯುತ್ತಿದೆ.

ಇದಕ್ಕೆಲ್ಲ ಸರ್ಕಾರ ಭೂಮಿ ವಶಪಡಿಸಿಕೊಳ್ಳುವುದನ್ನು ಬಿಟ್ಟು, ಪಾವಗಡ ಮಾದರಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಪಡೆದುಕೊಂಡರೆ ಸಮಸ್ಯೆ ಸರಳವಾಗಿ ಬಗೆಹರಿಯುತ್ತದೆ. ಭೂಮಿ ತಮ್ಮ ಹೆಸರಲ್ಲೇ ಉಳಿಯುವುದರಿಂದ ರೈತರಿಗೆ ಅಷ್ಟು ನೋವಾಗುವುದಿಲ್ಲ. ಹೀಗಾಗಿ, ಗುತ್ತಿಗೆ ಆಧಾರದ ಮೇಲೆ ಎಲ್ಲ ಯೋಜನೆಗಳಿಗೆ ಭೂಮಿ ಪಡೆಯುವುದು ಸರಳ ಮಾರ್ಗವಾಗಿದೆ. ರೈತರ ನಿರಂತರ ಆದಾಯಕ್ಕೂ ದಾರಿಯಾಗುತ್ತದೆ.

ಕೈಗಾರಿಕೆಗಳನ್ನು ಕಟ್ಟುವವರು ಕೂಡ ಈ ನೂತನ ವಿಧಾನ ಅನುಸರಿಸಲು ಮುಂದೆ ಬರಬೇಕು. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯೂ (ಕೆಐಎಡಿಬಿ) ಇತ್ತ ಗಮನ ಹರಿಸಬೇಕು.

ವಾಚಕರ ವಾಣಿ

ದೇಶ ಕಟ್ಟುವವರಿಗೆ ಲಸಿಕೆಯಷ್ಟೇ ಸಾಕೆ?

ಕಟ್ಟಡ ಕಾರ್ಮಿಕರಿಗೆ ಆದ್ಯತೆಯ ಮೇರೆಗೆ ಲಸಿಕೆ ಹಾಕುವ ಸರ್ಕಾರಿ ಯತ್ನ ಶ್ಲಾಘನೀಯವಾದುದು. ಆದರೆ ಕಾರ್ಮಿಕರ ದೃಷ್ಟಿಯಲ್ಲಿ ನೋಡಿದರೆ ಲಸಿಕೆ ಅವರ ಕೊನೆಯ ಆದ್ಯತೆಯೇ ಆಗಿರಬಹುದು. ಈ ಮಳೆಗಾಲದಲ್ಲಿ ಅವರು ಪ್ಲಾಸ್ಟಿಕ್ ಟೆಂಟ್ ಒಳಗೆ ಮುದುರಿ ಮಲಗಿ ಎದ್ದು, ಬೆಳಿಗ್ಗೆ ಒದ್ದೆ ಒಲೆಗೆ ಪ್ಲಾಸ್ಟಿಕ್ ತುರುಕಿ ಬೆಂಕಿ ಹೊತ್ತಿಸಿ, ಪುಟ್ಟ ಮಕ್ಕಳನ್ನು ಸುತ್ತ ಕೂರಿಸಿ ಅಡುಗೆ ಮಾಡಿಕೊಳ್ಳುವುದು, ಪ್ಲಾಸ್ಟಿಕ್ ಬಾಟಲಿ ಹಿಡಿದು ಪೊದೆಯ ಹಿಂಬದಿ ದೇಹಬಾಧೆ ತೀರಿಸಿಕೊಳ್ಳುವುದು, ಎದ್ದು ಹೋಗುವಾಗ ಉರುವಲಕ್ಕೆಂದು ಟ್ರೀ ಗಾರ್ಡ್‌ಗಳನ್ನು ಕಿತ್ತು ಸಾಗಿಸುವುದು- ಬೆಂಗಳೂರಿನಲ್ಲಿ ನಿರ್ಮಾಣ ಹಂತದಲ್ಲಿರುವ ಬಹುತೇಕ ಎಲ್ಲ ಎತ್ತರದ ಕಟ್ಟಡಗಳ ಬಳಿಯಲ್ಲಿ ಕಾಣುವ ದೃಶ್ಯ ಇದು.

ಉಳ್ಳವರಿಗಾಗಿ ಭವ್ಯ ಬಹುಮಹಡಿ ಕಟ್ಟುತ್ತ ಹೋಗುವ ಇವರ ಬದುಕನ್ನು ತುಸು ಸಹನೀಯ ಮಾಡಬಾರದೆ? ನಿರ್ಮಾಣ ನಡೆಯುವ ತಾಣದಲ್ಲಿ ಇವರಿಗೆಂದೇ ಉದ್ದುದ್ದ ಕಂಟೇನರ್ ಟ್ರಾಲಿಗಳು ನಿಂತಿರುವುದನ್ನು ಸುಧಾರಿತ ದೇಶಗಳಲ್ಲಿ ನಾನು ನೋಡಿದ್ದೇನೆ. ರೈಲು ಬೋಗಿಯಂತಿರುವ ಅಂಥ ಟ್ರಾಲಿಗಳಲ್ಲಿ ಕಾರ್ಮಿಕರಿಗೆ ತೀರ ಅಗತ್ಯವಾದ ಶುದ್ಧನೀರು, ಅಡುಗೆ, ಶೌಚ ಮತ್ತು ಆಸರೆಯ ವ್ಯವಸ್ಥೆ ಇರುತ್ತದೆ. ಕಟ್ಟಡ ನಿರ್ಮಾಣ ಕೆಲಸ ಮುಗಿಯುವವರೆಗೆ ಅಂಥ ಕೆರವಾನ್ ಟ್ರಾಲಿಗಳನ್ನು ಶ್ರಮಿಕರ ಅನುಕೂಲಕ್ಕೆಂದು ಗುತ್ತಿಗೆದಾರರು ಕಡ್ಡಾಯ ನಿಲ್ಲಿಸಿರಬೇಕೆಂದು ಕಾರ್ಮಿಕ ಇಲಾಖೆ ತಾಕೀತು ಮಾಡಬಾರದೇಕೆ? ಅದನ್ನು ನಿತ್ಯ ಚೊಕ್ಕಟ ಇಡುವ ಹೊಣೆಯನ್ನು ನಗರಪಾಲಿಕೆ ಹೊರಬೇಕು. ಬೇಕಿದ್ದರೆ ಕಾನೂನಿನಲ್ಲಿ ಚಿಕ್ಕ ಬದಲಾವಣೆಯನ್ನೂ ಮಾಡಬಹುದು. ಬೆಂಗಳೂರಿನಲ್ಲಿ ಇಂಥ ವ್ಯವಸ್ಥೆ ಜಾರಿಗೆ ಬಂದರೆ ದೇಶಕ್ಕೇ ಅದು ಮಾದರಿಯಾಗಬಹುದು. ಮಹಾನ್ ದೇಶ ಕಟ್ಟುವುದೆಂದರೆ ತೀರ ಕೆಳಹಂತದಲ್ಲೂ ತುಸು ಮಾನವೀಯ ಕಳಕಳಿ ಮತ್ತು ಪರಿಸರ ಪ್ರಜ್ಞೆಯನ್ನು ಪ್ರದರ್ಶಿಸಬೇಕಲ್ಲವೆ?

ಚಿದಂಬರ ಸಿ. ಶೀತಲಬಾವಿ, ಕೆಂಗೇರಿ

ಗೌರವಯುತ ವಿದಾಯಕ್ಕೆ ಅನುವಾಗಿಸಿ

ಅಂತ್ಯಕ್ರಿಯೆಗೆ ಪರಿಶಿಷ್ಟರು ಪರದಾಡುವ ಸ್ಥಿತಿಗೆ (ಪ್ರ.ವಾ., ಸೆ. 10) ನಿರ್ದಿಷ್ಟ ಸಮುದಾಯದವರಿಗೆ ಮಾತ್ರ ಸೀಮಿತವಾಗಿರುವ ಸ್ಮಶಾನಗಳು ಕಾರಣ. ಬದುಕಿನುದ್ದಕ್ಕೂ ಬೆನ್ನುಹತ್ತುವ ಜಾತಿ ಎಂಬ ಭೂತದಿಂದ ಶವಸಂಸ್ಕಾರಕ್ಕೆ ಅಡ್ಡಿಪಡಿಸುವ ಘಟನೆಗಳು ನಿಜಕ್ಕೂ ಅಮಾನವೀಯ. ತುಳಿತಕ್ಕೊಳಗಾದ ಬಹುತೇಕ ಸಮುದಾಯಗಳಿಗೆ ಈಗಲೂ ಉಳುಮೆಗೆ ಭೂಮಿ ಇಲ್ಲ, ಕನಿಷ್ಠ ಶವ ಹೂಳುವುದಕ್ಕಾದರೂ ಭೂಮಿ ನೀಡಿ, ಮೃತರಿಗೆ ಗೌರವಯುತ ವಿದಾಯ ಹೇಳಲು ಅನುವಾಗುವಂತೆ ಎಲ್ಲ ಜಾತಿ–ವರ್ಗಗಳೂ ಒಂದೇ ಕಡೆ ಅಂತ್ಯಸಂಸ್ಕಾರ ನೆರವೇರಿಸಲು ಅವಕಾಶ ವಾಗುವಂತೆ ಸಾಮಾನ್ಯ ಸ್ಮಶಾನಗಳನ್ನು ಸ್ಥಾಪಿಸಬೇಕು. ಇದು ಜಾತಿ ಆಧಾರಿತ ತಾರತಮ್ಯ ನಿರ್ಮೂಲನೆಯ ದಿಸೆಯಲ್ಲೂ ಒಂದು ದೃಢ ಹೆಜ್ಜೆಯಾಗಿದೆ.

ಪ್ರವೀಣ ನಾಗಪ್ಪ ಯಲವಿಗಿ, ಹಾವೇರಿ

'ಪಂಚಮ' ಸಂಪುಟ: ಮತ್ತೆ ಚಾಲನೆ ಸಿಗಲಿ

'ಪಂಚಮ'- ಕರ್ನಾಟಕ ದಲಿತ ಚಳವಳಿಯ ಇತಿಹಾಸದಲ್ಲಿ ಗುರುತರ ಪಾತ್ರ ವಹಿಸಿದ ಮಾಸಪತ್ರಿಕೆ. ಚಳವಳಿಯ ಹೆಜ್ಜೆಗುರುತುಗಳನ್ನು ನಿಷ್ಠೆಯಿಂದ ದಾಖಲಿಸಿದ ಮುಖವಾಣಿ. 70- 80ರ ದಶಕದ ಆ ಪ್ರಕ್ಷುಬ್ಧ ಕಾಲಘಟ್ಟವನ್ನು ಅಧ್ಯಯನ ಮಾಡಬಯಸುವವರಿಗೆ 'ಪಂಚಮ'ದ ಸಂಚಿಕೆಗಳು ಮಹತ್ವದ ಆಕರವೂ ಹೌದು. ತುಸು ಹಿಂದೆ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆ ಪತ್ರಿಕೆಯ ಎಲ್ಲ ಸಂಚಿಕೆಗಳನ್ನೂ ಹಲವು ಸಂಪುಟಗಳಲ್ಲಿ ಹೊರತರುವ ಯೋಜನೆಯೊಂದನ್ನು ರೂಪಿಸಿತ್ತು. ನನಗೆ ತಿಳಿದ ಮಟ್ಟಿಗೆ, ಅದಕ್ಕಾಗಿ ನಿಧಿಯನ್ನೂ ಮೀಸಲಿಟ್ಟು ಮುದ್ರಣಾಲಯವನ್ನು ನಿಗದಿಪಡಿಸುವವರೆಗೂ ಯೋಜನೆ ಮುಂದುವರಿದಿತ್ತು. ಇದು, ಅರವಿಂದ ಮಾಲಗತ್ತಿಯವರು ಅಧ್ಯಕ್ಷರಾಗಿದ್ದಾಗಿನ ಬೆಳವಣಿಗೆ. ಆಗ ದಿಢೀರನೆ ಸಂಭವಿಸಿದ ರಾಜಕೀಯ ಪಲ್ಲಟಗಳಿಂದಾಗಿ ಮಾಲಗತ್ತಿ ಬದಲಾದರು. ಆ ಜಾಗಕ್ಕೆ ವಸಂತಕುಮಾರ್ ಬಂದರು. ದುರದೃಷ್ಟದ ಸಂಗತಿಯೆಂದರೆ, ಅಧ್ಯಕ್ಷರು ಬದಲಾದಂತೆ ಆ ಯೋಜನೆಯೂ ಹಿನ್ನೆಲೆಗೆ ಸರಿದುಹೋಗಿದೆ! ಹಾಗಾಗಬೇಕಿಲ್ಲ. ಪಂಚಮ ಸಂಪುಟಗಳ ಪ್ರಕಟಣೆ ಒಂದು ಅತ್ಯುಪಯುಕ್ತ ಯೋಜನೆ. ಅಧ್ಯಕ್ಷರು ಬದಲಾದ ಮಾತ್ರಕ್ಕೆ ಐತಿಹಾಸಿಕ ಮಹತ್ವದ ಒಂದು ಸಾಹಿತ್ಯಿಕ ಚಟುವಟಿಕೆ ನಿಂತುಹೋಗಬೇಕಿಲ್ಲ. ಮತ್ತು ಪಂಚಮ ಪ್ರಕಟಣೆ ವಿಷಯದಲ್ಲಿ ಈಗಿನ ಅಧ್ಯಕ್ಷರಿಗೆ ಯಾವುದೇ ಆಕ್ಷೇಪಗಳಿರಲು ಸಾಧ್ಯವಿಲ್ಲ. ಅವರು ಮುತುವರ್ಜಿ ವಹಿಸಿ ಅತಿ ಶೀಘ್ರದಲ್ಲಿ 'ಪಂಚಮ' ಸಂಪುಟಗಳನ್ನು ಹೊರತರಬೇಕೆಂಬುದು ನನ್ನಂಥ ಎಲ್ಲ ಸಾಹಿತ್ಯಾಸಕ್ತರ ಒತ್ತಾಯ.

ಎನ್.ಎಸ್.ಶಂಕರ್, ಬೆಂಗಳೂರು

ಡಿಎಂಎಫ್ ನಿಧಿ: ಜನಮುಖಿಯಾಗಬೇಕಿದೆ

ಗಣಿಗಾರಿಕೆಯಿಂದ (ಅಕ್ರಮ-ಸಕ್ರಮ) ಉಂಟಾಗುವ ಪರಿಸರ, ಆರೋಗ್ಯ, ಕೃಷಿ ಮುಂತಾದವುಗಳ ಮೇಲಿನ ಹಾನಿಯನ್ನು ಸರಿಪಡಿಸಲು 2015ರಲ್ಲಿ ಎಂಎಂಆರ್‌ಡಿ– 1957 ಕಾಯ್ದೆಯ ತಿದ್ದುಪಡಿ ಮೂಲಕ ಅಸ್ತಿತ್ವಕ್ಕೆ ಬಂದ ವ್ಯವಸ್ಥೆ ಜಿಲ್ಲಾ ಗಣಿಗಾರಿಕೆ ಪ್ರತಿಷ್ಠಾನ (ಡಿಎಂಎಫ್). ಗಣಿಗಾರಿಕೆಯಿಂದ ಬಾಧಿತವಾದ ಪ್ರದೇಶ ಮತ್ತು ಗಣಿಬಾಧಿತ ಜನರ ಪುನಶ್ಚೇತನ ಇದರ ಪ್ರಮುಖ ಉದ್ದೇಶ. ಆದರೆ ಬಳ್ಳಾರಿ ಜಿಲ್ಲೆಯಲ್ಲಿ ಡಿಎಂಎಫ್ ನಿಧಿಯನ್ನು ನಗರ ಪ್ರದೇಶಗಳಲ್ಲಿ ಬಸ್ ತಂಗುದಾಣಗಳನ್ನು ನಿರ್ಮಿಸಲು ಬಳಸಲಾಗುತ್ತಿದೆ (ಹೊಸಪೇಟೆಯಲ್ಲಿ ಇದನ್ನು ನಾನೇ ನೋಡಿದ್ದೇನೆ). ಇದೀಗ ಜನಪ್ರತಿನಿಧಿಗಳು ಈ ನಿಧಿಗಾಗಿ ಕಿತ್ತಾಡುತ್ತಿದ್ದಾರೆ (ಪ್ರ.ವಾ., ಸೆ. 10).

ಕಾಂಟ್ರಾಕ್ಟ್‌ಗಿರಿ-ಕಾಮಗಾರಿ ಸಾಂದ್ರ ಚಟುವಟಿಕೆಗಳಿಗೆ ಇದು ವೆಚ್ಚವಾಗುತ್ತಿದೆ. ಗ್ರಾಮೀಣ ಜನರ ಬದುಕು-ಬವಣೆ ಇಲ್ಲಿ ಮುಖ್ಯವಾಗಿಲ್ಲ. ಅವಿಭಜಿತ ಬಳ್ಳಾರಿ ಜಿಲ್ಲೆಯು ರಾಜ್ಯದ 30 ಜಿಲ್ಲೆಗಳ ಪೈಕಿ ತಲಾ ವರಮಾನದಲ್ಲಿ 12ನೆಯ ಸ್ಥಾನದಲ್ಲಿದ್ದರೆ (2018-19), ಸಾಕ್ಷರತೆಯಲ್ಲಿ (2011) 25ನೆಯ ಸ್ಥಾನದಲ್ಲಿದೆ. ಆರೋಗ್ಯ ಸೂಚ್ಯಂಕದಲ್ಲಿ ಇದು 28ನೆಯ ಸ್ಥಾನದಲ್ಲಿದೆ. ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ 26ನೆಯ ಸ್ಥಾನದಲ್ಲಿದೆ (ಮೂಲ: ಕರ್ನಾಟಕ ಮಾನವ ಅಭಿವೃದ್ಧಿ ವರದಿ– 2015). ಡಾ. ಡಿ.ಎಂ.ನಂಜುಂಡಪ್ಪ ವರದಿ ಪ್ರಕಾರ, ಬಳ್ಳಾರಿ ಮತ್ತು ಹೊಸಪೇಟೆ ತಾಲ್ಲೂಕುಗಳು ಅತ್ಯಂತ ಮುಂದುವರಿದ ಸ್ಥಿತಿಯಲ್ಲಿದ್ದರೆ, ಸಂಡೂರು ಅತ್ಯಂತ ಹಿಂದುಳಿದ ಸ್ಥಿತಿಯಲ್ಲಿದೆ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಡಿಎಂಎಫ್ ಕ್ರಿಯಾ ಯೋಜನೆ ಸಿದ್ಧಪಡಿಸಬೇಕು. ಇದು ಸಾಧ್ಯವಾಗಿಲ್ಲ. ನಿಧಿಗಾಗಿ ಕಿತ್ತಾಡುವುದಕ್ಕೆ ಪ್ರತಿಯಾಗಿ ಜನಮುಖಿಯಾದ ಯೋಜನೆ ಸಿದ್ಧಪಡಿಸುವುದರ ಬಗ್ಗೆ ಜನಪ್ರತಿನಿಧಿಗಳು ಕ್ರಿಯಾಶೀಲರಾಗಬೇಕು. ಮೂರು ನೂರು- ನಾಲ್ಕು ನೂರು ಕೋಟಿ ಮೊತ್ತದ ಡಿಎಂಎಫ್ ನಿಧಿಗೆ ಇವರು ಕಿತ್ತಾಡುತ್ತಿದ್ದರೆ, ಗಣಿ ಬಾಧಿತ ಪ್ರದೇಶದ ಪುನಶ್ಚೇತನಕ್ಕಾಗಿ ಇರುವ ₹ 16 ಸಾವಿರ ಕೋಟಿ ಮೊತ್ತದ ಯೋಜನೆ ಜಾರಿಗೊಂಡ ಮೇಲೆ ಇವರು ಇನ್ನೆಷ್ಟು ಕಿತ್ತಾಡಬಹುದು?

ಟಿ.ಆರ್.ಚಂದ್ರಶೇಖರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮುಕ್ತ ಮಾರುಕಟ್ಟೆ

ಕೃಷಿ ಸಂಕಟಕ್ಕೆ ಕೊಡದು ಮುಕ್ತಿ

• ದೇವೀಂದರ್ ಶರ್ಮಾ



ಕೃಷಿ ಕಾಯ್ದೆಗಳ ವಿರುದ್ಧ ಉತ್ತರ ಪ್ರದೇಶದ ಮುಜಫ್ಫರ್‌ನಗರದಲ್ಲಿ ರೈತರು ಇತ್ತೀಚೆಗೆ ನಡೆಸಿದ ಮಹಾಪಂಚಾಯಿತಿ – ಪಿಟಿಐ ಚಿತ್ರ

ಭಾರತವು ಆರ್ಥಿಕ ಸುಧಾರಣೆಗಳ 30ನೇ ವರ್ಷವನ್ನು ಸಂಭ್ರಮಿಸುವ ಈ ಹೊತ್ತಿನಲ್ಲಿಯೂ ಕೃಷಿ ವಲಯದ ಕಡೆಗಣನೆ ಮುಂದುವರಿದಿದೆ. ಗಮನ ಹರಿಸಿ ಎಂದು ಈ ವಲಯವು ಬೇಡುತ್ತಲೇ ಇದೆ. ಎದೆತಟ್ಟಿ ಹೆಮ್ಮೆ ಪಡುವ ಆರ್ಥಿಕ ಸುಧಾರಣೆಗಳ ಮೂಲ ಪ್ರತಿಪಾದಕರು ಈ ವಿಚಾರವನ್ನು ಅರ್ಥ ಮಾಡಿಕೊಳ್ಳಲು ವಿಫಲರಾದರು. ಪ್ರಗತಿಯ ಎರಡನೇ ಎಂಜಿನ್ ಆಗಿ ಕೃಷಿಯನ್ನು ಪರಿವರ್ತಿಸಿಕೊಳ್ಳುವ ಅವಕಾಶವನ್ನು ಈ ಪ್ರಕ್ರಿಯೆಯಲ್ಲಿ ದೇಶವು ಕಳೆದುಕೊಂಡಿತು.

2016ರ ಆರ್ಥಿಕ ಸಮೀಕ್ಷೆಯು ಕಟು ವಾಸ್ತವ ಏನು ಎಂಬುದನ್ನು ಬಿಚ್ಚಿಟ್ಟಿದೆ. ಭಾರತದ 17 ರಾಜ್ಯಗಳ ರೈತರ ಸರಾಸರಿ ಆದಾಯವು ವರ್ಷಕ್ಕೆ ಕೇವಲ ₹20 ಸಾವಿರ. ಅಂದರೆ ದೇಶದ ಅರ್ಧ ಭಾಗದಷ್ಟು ಪ್ರದೇಶಗಳ ರೈತರು ತಿಂಗಳಿಗೆ ಬರೇ 1,700 ರೂಪಾಯಿಯಲ್ಲಿ ಜೀವನ ಸಾಗಿಸಬೇಕಿದೆ. 2011–12 ಮತ್ತು 2015–16ರ ಅವಧಿಯಲ್ಲಿ ಕೃಷಿ ಆದಾಯ ಏರಿಕೆಯು ಅರ್ಧ ಶೇಕಡಕ್ಕಿಂತಲೂ ಕಡಿಮೆ ಎಂದು ನೀತಿ ಆಯೋಗವೇ ಒಪ್ಪಿಕೊಂಡಿದೆ. ನಿಖರವಾಗಿ ಹೇಳುವುದಾದರೆ, ಬೆಳವಣಿಗೆಯ ದರವು ಶೇ 0.44ರಷ್ಟು. ಮುಂದಿನ ಎರಡು ವರ್ಷಗಳಲ್ಲಿ ದಾಖಲಾದ ಕೃಷಿ ಆದಾಯದ ಏರಿಕೆಯು ಸೊನ್ನೆಯ ಹತ್ತಿರವೇ ಇತ್ತು.

ಬೇಸಾಯ ವಲಯದ ಆದಾಯದ ದರವು ಮೂರು ದಶಕಗಳಲ್ಲಿ ಇಳಿಕೆಯಾಗಿದೆ ಅಥವಾ ಸ್ಥಗಿತವಾಗಿಯೇ ಉಳಿದಿದೆ. ಹೊಲದಿಂದ ಬರುವ ಆದಾಯವು ಕಡಿಮೆಯಾಗಲು ಕಾರಣ ಕೃಷಿಯು ಅನುತ್ಪಾದಕವಾಗಿದ್ದು ಅಥವಾ ಅದಕ್ಷವಾಗಿದ್ದು ಅಲ್ಲ. ಆರ್ಥಿಕ ಸುಧಾರಣೆಗಳನ್ನು ಕಾರ್ಯಸಾಧು ಎಂಬ ಸ್ಥಿತಿಯಲ್ಲಿ ಉಳಿಸುವುದಕ್ಕಾಗಿ ನಗರದೆಡೆಗಿನ ಭಾರಿ ವಲಸೆಯನ್ನು ಅವಲಂಬಿಸಿದ ಆರ್ಥಿಕ ಸುಧಾರಣೆ ವಿನ್ಯಾಸವು ಕೃಷಿಯ ಹಿನ್ನಡೆಗೆ ಒಂದು ಕಾರಣ. ಹಲವು ಬಾರಿ ನಾನು ಹೇಳಿರುವಂತೆ, ರೈತರು ಕೃಷಿಯನ್ನು ತೊರೆದು ನಗರಗಳತ್ತ ಹೋಗುವಂತೆ ಮಾಡುವುದಕ್ಕಾಗಿಯೇ ಬೇಸಾಯವನ್ನು ಬಡಕಲು ಕ್ಷೇತ್ರವಾಗಿ ಉದ್ದೇಶಪೂರ್ವಕಾಗಿಯೇ ಉಳಿಸಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಕೂಲಿಯ ಮೊತ್ತವನ್ನು ಕಡಿಮೆಯಾಗಿಯೇ ಇರಿಸುವ ಮೂಲಕ ನಗರಗಳತ್ತ ವಲಸೆಯನ್ನು ಹೆಚ್ಚಿಸಬೇಕಿದೆ ಎಂದು ಹಿರಿಯ ಆರ್ಥಿಕ ಸಲಹೆಗಾರರೊಬ್ಬರು ಇತ್ತೀಚೆಗೆ ಹೇಳಿದ್ದರು.

ಕೃಷಿ ಕ್ಷೇತ್ರದ ಸಂಕಷ್ಟವು ಕಳೆದ ಹಲವು ವರ್ಷಗಳಿಂದ ಹೆಚ್ಚುತ್ತಲೇ ಹೋಗಿದೆ. ಎಂದೂ ನಿಲ್ಲದ ರೈತರ ಆತ್ಮಹತ್ಯೆ ಪ್ರಕರಣಗಳು ಬೇಸಾಯ ವಲಯದ ಬಿಕ್ಕಟ್ಟು ಎಷ್ಟು ತೀವ್ರವಾಗಿದೆ ಎಂಬುದರ ಪ್ರತಿಫಲನವಾಗಿದೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ ವರದಿಯ ಪ್ರಕಾರ, ಕಳೆದ 25 ವರ್ಷಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರು ಮತ್ತು ಕೃಷಿ ಕಾರ್ಮಿಕರ ಸಂಖ್ಯೆಯು 3.5 ಲಕ್ಷಕ್ಕೂ ಹೆಚ್ಚು. ದೇಶದ ಆಹಾರ ಕಣಜ ಎಂದೇ ಹೇಳಲಾಗುವ ಪಂಜಾಬ್‌ನಲ್ಲಿ ಕೂಡ ರೈತರ ಆತ್ಮಹತ್ಯೆ ಪ್ರಕರಣಗಳು ಕಡಿಮೆ ಇಲ್ಲ. 2000ದಿಂದ 2015ರೊಳಗಿನ 15 ವರ್ಷಗಳಲ್ಲಿ 16,600 ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂಬುದು ಪಂಜಾಬ್‌ನಲ್ಲಿ ನಡೆದ ಮನೆ ಮನೆ ಸಮೀಕ್ಷೆಯಿಂದ ತಿಳಿದು ಬಂದಿದೆ. ಪಂಜಾಬ್ ಕೃಷಿ ವಿಶ್ವವಿದ್ಯಾಲಯ, ಲುಧಿಯಾನ, ಪಂಜಾಬ್ ವಿಶ್ವವಿದ್ಯಾಲಯ, ಪಟಿಯಾಲ ಮತ್ತು ಗುರುನಾನಕ್ ದೇವ್ ವಿಶ್ವವಿದ್ಯಾಲಯ, ಅಮೃತಸರ ಜಂಟಿಯಾಗಿ ಈ ಸಮೀಕ್ಷೆಯನ್ನು ನಡೆಸಿದ್ದವು.

ಇಷ್ಟೆಲ್ಲ ಆರ್ಥಿಕ ಸಂಕಷ್ಟಗಳ ನಡುವೆಯೂ ಭಾರತದ ರೈತರು ಭಾರಿ ಫಸಲು ತೆಗೆಯುವುದಕ್ಕಾಗಿ ಪ್ರತಿ ವರ್ಷವೂ ಕಠಿಣ ಪರಿಶ್ರಮ ಪಡುತ್ತಿದ್ದಾರೆ. ದೇಶದ ಆಹಾರ ದಾಸ್ತಾನು ತುಂಬಿ ತುಳುಕುತ್ತಿದೆ. ಈಗ, 10 ಕೋಟಿ ಟನ್ ಆಹಾರ ಧಾನ್ಯಗಳ ಹೆಚ್ಚುವರಿ ದಾಸ್ತಾನು ಇದೆ. ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ ಅಡಿಯಲ್ಲಿ 80 ಕೋಟಿ ಜನರಿಗೆ ಮಿತದರದಲ್ಲಿ ಪಡಿತರ ಒದಗಿಸಲು ಇದರಿಂದ ಸಾಧ್ಯವಾಗಿದೆ. ಇದಲ್ಲದೆ, ಲಾಕ್‌ಡೌನ್ ಅವಧಿಯಲ್ಲಿ ಅಗತ್ಯ ಇದ್ದವರಿಗೆ ಉಚಿತ ಪಡಿತರವನ್ನೂ ವಿತರಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ, ಕೋವಿಡ್ ಸಾಂಕ್ರಾಮಿಕದಿಂದಾಗಿ ಅರ್ಥ ವ್ಯವಸ್ಥೆ ಕುಗ್ಗಿದೆ. ಆದರೆ, ಆರೋಗ್ಯಕರ ಮತ್ತು ದೊಡ್ಡ ಪ್ರಮಾಣದ ಪ್ರಗತಿಯನ್ನು ಕೃಷಿ ಕ್ಷೇತ್ರವು ದಾಖಲಿಸಿದೆ. ದೇಶಕ್ಕೆ ಬೇಕಿರುವುದು ಈ ರೀತಿಯ ಕೃಷಿ ಕ್ಷೇತ್ರ ಎಂಬುದನ್ನು ಇದು ತೋರಿಸಿಕೊಟ್ಟಿದೆ.

ಆರ್ಥಿಕ ಸುಧಾರಣೆಗಳನ್ನು ಕಾರ್ಯಸಾಧು ಎಂಬ ಸ್ಥಿತಿಯಲ್ಲಿ ಉಳಿಸುವುದಕ್ಕಾಗಿ ನಗರದೆಡೆಗಿನ ಭಾರಿ ವಲಸೆಯನ್ನು ಅವಲಂಬಿಸಿದ ಆರ್ಥಿಕ ಸುಧಾರಣೆ ವಿನ್ಯಾಸವು ಕೃಷಿಯ ಹಿನ್ನಡೆಗೆ ಒಂದು ಕಾರಣ. ರೈತರು ಕೃಷಿಯನ್ನು ತೊರೆದು ನಗರಗಳತ್ತ ಹೋಗುವಂತೆ ಮಾಡುವುದಕ್ಕಾಗಿಯೇ ಬೇಸಾಯವನ್ನು ಬಡಕಲು ಕ್ಷೇತ್ರವಾಗಿ ಉದ್ದೇಶಪೂರ್ವಕವಾಗಿಯೇ ಉಳಿಸಲಾಗಿದೆ

ಸುಧಾರಣೆ ಎಂದರೆ ಖಾಸಗೀಕರಣ ಎಂಬ ಮೇಲ್ಪದರದ ಗ್ರಹಿಕೆಯನ್ನಷ್ಟೇ ಸರ್ಕಾರವು ಇರಿಸಿಕೊಂಡಿದೆ. ಕೃಷಿಗೆ ಸಂಬಂಧಿಸಿ ಮೂರು ಕಾಯ್ದೆಗಳನ್ನು ತಂದಿರುವ ಕೇಂದ್ರ ಸರ್ಕಾರವು, ಈ ಕಾಯ್ದೆಗಳಿಂದಾಗಿ ಕೃಷಿ ಕ್ಷೇತ್ರದಲ್ಲಿ ಖಾಸಗಿ ಹೂಡಿಕೆ ಹೆಚ್ಚಲಿದೆ, ಮುಕ್ತ ಮಾರುಕಟ್ಟೆ ಸಾಧ್ಯವಾಗಲಿದೆ ಮತ್ತು ಆ ಮೂಲಕ ರೈತರ ಆದಾಯ ಹೆಚ್ಚಲಿದೆ ಎಂದು ಹೇಳುತ್ತಿದೆ. ಈ ಕಾಯ್ದೆಗಳ ವಿರುದ್ಧ ರೈತರು ಭಾರಿ ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಕಾಯ್ದೆಗಳನ್ನು ಹಿಂದಕ್ಕೆ ಪಡೆಯಬೇಕು ಎಂದು ಒತ್ತಾಯಿಸಿ ದೆಹಲಿಯ ಗಡಿಗಳಲ್ಲಿ ಒಂಬತ್ತು ತಿಂಗಳಿಂದ ಪ್ರತಿಭಟನೆ ಮಾಡುತ್ತಿದ್ದಾರೆ. ಕಾಯ್ದೆಗಳಿಂದಾಗಿ ತಾವೆಲ್ಲರೂ ಉದ್ಯಮ ಕ್ಷೇತ್ರದ ನಿಯಂತ್ರಣಕ್ಕೆ ಒಳಪಡಲಿದ್ದೇವೆ, ತಮ್ಮನ್ನು ಕೃಷಿ ಕ್ಷೇತ್ರದಿಂದ ಹೊರದಬ್ಬಲಾಗುವುದು ಹಾಗೂ ತಮ್ಮ ಆದಾಯವು ಇನ್ನಷ್ಟು ತಳಕ್ಕೆ ಕುಸಿಯಲಿದೆ ಎಂಬ ಭೀತಿಯು ಈ ರೈತರಲ್ಲಿ ಇದೆ. ಕಾಯ್ದೆಗಳನ್ನು ಹಿಂದಕ್ಕೆ ಪಡೆಯಬೇಕು ಎಂಬುದರ ಜತೆಗೆ, ಪ್ರತಿ ವರ್ಷ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಘೋಷಿಸಲಾಗುವ ಎಲ್ಲ 23 ಬೆಳೆಗಳ ಎಂಎಸ್‌ಪಿಯನ್ನು ಕಾನೂನುಬದ್ಧ ಹಕ್ಕಾಗಿಸಬೇಕು ಎಂಬ ಬೇಡಿಕೆಯನ್ನೂ ರೈತರು ಮುಂದಿಟ್ಟಿದ್ದಾರೆ.

ಕೃಷಿ ಕಾಯ್ದೆಗಳನ್ನು ಕುರಿತ ಬಿಕ್ಕಟ್ಟು ಮುಂದುವರಿದಿದೆ. ಜಗತ್ತಿನ ಎಲ್ಲಿಯೂ ಮುಕ್ತ ಮಾರುಕಟ್ಟೆಯು ರೈತರ ಆದಾಯವನ್ನು ಹೆಚ್ಚಿಸಿಲ್ಲ ಎಂಬ ವಾಸ್ತವವನ್ನು ನಾವು ಅರ್ಥ ಮಾಡಿಕೊಳ್ಳಬೇಕಿದೆ. ಒಟ್ಟು ಜನಸಂಖ್ಯೆಯ ಶೇ 2ಕ್ಕಿಂತ ಕಡಿಮೆ ಜನರು ಮಾತ್ರ ಕೃಷಿ ಕ್ಷೇತ್ರದಲ್ಲಿ ತೊಡಗಿಕೊಂಡಿರುವ ಅಮೆರಿಕದಲ್ಲಿ ಕೂಡ ಕಳೆದ 10 ವರ್ಷಗಳಿಂದ ರೈತರ ಸರಾಸರಿ ಆದಾಯವು ಕುಸಿಯುತ್ತಿದೆ. ಸರ್ಕಾರವು ಭಾರಿ ಸಹಾಯಧನ ನೀಡುತ್ತಿದ್ದರೂ 2020ರ ಜುಲೈನಲ್ಲಿ ಅಮೆರಿಕದ ರೈತರ ಒಟ್ಟು ಸಾಲವು ₹30 ಲಕ್ಷ ಕೋಟಿಗೂ ಹೆಚ್ಚು. ಅಮೆರಿಕದ ಕೃಷಿ ಕ್ಷೇತ್ರ ಕೂಡ ತೀವ್ರವಾದ ಬಿಕ್ಕಟ್ಟು ಎದುರಿಸುತ್ತಿದೆ. ಅಲ್ಲಿ, ನಗರ ಪ್ರದೇಶಕ್ಕೆ ಹೋಲಿಸಿದರೆ ಗ್ರಾಮೀಣ ಪ್ರದೇಶದಲ್ಲಿ ಆತ್ಮಹತ್ಯೆ ಪ್ರಮಾಣವು ಶೇ 45ರಷ್ಟು ಹೆಚ್ಚು. ಐರೋಪ್ಯ ಒಕ್ಕೂಟದ ದೇಶಗಳಲ್ಲಿಯೂ ಕೃಷಿ ಬಿಕ್ಕಟ್ಟು ಇದೆ. ಆಕ್ರೋಶಗೊಂಡಿರುವ ರೈತರು ಹಲವು ನಗರಗಳಲ್ಲಿ ಟ್ರ್ಯಾಕ್ಟರ್ ಪ್ರತಿಭಟನೆಗಳನ್ನು ನಡೆಸಿದ್ದಾರೆ. ಹೆಚ್ಚು ದರ ದೊರೆಯಬೇಕು ಮತ್ತು ದರದ ಖಾತರಿ ಇರಬೇಕು ಎಂಬುದು ಅವರ ಬೇಡಿಕೆಗಳಾಗಿವೆ. ಕೃಷಿ ಕ್ಷೇತ್ರಕ್ಕೆ ಪ್ರತಿ ವರ್ಷ ನೀಡುವ ಸಹಾಯಧನದ ಮೊತ್ತವು ಸುಮಾರು ₹7.4 ಲಕ್ಷ ಕೋಟಿ. ಅದರಲ್ಲಿ ಶೇ 50ರಷ್ಟು ನೇರ ನಗದು ಬೆಂಬಲವಾಗಿಯೇ ಬಳಕೆ ಆಗುತ್ತಿದೆ.

ಶ್ರೀಮಂತ ಮತ್ತು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಕೂಡ ಮುಕ್ತ ಮಾರುಕಟ್ಟೆ ವ್ಯವಸ್ಥೆಯು ರೈತರ ಆದಾಯವನ್ನು ಹೆಚ್ಚಿಸುವಲ್ಲಿ ವಿಫಲವಾಗಿದೆ ಎಂಬುದು ನಮ್ಮ ಆರ್ಥಿಕ ಚಿಂತನೆ ಹಾಗೂ ಧೋರಣೆಯಲ್ಲಿಯೇ ಮೂಲಭೂತ ಸಮಸ್ಯೆ ಇದೆ ಎಂಬುದನ್ನು ಸೂಚಿಸುತ್ತದೆ. ವಿದೇಶದಿಂದ ಎರವಲು ಪಡೆಯುವ ಬದಲು ನಮ್ಮದೇ ಮಾದರಿಗಳನ್ನು ರೂಪಿಸಿಕೊಳ್ಳುವುದು, ನಮ್ಮ ಶಕ್ತಿ ಏನು ಎಂಬುದನ್ನು ಅರ್ಥ ಮಾಡಿಕೊಂಡು ಅದರ ಮೇಲೆ ಅವಲಂಬಿತವಾಗುವುದು, ನಮ್ಮ ಅಗತ್ಯಗಳಿಗೆ ಅನುಗುಣವಾಗಿ ಇರುವುದು ಮುಖ್ಯ.

ಅಂದರೆ, ಭಾರತದ ನೀತಿ ನಿರೂಪಕರು, ದೇಶದ ಆರ್ಥಿಕ ಪ್ರಗತಿಯಲ್ಲಿ ಕೃಷಿಯನ್ನು ಎರಡನೇ ಎಂಜಿನ್ ಆಗಿಸಿದ ದೇಶೀ ಆರ್ಥಿಕ ಸುಧಾರಣೆಯ ಮಾದರಿಯೊಂದನ್ನು ರೂಪಿಸಬೇಕು.

ಜನರನ್ನು ಕೃಷಿಯಿಂದ ಹೊರಗೆ ದಬ್ಬುವ ಬದಲು, ಸಣ್ಣ ರೈತರ ಕೈಗೆ ಹೆಚ್ಚು ಆದಾಯ ದೊರಕುವಂತೆ ಮಾಡಲು ಒತ್ತು ಕೊಡಬೇಕು. ಪ್ರಧಾನಿಯವರ ಸಬ್‌ಕಾ ಸಾಥ್ ಸಬ್‌ಕಾ ವಿಕಾಸ್ ಎಂಬ ಧ್ಯೇಯವನ್ನು ಸಾಧಿಸುವುದಕ್ಕಾಗಿ ಕೃಷಿಯನ್ನು ಸುಸ್ಥಿರವೂ ಆರ್ಥಿಕವಾಗಿ ಕಾರ್ಯಸಾಧುವೂ ಮಾಡಬೇಕಿದೆ. ಕೃಷಿ ಆರ್ಥಿಕತೆಗೆ ಹೊಸತಾಗಿ ಮೂರು ಸ್ತಂಭಗಳನ್ನು ಕಟ್ಟುವ ಮೂಲಕ ಇದು ಸಾಧ್ಯವಿದೆ:

1. ಎಂಎಸ್‌ಪಿಯನ್ನು ರೈತರ ಕಾನೂನುಬದ್ಧ ಹಕ್ಕಾಗಿಸಿ; ಈ ದರಕ್ಕಿಂತ ಕಡಿಮೆಗೆ ಯಾವುದೇ ವಹಿವಾಟು ನಡೆಯದಂತೆ ನೋಡಿಕೊಳ್ಳಿ. ಇದುವೇ ರೈತರ ನಿಜವಾದ ಸ್ವಾತಂತ್ರ್ಯ.
2. ಎಪಿಎಂಸಿ ನಿಯಂತ್ರಿತ ಮಂಡಿಗಳ ಜಾಲವನ್ನು ಇನ್ನಷ್ಟು ವಿಸ್ತರಿಸಿ. ದೇಶದಲ್ಲಿ ಈಗ ಸುಮಾರು ಏಳು ಸಾವಿರ ಎಪಿಎಂಸಿ ಮಂಡಿಗಳಿವೆ. ಪ್ರತಿ 5 ಕಿ.ಮೀ. ಸುತ್ತಳತೆಯ ಪ್ರದೇಶಕ್ಕೆ ಒಂದು ಮಂಡಿ ಬೇಕು ಅಂದರೂ ದೇಶದಲ್ಲಿ ಒಟ್ಟು 42 ಸಾವಿರ ಮಂಡಿಗಳು ಇರಬೇಕಾಗುತ್ತದೆ.
3. ಅಮುಲ್ ಡೈರಿ ಸಹಕಾರ ಸಂಘದ ಯಶಸ್ವಿ ಮಾದರಿಯನ್ನು ತರಕಾರಿ, ಹಣ್ಣು, ಧಾನ್ಯ ಮತ್ತು ಎಣ್ಣೆ ಕಾಳುಗಳಿಗೂ ವಿಸ್ತರಿಸಲು ಅಗತ್ಯವಾದ ಹೂಡಿಕೆ ಮತ್ತು ಅವಕಾಶಗಳನ್ನು ಒದಗಿಸಿ.

ಲೇಖಕ: ಬರಹಗಾರ ಮತ್ತು ಕೃಷಿ ವಿಶ್ಲೇಷಕ

ಭೂಪೇಂದ್ರ ಪಟೇಲ್ ಮತ್ತು ವಿಜಯ ರೂಪಾಣಿ

ಭೂಪೇಂದ್ರಗೆ ಗುಜರಾತ್ ಚುಕ್ಕಾಣಿ

ಮೋದಿ ತವರಿಗೆ ಅಚ್ಚರಿಯ ಆಯ್ಕೆ

ಅಹಮದಾಬಾದ್ (ಪಿಟಿಐ): ಗುಜರಾತ್ ಮುಖ್ಯಮಂತ್ರಿ ಹುದ್ದೆಗೆ ಬಿಜೆಪಿ ಶಾಸಕಾಂಗ ಪಕ್ಷವು ಸರ್ವಾನುಮತದಿಂದ ಆಯ್ಕೆ ಮಾಡಿರುವ ಭೂಪೇಂದ್ರ ಪಟೇಲ್ ಅವರು ತಳಮಟ್ಟದಿಂದ ಹಂತ ಹಂತವಾಗಿ ಬೆಳೆದವರು. ನಗರಸಭೆಯಿಂದ ತಮ್ಮ ರಾಜಕೀಯ ಆರಂಭಿಸಿದವರು. ಅವರು ಮಿದುಭಾಷಿ.

2017ರಲ್ಲಿ ಅವರು ಘಟ್ಲೋಡಿಯಾ ಕ್ಷೇತ್ರದಿಂದ ಮೊದಲ ಬಾರಿ ವಿಧಾನಸಭಾ ಚುನಾವಣೆ ಎದುರಿಸಿದರು. ಆದರೆ, ಆ ಚುನಾವಣೆಯಲ್ಲಿ ಗರಿಷ್ಠ ಅಂತರದಲ್ಲಿ ಗೆದ್ದರು. ಅವರ ಗೆಲುವಿನ ಅಂತರ 1.17 ಲಕ್ಷ ಮತಗಳು.

ಹತ್ತಿರದವರು ಅವರನ್ನು 'ದಾದಾ' ಎಂದು ಕರೆಯುತ್ತಾರೆ. ಗುಜರಾತಿನ ಮಾಜಿ ಮುಖ್ಯಮಂತ್ರಿ ಮತ್ತು ಉತ್ತರ ಪ್ರದೇಶ ರಾಜ್ಯಪಾಲೆ ಆಗಿರುವ ಆನಂದಿಬೆನ್ ಪಟೇಲ್ ಅವರಿಗೆ ಭೂಪೇಂದ್ರ ಅವರು ನಿಕಟವರ್ತಿ. ಹಿಂದೆ ಆನಂದಿಬೆನ್ ಅವರು ಪ್ರತಿನಿಧಿಸಿದ್ದ ವಿಧಾನಸಭಾ ಕ್ಷೇತ್ರದಿಂದಲೇ ಭೂಪೇಂದ್ರ ಅವರೂ ಗೆದ್ದಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪ್ರತಿನಿಧಿಸುವ ಗಾಂಧಿನಗರ ಲೋಕಸಭಾ ಕ್ಷೇತ್ರದ ಭಾಗವಾಗಿದೆ ಈ ಕ್ಷೇತ್ರ.

ಭೂಪೇಂದ್ರ ಅವರು ಅಹಮದಾಬಾದ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ 2015–17ರ ಅವಧಿಯಲ್ಲಿ ಕೆಲಸ ಮಾಡಿದ್ದರು. ಅದಕ್ಕೂ ಮೊದಲು ಅಹಮದಾಬಾದ್ ನಗರ ಪಾಲಿಕೆಯ ಸ್ಥಾಯಿ ಸಮಿತಿ ಅಧ್ಯಕ್ಷರಾಗಿದ್ದರು. 2010ರಿಂದ 2015ರವರೆಗೆ ಈ ಹುದ್ದೆಯಲ್ಲಿ ಅವರು ಇದ್ದರು.

ಭೂಪೇಂದ್ರ ಅವರು ಸಿವಿಲ್ ಎಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಮಾಡಿದ್ದಾರೆ. ಸದಾ ಹಸನ್ಮುಖಿ ಮತ್ತು ತಳಮಟ್ಟದ ಕಾರ್ಯಕರ್ತರ ಜತೆಗೆ ನೇರ ಸಂಪರ್ಕ ಹೊಂದಿದ್ದಾರೆ ಎಂದು ಅವರ ಆಪ್ತರು ಹೇಳುತ್ತಾರೆ. ಸ್ಥಳೀಯ ರಾಜಕಾರಣದಲ್ಲಿ ಹೆಚ್ಚು ಸಕ್ರಿಯವಾಗಿ ಇದ್ದದ್ದು ಇದಕ್ಕೆ ಕಾರಣ. ಅಹಮದಾಬಾದ್ ಜಿಲ್ಲೆಯಲ್ಲಿರುವ ಮೇಮ್‌ನಗರ ನಗರಸಭೆಯ ಸದಸ್ಯರಾಗಿದ್ದರು. ಎರಡು ಬಾರಿ ಅಧ್ಯಕ್ಷರೂ ಆಗಿದ್ದರು. ಪಟೇಲ್ ಸಮುದಾಯದ ಸಾಮಾಜಿಕ ಆರ್ಥಿಕ ಅಭಿವೃದ್ಧಿ ಉದ್ದೇಶಕ್ಕೆ ಸ್ಥಾಪಿತವಾದ ಸರ್ದಾರ್‌ಧಾಮ್ ವಿಶ್ವ ಪಾಟೀದಾರ್ ಕೇಂದ್ರದ ಟ್ರಸ್ಟಿಯಾಗಿಯೂ ಅವರು ಇದ್ದಾರೆ.

ವಿಜಯ ರೂಪಾಣಿ ಅವರು ಗುಜರಾತ್ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದ ಬಳಿಕ ಈ ಸ್ಥಾನಕ್ಕೆ ಬೇರೆ ಬೇರೆಯವರ ಹೆಸರುಗಳು ಕೇಳಿ ಬಂದಿದ್ದವು. ಲಕ್ಷದ್ವೀಪ, ದಾದ್ರಾ–ನಗರ್‌ಹವೇಲಿಯ ಆಡಳಿತಾಧಿಕಾರಿ ಪ್ರಫುಲ್ ಖೋಡಾ, ಕೇಂದ್ರ ಸಚಿವ ಮನಸುಖ್ ಮಾಂಡವೀಯ ಮುಂತಾದವರ ಹೆಸರು ಜೋರಾಗಿ ಕೇಳಿ ಬಂದಿತ್ತು. ಭೂಪೇಂದ್ರ ಪಟೇಲ್ ಅವರ ಹೆಸರು ಎಲ್ಲಿಯೂ ಇರಲಿಲ್ಲ.

ಮೊದಲ ಬಾರಿಗೆ ಶಾಸಕರಾಗಿರುವ ಭೂಪೇಂದ್ರ ಅವರು ರಾಜ್ಯದ ಅತ್ಯಂತ ಪ್ರಭಾವಿ ಪಟೇಲ್ ಸಮುದಾಯದವರು ಎನ್ನುವುದೇ ಅವರ ಆಯ್ಕೆಗೆ ಮುಖ್ಯ ಕಾರಣ ಎನ್ನಲಾಗುತ್ತಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ತವರು ರಾಜ್ಯ ಗುಜರಾತ್‌ನಲ್ಲಿ ಮುಖ್ಯಮಂತ್ರಿಯನ್ನು ದಿಢೀರ್ ಬದಲಾಯಿಸಲು ಕಾರಣ ಏನೆಂಬುದು ಬಹಿರಂಗವಾಗಿಲ್ಲ. ಗುಜರಾತ್ ವಿಧಾನಸಭೆಗೆ 2022ರ ಡಿಸೆಂಬರ್‌ನಲ್ಲಿ ಚುನಾವಣೆ ನಡೆಯಬೇಕಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಅಬುಧಾಬಿಯ ರಾಜಕುಮಾರ ಮೊಹಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರ ಜತೆ ಪ್ರಧಾನಿ ನರೇಂದ್ರ ಮೋದಿ ಅವರು ಇರುವ ಚಿತ್ರವೊಂದು ಇತ್ತೀಚೆಗೆ ವೈರಲ್ ಆಗಿದೆ. ನಹ್ಯಾನ್ ಅವರು ಕೇಸರಿ ನಿಲುವಂಗಿ ಹಾಗೂ ಶಾಲು ಧರಿಸಿರುವುದು ಚರ್ಚೆಗೆ ಗ್ರಾಸವಾಗಿದೆ. ಫೇಸ್‌ಬುಕ್‌ನಲ್ಲಿ ಪ್ರಕಟವಾಗಿರುವ ಈ ಚಿತ್ರವನ್ನು ಹಲವರು ಶೇರ್ ಮಾಡಿಕೊಂಡಿದ್ದಾರೆ. 'ಜೈಹೋ ಮೋದಿಜೀ. ಅರಬ್ ರಾಜಕುಮಾರನನ್ನೂ ಕೇಸರಿಮಯ ಮಾಡಿದ್ದೀರಿ. ಜೈ ಶ್ರೀರಾಮ್' ಎಂಬುದಾಗಿ ಪೂಜಾ ರಜಪೂತ್ ಎಂಬುವರು ಉಲ್ಲೇಖಿಸಿದ್ದಾರೆ.

ಈ ಚಿತ್ರವನ್ನು ಫೋಟೊ ಶಾಪ್ ಮೂಲಕ ತಿದ್ದಲಾಗಿದೆ ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆ ತಿಳಿಸಿದೆ. ತಿರುಚಲಾಗಿದೆ ಎಂದು ಮೇಲ್ನೋಟಕ್ಕೇ ಕಂಡುಬಂದರೂ ಜನರು ಶೇರ್ ಮಾಡುತ್ತಿದ್ದಾರೆ. ಚಿತ್ರವನ್ನು ರಿವರ್ಸ್ ಇಮೇಜ್ ಮೂಲಕ ಪರಿಶೀಲಿಸಿದಾಗ, 2019ರಲ್ಲಿ ಮೋದಿ ಅವರು ಯುಎಇಗೆ ಭೇಟಿ ನೀಡಿದಾಗ ಸೆರೆಹಿಡಿದ ಚಿತ್ರ ಎಂಬುದು ದೃಢಪಟ್ಟಿದೆ. ಮೋದಿ ಅವರಿಗೆ ಅತ್ಯುನ್ನತ ನಾಗರಿಕ ಗೌರವ ದಿ ಆರ್ಡರ್ ಆಫ್ ದಿ ಜಾಯೇದ್ ಪುರಸ್ಕಾರ ನೀಡುವ ಸಂದರ್ಭದಲ್ಲಿ ತೆಗೆದ ಈ ಚಿತ್ರವನ್ನು ಹಲವು ಸುದ್ದಿಮಾಧ್ಯಮಗಳು ಅಂದು ಪ್ರಕಟಿಸಿದ್ದವು.

ಬೆರಗಿನ ಬೆಳಕು

ಗುರುರಾಜ ಕರಜಗಿ

ವೆಸ್ಸಂತರನನ್ನು ಕರೆತರುವ ಸಿದ್ಧತೆ

ಮಹಾರಾಜ ತನ್ನ ಮುಖ್ಯ ತೋಟಗಾರನನ್ನು ಕರೆದು ಆಜ್ಞೆ ಮಾಡಿದ, 'ನನ್ನ ಮಗ ವೆಸ್ಸಂತರ ಬರುವ ದಾರಿಯಲ್ಲಿ ಎರಡು ಕಡೆಗೂ ಒಲೊಪಿಯಾ ಹೂವುಗಳು ಹರಡಿರಲಿ. ಅಲ್ಲಲ್ಲಿ ಹೂವು, ಗಂಧ, ವಿಲೇಪನಾದಿಗಳ ವಿತಾನವಿರಲಿ. ಅಮೂಲ್ಯವಾದ ವಸ್ತುಗಳು ಇದ್ದಿರಲಿ. ಆತ ಬರುವ ದಾರಿಯಲ್ಲಿ, ಹಳ್ಳಿ ಹಳ್ಳಿಗಳಲ್ಲಿ ನೂರು, ನೂರು ಸುರೆಯ ಭಾಂಡಗಳಿರಲಿ. ಆತ ಬರುವ ಮಾರ್ಗದಲ್ಲಿ ಮಾಂಸ, ಪೂರಿ, ಪಲ್ಯ, ಮೀನುಗಳ ತರತರಹದ ತಿಂಡಿಗಳು ಇದ್ದಿರಲಿ. ಮಾರ್ಗದಲ್ಲಿ ತುಪ್ಪ, ಎಣ್ಣೆ, ಮೊಸರು ಹಾಗೂ ಧಾನ್ಯಗಳಿಂದ ತುಂಬಿದ ಕಡಾಯಿಗಳನ್ನಿಡಲಿ'. ಆಸ್ಥಾನದ ಸಂಗೀತ, ನೃತ್ಯ ವಿದ್ವಾಂಸರುಗಳಿಗೆ ಹೇಳಿದ, 'ದಾರಿಯಲ್ಲಿ ನಟರು, ಗಾಯಕರು, ಹಸ್ತ ಸಂಗೀತಕರು, ಢೋಲು ನುಡಿಸುವವರು, ಮುಂಡಗಾಯಕರು, ಜಾದುಗಾರರು ಇರಲಿ. ಎಲ್ಲ ರೀತಿಯ ವೀಣೆಗಳು, ಭೇರಿಗಳು, ಡಿಂಡಿಮಗಳು, ಶಂಖಗಳು ಮೊಳಗಲಿ. ಮೃದಂಗ, ಪಣವ, ಗೋಧ, ಪರಿವದೆಂತಿ, ದಿಂದಿಮಾನಿ, ವಾದ್ಯಗಳು ಸಂಭ್ರಮದಿಂದ ನುಡಿಸಲ್ಪಡಲಿ'. ಈ ರೀತಿ ಮಾರ್ಗಾಲಂಕಾರಕ್ಕೆಂದು ರಾಜ ಆದೇಶಗಳನ್ನು ನೀಡಿದ.

ಈ ಸಮಯದಲ್ಲಿ ಇನ್ನೊಂದು ವಿಶೇಷ ನಡೆಯಿತು. ಮುದುಕ ಬ್ರಾಹ್ಮಣ ದಾಸ್ಯ ವಿಮುಕ್ತಿಗೆ ಅಷ್ಟೊಂದು ಹಣ, ಸೌಭಾಗ್ಯಗಳನ್ನು ಪಡೆದಿದ್ದನಷ್ಟೇ? ಅವನು ಜನ್ಮದಲ್ಲಿ ಆ ಪರಿಯ ಸಿರಿಯನ್ನು ಕಂಡವನಲ್ಲ. ಒಂದೇ ಬಾರಿ ಅಷ್ಟು ಐಶ್ವರ್ಯ ಬಂದದ್ದು ಅವನ ತಲೆ ತಿರುಗಿಸಿತು. ಆತ ಆ ನಗರದಲ್ಲೇ ಎರಡು ದಿನವಿದ್ದು, ಬಾಯಿಚಪಲದಿಂದ ಮಿತಿಮೀರಿ ತಿಂದು ಅರಗಿಸಲಾರದೆ ಸತ್ತು ಹೋದ. ಅವನ ಸಂಬಂಧಿಕರಾರಾದರೂ ಇದ್ದಾರೆಯೇ ಎಂದು ಕಾಣಲು ರಾಜ ಡಂಗೂರ ಹೊಡೆಸಿದ. ಯಾರಿಗೂ ಅವನ ಪರಿಚಯವಿರಲಿಲ್ಲವಾದ್ದರಿಂದ ರಾಜನೇ ಅವನ ಅಂತ್ಯಕ್ರಿಯೆ ಮಾಡಿಸಿದ. ಹೀಗಾಗಿ ದಾಸ್ಯವಿಮುಕ್ತಿಗೆಂದು ಕೊಟ್ಟ ಹಣ, ಆನೆ, ಕುದುರೆ, ರಥಗಳು, ದಾಸ, ದಾಸಿಯರು ಮತ್ತು ಹಣವೆಲ್ಲ ಮತ್ತೆ ರಾಜನಿಗೇ ಸೇರಿತು. ಅಂತೂ ಬ್ರಾಹ್ಮಣನ ದುರಾಸೆಗೆ ತಕ್ಕ ಶಿಕ್ಷೆಯೇ ದೊರಕಿದಂತಾಯಿತು.

ಏಳು ದಿನಗಳಲ್ಲಿ ಸಮಸ್ತ ಪಡೆಯನ್ನು ಸಂಗ್ರಹಿಸಿದ ರಾಜ ಜಾಲಿಕುಮಾರನನ್ನೇ ಮಾರ್ಗದರ್ಶಕನನ್ನಾಗಿ ಮಾಡಿಕೊಂಡು, ಸಮಸ್ತ ಪರಿವಾರದೊಂದಿಗೆ ವೈಭವದಿಂದ ಹೊರಟ. ಆ ಸಿವಿ ಸೇನೆ ಅಮಿತವಾಗಿತ್ತು. ಜಾಲಿಕುಮಾರನ ನೇತೃತ್ವದಲ್ಲಿ ಅದು ನಡೆದು ವಂಕ ಪರ್ವತವನ್ನು ಸೇರಿತು. ಆನೆಗಳು, ಕುದುರೆಗಳು, ರಥಗಳು ಹೋಗುವ ರಭಸಕ್ಕೆ ಆಕಾಶ ಧೂಳಿನಿಂದ ಮುಚ್ಚಿಬಿಟ್ಟಿತು. ಪರ್ವತ ಪ್ರದೇಶದಲ್ಲಿ ಅನೇಕ ತರಕಾರಿಗಳನ್ನು, ನೀರಿನ ಸರೋವರಗಳನ್ನು, ಹೂವು, ಹಣ್ಣುಗಳಿಂದ ಕೂಡಿದ ಮರಗಳನ್ನು, ನಾನಾ ವರ್ಣಗಳಿಂದ ಕೂಡಿದ, ಚಿತ್ರವಿಚಿತ್ರ ಸ್ವರಗಳನ್ನು ಹೊರಡಿಸುವ ಪಕ್ಷಿಗಳನ್ನು ಸೈನಿಕರು ಕಂಡರು. ಇಡೀ ಸೇನೆ ಹಗಲು-ರಾತ್ರಿ ಪ್ರಯಾಣ ಮಾಡಿ, ಕೊನೆಗೆ ವೆಸ್ಸಂತರ ಬೋಧಿಸತ್ವನಿದ್ದ ಕಾಡಿಗೆ ಬಂದು ಸೇರಿತು. ❖

ಗುಂಡಣ್ಣ

ದಿನ ಭವಿಷ್ಯ

ಸೋಮವಾರ ಸೆಪ್ಟೆಂಬರ್ 13, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಉತ್ತರ ಫಲ್ಗುಣಿ ಸಪ್ತಮೀ ಗಂ. 27-18 (ಸಾ. 5-10) ಸೋಮವಾರ ನಿತ್ಯ ನಕ್ಷತ್ರ ಅನೂರಾಧಾ ಗಂ. 12-50 (ಹ. 11-23) ವಿಷ್ಕಂಭ ನಾಮ ಯೋಗ ಗ. 15-51 ಗರಜ ಕರಣ ಗಂ. 0-20 ಉಪರಿ ವಣಿಜ ಕರಣ ಗಂ. 26-58 ವಿಷ ಗಂ. 25-11 ಅಮೃತ ಗಂ 48-12 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 : ಸೂರ್ಯೋದಯ: 6-12 ಸೂರ್ಯಾಸ್ತ: 6-21 ಅದೃಷ್ಟ ಸಂಖ್ಯೆ 2 6

ಮೇಷ: ಬಂಧುವೊಬ್ಬರ ಮನೆಯಲ್ಲಿ ಸಂಜೆಯವರೆಗೂ ವಿಶೇಷ ಸಮಾರಂಭಗಳಲ್ಲಿ ಭಾಗಿ. ಮನೆಯವರ ವಿಷಯದಲ್ಲಿ ಉದಾಸೀನ ಸಲ್ಲದು. ವ್ಯವಹಾರಗಳು ಎಂದಿನಂತೆ ನಡೆಯಲಿವೆ.

ವೃಷಭ: ವಿದ್ಯಾರ್ಥಿಗಳು ಉನ್ನತ ವ್ಯಾಸಂಗಕ್ಕಾಗಿ ಶ್ರಮವಹಿಸಿ ಮಾಡಿದ ಉತ್ತಮ ಸಾಧನೆಯ ಸಂತಸವನ್ನು ಮನೆಯವರೊಂದಿಗೆ ಹಂಚಿಕೊಳ್ಳಲಿದ್ದೀರಿ. ಸರ್ಕಾರಿ ನೌಕರರಿಗೆ ಪದೋನ್ನತಿ.

ಮಿಥುನ: ಆಭರಣ ತಯಾರಿಕೆ, ಗೃಹಾಲಂಕಾರ ಸಾಮಗ್ರಿ ಮುಂತಾದ ಕರಕುಶಲ ವೃತ್ತಿಗಳಲ್ಲಿ ತೊಡಗಿದವರಿಗೆ ಹೆಚ್ಚಿನ ವರಮಾನ. ನೆನೆಗುದಿಗೆ ಬಿದ್ದಿರುವ ನಿರ್ಮಾಣ ಕೆಲಸಗಳು ಪೂರ್ಣಗೊಳ್ಳಲು ಚುರುಕು ಪಡೆದುಕೊಳ್ಳುವವು.

ಕರ್ಕಾಟಕ: ಅನಗತ್ಯ ಮಾತುಕತೆ, ಚರ್ಚೆಗಳಲ್ಲಿ ಭಾಗವಹಿಸದಿರುವುದೇ ಉತ್ತಮ. ವಕೀಲ ವೃತ್ತಿಯಲ್ಲಿರುವವರಿಗೆ ಬಿಡುವಿನ ದಿನ. ಪ್ರಯಾಣ ಪ್ರವಾಸಗಳಿಗೆ ಶುಭದಿನ. ಚಿನ್ನಾಭರಣ ವ್ಯಾಪಾರಿಗಳಿಗೆ ವಿಶೇಷ ಲಾಭ.

ಸಿಂಹ: ಸ್ನೇಹಿತರು ಮತ್ತು ಬಂಧುಗಳೊಂದಿಗಿನ ಸಂಬಂಧಗಳು ಗಟ್ಟಿಗೊಳ್ಳುವ ಸಾಧ್ಯತೆ. ಮನೆಯ ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ ನಿರ್ಲಕ್ಷ್ಯ ಸಲ್ಲದು. ಮನೆಯವರ ಮನ ಮೆಚ್ಚಿಸಲು ಅನ್ಯ ಮಾರ್ಗ ಸರಿಯಾಗಲಾರದು.

ಕನ್ಯಾ: ನಿಮ್ಮ ರಾಜಕೀಯ ವಿಷಯದಲ್ಲಿ ಬದಲಾವಣೆಯೊಂದನ್ನು ಕಾಣಲಿದ್ದೀರಿ. ನಿಮ್ಮ ಪ್ರಭಾವದಿಂದಾಗಿ ನೆರೆ ಹೊರೆಯವರ ಸಮಸ್ಯೆಗಳನ್ನು ಪರಿಹಾರ ಮಾಡಲಿದ್ದೀರಿ. ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ.

ತುಲಾ: ವೃತ್ತಿ ನೈಪುಣ್ಯತೆಯಿಂದಾಗಿ ನೌಕರಸ್ಥರಿಗೆ ವಿಶೇಷ ಸ್ಥಾನಮಾನ ದೊರಕಲಿದೆ. ಪದೋನ್ನತಿಯಿಂದಾಗಿ ಆರ್ಥಿಕ ಸುಧಾರಣೆ ಕಾಣಲಿದ್ದೀರಿ. ಚಿನ್ನಾಭರಣ ಖರೀದಿ ಸಾಧ್ಯತೆ. ಮನೆಗೆ ಹೊಸ ಸದಸ್ಯರ ಸೇರ್ಪಡೆ.

ವೃಶ್ಚಿಕ: ಕೆಲಸ ಕಾರ್ಯಗಳಲ್ಲಿ ಸಂಪೂರ್ಣವಾಗಿ ನಿಮ್ಮನ್ನು ತೊಡಗಿಸಿಕೊಳ್ಳಲಿದ್ದೀರಿ. ಮನೆಯ ಜವಾಬ್ದಾರಿಯನ್ನು ಯೋಗ್ಯ ರೀತಿಯಲ್ಲಿ ನಿಭಾಯಿಸಿ ಅನ್ಯರ ಪ್ರಶಂಸೆಗೆ ಪಾತ್ರರಾಗುವಿರಿ.

ಧನು: ಅಲಂಕಾರಿಕ ವಸ್ತುಗಳನ್ನು ಖರೀದಿಸಲಿದ್ದೀರಿ. ಸರಳ ವಿವಾಹದ ನಿಶ್ಚಯದಿಂದಾಗಿ ಮನೆಯಲ್ಲಿ ಸಂತಸ ಮೂಡಿಸಲಿದ್ದೀರಿ. ಮಹಿಳೆಯರಿಗೆ ಸಂಗಾತಿಯಿಂದ ವಿಶೇಷ ಉಡುಗೊರೆ ದೊರೆಯಲಿದೆ.

ಮಕರ: ಪ್ರಸಿದ್ಧ ಸಂಸ್ಥೆಯೊಂದಕ್ಕೆ ಸಲಹೆಗಾರರಾಗಿ ಸೇವೆ ಸಲ್ಲಿಸುವ ಅವಕಾಶ ನಿಮ್ಮದಾಗಲಿದೆ. ಗುಪ್ತ ಆಸ್ತಿ ಖರೀದಿಯ ಸಾಧ್ಯತೆ ಕಂಡುಬರುತ್ತಿದೆ. ತುರ್ತು ವಿಷಯಗಳ ಬಗ್ಗೆ ಗಮನ ಹರಿಸುವಿರಿ.

ಕುಂಭ: ವ್ಯವಹಾರದಲ್ಲಿ ಅತಿಯಾದ ಕಾರ್ಯಬಾಹುಳ್ಯದಿಂದಾಗಿ ದೇಹಾಲಾಸ್ಯ ಉಂಟಾದೀತು. ವೈಯಕ್ತಿಕ ವ್ಯವಹಾರದ ನಿಮಿತ್ತ ದೂರದ ಪ್ರಯಾಣ. ಬಹುದಿನಗಳ ನಂತರ ಬಿಡುವಿನ ದಿನದ ಸವಿಯನ್ನು ಉಣ್ಣಲಿದ್ದೀರಿ.

ಮೀನ: ವೃತ್ತಿ ಜೀವನದಲ್ಲಿ ಬದಲಾವಣೆ ಸಾಧ್ಯತೆ. ಆದಾಯದಲ್ಲಿ ಹೆಚ್ಚಳದ ನಿರೀಕ್ಷೆ. ಶಿಕ್ಷಣ ಕ್ಷೇತ್ರದಲ್ಲಿರುವವರ ಸೇವೆಯನ್ನು ಗಮನಿಸಿ ಸಾಮಾಜಿಕ ಗೌರವ ಪ್ರಾಪ್ತವಾಗಲಿದೆ.

ನಿಮ್ಮ ಜನ್ಮದಿನ 13-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಹೊಸ ಆಸ್ತಿಗಳನ್ನು ಖರೀದಿಸಲಿದ್ದೀರಿ. ಹೊಸ ಯೋಜನೆಗಳನ್ನು ಪ್ರಾರಂಭಿಸುವ ವಿಚಾರದಲ್ಲಿ ಎಚ್ಚರಿಕೆಯ ನಡೆಯ ಅಗತ್ಯ. ಕುಟುಂಬ ಸದಸ್ಯರೊಂದಿಗೆ ಸಮಾಲೋಚಿಸಿ ಹೊಸ ನಿವೇಶನ ಖರೀದಿಸುವ ಸಾಧ್ಯತೆ ಗೋಚರಿಸುತ್ತಿದೆ.

ಪದಬಂಧ 4717

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹಡಗಿನ ಚುಕ್ಕಾಣಿ ಹಿಡಿದವನು (4)
2.ಹಿಮದ ಹತ್ತಿರವಿರುವ ಕೋಣ ಕಾಣುತ್ತಿದೆಯೇ? (3)
4.ಶ್ರೀಕೃಷ್ಣನ ಸ್ನೇಹಿತ (3)
6.ಹುಯಿಲಿಡುತ್ತಾ ಓದಿದ ಮರಣಪತ್ರ! (3)
7.ಪ್ರೇಮಿಗಳ ಅಗಲಿಕೆಯ ಬೇನೆ (5)
10.ನೆಲವನ್ನು ಗೋಮಯದಿಂದ ಸಾರಿಸುವುದು (3)
11.ಸೊಕ್ಕು ಹೀಗೆ ಬಂದಿದೆಯಲ್ಲಾ! (3)
13.ನಿರಾಕರಣವನ್ನು ಸೂಚಿಸುವಿಕೆ (3)
14.ಇತರರಿಗೆ ವಹಿಸಿಕೊಡುವುದು (4)

ಮೇಲಿಂದ ಕೆಳಕ್ಕೆ

1.ನನಸಾಗದ ಸ್ವಪ್ನ (3)
2.ಮಡಿವಂತೆಯ ಉಡಿಯಿದು (3)
3.ಷರತ್ತು ಒಡ್ಡಿ ನೀಡಿದ ಪಾನಕ (4)
5.ಮನದಿಂದ ಸಲ್ಲಿಸಿದ ಅರ್ಜಿ (3)
6.ದೃಷ್ಟಾಂತವನ್ನು ಹೀಗೆ ನೀಡಿ! (5)
8.ಈ ಪರಿ ಕಾಣಿಸುತ್ತಿರುವ ಆವರಣ! (3)
9.ಇದು ಹಾಸ್ಯ ನಾಟಕ (4)
10.ಹತ್ತು ನೂರಿದು (3)
12.ಕೆನೆಯುವ ಪ್ರಾಣಿ (4)



4716ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಉಪನ್ಯಾಸ 3.ಉಪಖ್ಯಾನ 5.ಗಹನ 6.ರಿಕ್ತ 7.ಒಣಹರಟೆ 10.ಶಾಪ 12.ನೆನಪು 14.ನತದೃಷ್ಟ 15.ವರ್ಧಮಾನ

ಮೇಲಿಂದ ಕೆಳಕ್ಕೆ: 1.ಉಸಾಬರಿ 2.ಸಮೀಕರಣ 3.ಉಷೆ 4.ನವನಟಿ 5.ಗಲಾಟೆ 7.ಒನಪು 8.ರಜತೋತ್ಸವ 9.ಮನೆತನ 11.ಪರಿಜ್ಞಾನ 13.ಇಷ್ಟ

ಸುಡೊಕು 5103

	9			3			6	
					7		2	9
	8	3		9		1		7
		4			9		8	
	2			5				3
8			2				4	
	4			2		8		
			9					5
2		8		7			3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5102 ಸುಡೊಕು

7	9	4	3	5	8	6	2	1
3	8	5	2	6	1	7	9	4
2	1	6	4	9	7	8	3	5
5	2	7	8	3	9	1	4	6
4	6	1	7	2	5	3	8	9
9	3	8	6	1	4	5	7	2
1	5	2	9	8	3	4	6	7
8	4	9	5	7	6	2	1	3
6	7	3	1	4	2	9	5	8

ಸೋಮವಾರ • ಸೆಪ್ಟೆಂಬರ್ 13, 2021 ಪ್ರಜಾವಾಣಿ

ಭೀಕರ ಅಪಘಾತ: ಎಂಟು ಸಾವು

ಪ್ರಜಾವಾಣಿ ವಾರ್ತೆ

ಚಿಂತಾಮಣಿ (ಚಿಕ್ಕಬಳ್ಳಾಪುರ): ಚಿಂತಾಮಣಿ-ಮದನಪಲ್ಲಿ ರಸ್ತೆಯ ಮರಿನಾಯಕನಹಳ್ಳಿ ಬಳಿ ಭಾನುವಾರ ಸಿಮೆಂಟ್ ಲಾರಿ ಮತ್ತು ಜೀಪ್ ನಡುವೆ ಸಂಭವಿಸಿದ ಅಪಘಾತದಲ್ಲಿ ಎಂಟು ಮಂದಿ ಮೃತಪಟ್ಟಿದ್ದಾರೆ.

ಆರು ಜನ ಅಪಘಾತದ ಸ್ಥಳದಲ್ಲೇ ಮೃತಪಟ್ಟರೆ, ಇನ್ನಿಬ್ಬರು ಚಿಕಿತ್ಸೆಗೆ ಸ್ಪಂದಿಸದೆ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ. ಇಬ್ಬರು ಮಕ್ಕಳು ಸೇರಿದಂತೆ 17 ಮಂದಿ ಗಾಯಗೊಂಡಿದ್ದು, ಕೋಲಾರ ಮತ್ತು ಬೆಂಗಳೂರಿನ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ.

ಚಿಂತಾಮಣಿ ತಾಲ್ಲೂಕಿನ ನಾರಾಯಣಸ್ವಾಮಿ, ಮುನಿರತ್ನಮ್ಮ, ವೆಂಕಟಲಕ್ಷ್ಮಮ್ಮ, ಮುನಿಕೃಷ್ಣ, ನಿಖಿಲ್, ಜೀಪ್ ಚಾಲಕ ಮತ್ತು ಮಾಲೀಕ ರಮೇಶ್, ಬೆಂಗಳೂರು ನಿವಾಸಿಗಳಾದ ರಾಜಪ್ಪ ಮತ್ತು ಮೋನಿಕಾ ದಂಪತಿ ಮೃತಪಟ್ಟವರು. ಸಿಮೆಂಟ್ ಲಾರಿ ಚಿಂತಾಮಣಿಯಿಂದ ಮದನಪಲ್ಲಿ ಕಡೆಗೆ ಸಾಗುತ್ತಿತ್ತು. ಪ್ರಯಾಣಿಕರನ್ನು ತುಂಬಿಕೊಂಡಿದ್ದ ಜೀಪ್ ತಾಡಿಗೋಳ್ ಕ್ರಾಸ್‌ನಿಂದ ಚಿಂತಾಮಣಿಗೆ ಸಾಗುತ್ತಿತ್ತು. ಈ ವೇಳೆ ಲಾರಿ ಡಿಕ್ಕಿ ಹೊಡೆದಿದೆ.

ಜೀಪ್ ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ. ಜೀಪ್‌ನಲ್ಲಿ ಅಂದಾಜು 25 ಪ್ರಯಾಣಿಕರಿದ್ದರು ಎಂದು ಪೊಲೀಸರು ಹೇಳಿದ್ದಾರೆ. ಅಪಘಾತದ ರಭಸಕ್ಕೆ ಶವಗಳು ರಸ್ತೆಯಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಅಪಘಾತದ ನಂತರ ಚಾಲಕ ಲಾರಿಯನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದಾನೆ. ಚಿಂತಾಮಣಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

32 ಮಹಿಳೆಯರಿಗೆ ವಾಹನ ಚಾಲನಾ ತರಬೇತಿ: ಹಾವೇರಿ ಜಿಲ್ಲಾ ಪಂಚಾಯಿತಿ ವಿನೂತನ ಕ್ರಮ

ಕಸ ವಿಲೇವಾರಿಗೆ 'ನಾರಿ ಶಕ್ತಿ'

• ಸಿದ್ದು ಆರ್.ಜಿ.ಹಳ್ಳಿ

ಹಾವೇರಿ ತಾಲ್ಲೂಕು ದೇವಗಿರಿಯ ಗ್ರಾಮೀಣ ಸ್ವ–ಉದ್ಯೋಗ ತರಬೇತಿ ಸಂಸ್ಥೆಯಲ್ಲಿ ವಾಹನ ಚಾಲನಾ ತರಬೇತಿ ಸಂದರ್ಭದಲ್ಲಿ ಮಹಿಳೆಯರ ಸಂಭ್ರಮ –ಪ್ರಜಾವಾಣಿ ಚಿತ್ರ: ಮಾಲತೇಶ ಇಚ್ಚಂಗಿ

ಹಾವೇರಿ: ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕಸ ವಿಲೇವಾರಿಗೆ ಬಳಸುವ 'ಸ್ವಚ್ಛ ವಾಹಿನಿ' ವಾಹನ ಚಾಲನೆಗೆ ಜಿಲ್ಲೆಯಲ್ಲಿ ಆಯ್ದ 32 ಮಹಿಳೆಯರಿಗೆ ತರಬೇತಿ ನೀಡುವ ಮೂಲಕ ಹಾವೇರಿ ಜಿಲ್ಲಾ ಪಂಚಾಯಿತಿ ವಿನೂತನ ಕ್ರಮ ಕೈಗೊಂಡಿದೆ.

'ಸ್ವಚ್ಛ ಭಾರತ ಮಿಷನ್' ಯೋಜನೆಯಡಿ ಘನ ತ್ಯಾಜ್ಯ ನಿರ್ವಹಣೆ ಅನುಷ್ಠಾನಕ್ಕೆ ಸಂಜೀವಿನಿ ಗ್ರಾಮ ಪಂಚಾಯಿತಿ ಮಹಿಳಾ ಒಕ್ಕೂಟಗಳ ಗುಂಪಿನ ಸದಸ್ಯರಿಗೆ ಹಾವೇರಿ ತಾಲ್ಲೂಕಿನ ದೇವಗಿರಿಯ ಬ್ಯಾಂಕ್ ಆಫ್ ಬರೋಡಾದ 'ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ'ಯಲ್ಲಿ (ಆರ್‌ಸೆಟಿ) ತರಬೇತಿ ನೀಡಲಾಗುತ್ತಿದೆ.

'ಒಂದು ತಿಂಗಳ ತರಬೇತಿ ಅವಧಿಯಲ್ಲಿ ಪ್ರತಿ ಮಹಿಳೆಯು ನಿತ್ಯ 6 ಕಿ.ಮೀ. ವಾಹನ ಚಾಲನಾ ತರಬೇತಿ ಪಡೆಯುತ್ತಿದ್ದಾರೆ. ಊಟ ಮತ್ತು ವಸತಿ ವ್ಯವಸ್ಥೆ ಕಲ್ಪಿಸಿದ್ದೇವೆ. ಅಷ್ಟೇ ಅಲ್ಲದೆ, ಜೀವನ ಕೌಶಲಗಳು ಮತ್ತು ಬ್ಯಾಂಕಿಂಗ್ ಸೇವೆಯ ಬಗ್ಗೆಯೂ ತರಬೇತಿ ನೀಡುತ್ತಿದ್ದೇವೆ' ಎಂದು ಆರ್‌ಸೆಟಿ ಸಂಸ್ಥೆಯ ನಿರ್ದೇಶಕ ಶಾಜಿತ್ ಎಸ್. ತಿಳಿಸಿದರು.

ಪ್ರಜಾವಾಣಿ ವಿಶೇಷ

ಮಹಿಳಾ ಸಬಲೀಕರಣ: 'ಜಿಲ್ಲೆಯ 170 ಗ್ರಾಮ ಪಂಚಾಯಿತಿಗಳಲ್ಲಿ ಘನತ್ಯಾಜ್ಯ ನಿರ್ವಹಣಾ ಘಟಕಗಳನ್ನು ಮಾಡಿ, ಮಹಿಳಾ ಒಕ್ಕೂಟಗಳ ಗುಂಪಿನ ಸದಸ್ಯರಿಂದಲೇ ನಡೆಸಲು ನಿರ್ಧರಿಸಿದ್ದೇವೆ. ಮನೆ-ಮನೆಗಳಿಂದ ಕಸವನ್ನು ಸಂಗ್ರಹಿಸಿ, ವಿಂಗಡಿಸಿ, ಗೊಬ್ಬರ ಉತ್ಪಾದನೆ ಮಾಡಿ, ಮಾರಾಟ ಮಾಡುವವರೆಗೆ ಎಲ್ಲ ಕೆಲಸಗಳನ್ನು ಮಹಿಳೆಯರೇ ನಿರ್ವಹಣೆ ಮಾಡಲಿದ್ದಾರೆ' ಎಂದು ಹಾವೇರಿ ಜಿಲ್ಲಾ ಪಂಚಾಯಿತಿ ಸಿಇಒ ಮೊಹಮ್ಮದ್ ರೋಶನ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

> ಗ್ರಾಮಗಳ ನೈರ್ಮಲ್ಯಕ್ಕೆ 'ಮಹಿಳಾ ಶಕ್ತಿ' ಸಿಕ್ಕಿದೆ. ಮಹಿಳೆಯರು ಮನೆಗಳ ಜತೆ ಹಳ್ಳಿಗಳನ್ನೂ ಸ್ವಚ್ಛಗೊಳಿಸಿ, ಸುಂದರಗೊಳಿಸಲಿದ್ದಾರೆ
> **ಮೊಹಮ್ಮದ್ ರೋಶನ್,** ಸಿಇಒ, ಹಾವೇರಿ ಜಿಲ್ಲಾ ಪಂಚಾಯಿತಿ

> ಹಳ್ಳಿಗಳಲ್ಲಿ ಸೈಕಲ್, ಬೈಕ್ ಓಡಿಸಲು ಹುಡುಗರಿಗೆ ಪ್ರಾಶಸ್ತ್ಯ ನೀಡಿ, ಹುಡುಗಿಯರನ್ನು ಕಡೆಗಣಿಸುತ್ತಾರೆ. ನಾನೀಗ ಆಟೊ ಟಿಪ್ಪರ್ ಓಡಿಸುತ್ತೇನೆ
> **ಸುಧಾ ಪೂಜಾರ್,** ಪದವೀಧರೆ, ಚಿಕ್ಕಲಿಂಗದಹಳ್ಳಿ, ಹಾವೇರಿ ತಾ.,

'ಪುರುಷ ಚಾಲಕರ ಮೇಲಿನ ಅವಲಂಬನೆ ತಪ್ಪಿಸಲು 18 ರಿಂದ 45 ವರ್ಷದೊಳಗಿನ ಮಹಿಳೆಯರಿಗೆ ವಾಹನ ಚಾಲನಾ ತರಬೇತಿ ನೀಡುತ್ತಿದ್ದೇವೆ. ತರಬೇತಿ ಪಡೆದವರಿಗೆ ಡಿ.ಎಲ್ ಕೊಡಿಸಿ, ಸ್ವಾವಲಂಬಿ ಜೀವನ ನಡೆಸಲು ಅನುಕೂಲ ಕಲ್ಪಿಸುತ್ತೇವೆ' ಎಂದರು.

109 ಆಟೊ ಟಿಪ್ಪರ್ ಹಸ್ತಾಂತರ: ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ₹5.83 ಕೋಟಿ ವೆಚ್ಚದಲ್ಲಿ ಜಿಲ್ಲೆಯ 109 ಗ್ರಾಮ ಪಂಚಾಯಿತಿಗಳಿಗೆ 109 ಆಟೊ ಟಿಪ್ಪರ್‌ಗಳನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈಚೆಗೆ ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರ ಮಾಡಿದ್ದಾರೆ. ಚಾಲನಾ ಪರವಾನಗಿ ಪಡೆದ ಮಹಿಳೆಯರು ಈ ವಾಹನಗಳನ್ನು ಚಾಲನೆ ಮಾಡಲಿದ್ದಾರೆ.

'ಸ್ವಚ್ಛತಾ ಸೇನಾನಿ'ಗಳಾದ ಪದವೀಧರೆಯರು

ಕಸ ವಿಲೇವಾರಿ ವಾಹನ ಓಡಿಸಲು ಗೋಪಿಣಿ ಗಿಡ್ಡಣ್ಣವರ ಮತ್ತು ಸುಧಾ ಪೂಜಾರ್ ಎಂಬ ಇಬ್ಬರು ಪದವೀಧರೆಯರು ಉತ್ಸಾಹ ತೋರುವ ಮೂಲಕ 'ಸ್ವಚ್ಛತಾ ಸೇನಾನಿ'ಗಳಾಗಿ ಮುಂದೆ ಬಂದಿದ್ದಾರೆ.

ಎಂ.ಎ, ಡಿಇಡಿ ವ್ಯಾಸಂಗ ಮಾಡಿರುವ ರಾಣೆಬೆನ್ನೂರು ತಾಲ್ಲೂಕು ಚಳಗೇರಿ ಗ್ರಾಮದ ಗೋಪಿಣಿ ಗಿಡ್ಡಣ್ಣವರ ಕೆಲವು ವರ್ಷ ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡಿದ್ದಾರೆ. 'ಯಾವ ಕೆಲಸವೂ ಕೀಳಲ್ಲ. ಕೆಲಸ ಮಾಡಲು ಮನಸ್ಸು ಮುಖ್ಯ' ಎಂಬುದು ಗೋಪಿಣಿ ಅವರ ಅಭಿಮತ.

ಸುದ್ದಿ 2 ನಿಮಿಷ

ಎಸಿಬಿ ಪ್ರಕರಣ ದಾಖಲಿಸಿ ತನಿಖೆ ನಡೆಸಲಿ: ಡಿಕೆಶಿ

ಬೆಳಗಾವಿ: 'ಕಾಂಗ್ರೆಸ್‌ನಿಂದ ಬರಲು ಬಿಜೆಪಿಯವರು ಹಣದ ಆಫರ್ ನೀಡಿದ್ದರು' ಎಂದು ಬಿಜೆಪಿ ಶಾಸಕ ಶ್ರೀಮಂತ ಪಾಟೀಲ ಸತ್ಯವಾದ ಮಾತನ್ನೇ ಹೇಳಿದ್ದಾರೆ. ಹಣದ ಆಮಿಷ ಒಡ್ಡಿದವರು ಯಾರು? ಎನ್ನುವುದನ್ನು ತನಿಖೆ ನಡೆಸಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಒತ್ತಾಯಿಸಿದ್ದಾರೆ.

'ಈ ಹೇಳಿಕೆಗಾಗಿ ಶ್ರೀಮಂತಪಾಟೀಲ ಅವರನ್ನು ಅಭಿನಂದಿಸುತ್ತೇನೆ.ಹಾಲಿ ಶಾಸಕ ಹಾಗೂ ಮಾಜಿ ಸಚಿವರಾಗಿರುವ ಅವರ ಮಾತನ್ನು ಗಂಭೀರವಾಗಿ ಪರಿಗಣಿಸಬೇಕು. ಎಸಿಬಿಯವರು ಕೂಡಲೇ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಬೇಕು ಎಂದು ಒತ್ತಾಯಿಸಿದರು.

'ದೇಶ ಹಾಗೂ ರಾಜ್ಯದಲ್ಲಿ ಬಿಜೆಪಿ ಆಡಳಿತ ಸರಿ ಇಲ್ಲ ಎನ್ನುವುದಕ್ಕೆ ಕೆಲವೆಡೆ ಮುಖ್ಯಮಂತ್ರಿಗಳನ್ನು ಬದಲಾವಣೆ ಮಾಡುತ್ತಿರುವುದೇ ಸಾಕ್ಷಿಯಾಗಿದೆ' ಎಂದು ಆರೋಪಿಸಿದರು.

'ನಾನೇ ಹೋಗಿದ್ದೇನೆ, ಬಿಜೆಪಿ ಆಮಿಷ ಒಡ್ಡಿರಲಿಲ್ಲ'

ಚನ್ನಮ್ಮನ ಕಿತ್ತೂರು: 'ಬಿಜೆಪಿಗೆ ನಾನಾಗಿಯೇ ಹೋಗಿದ್ದೇನೆ. ಅವರೇನೂ ಕರೆದಿರಲಿಲ್ಲ; ಆಮಿಷ ಒಡ್ಡಿಲ್ಲ' ಎಂದು ಕಾಗವಾಡದ ಶಾಸಕ ಶ್ರೀಮಂತ ಪಾಟೀಲ ಭಾನುವಾರ ಹೇಳಿದರು.

ತಾಲ್ಲೂಕಿನ ಅಂಬಡಗಟ್ಟಿಯಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ಕೇಂದ್ರ ಸರ್ಕಾರ ಒಳ್ಳೆಯ ಕಾರ್ಯಕ್ರಮ ರೂಪಿಸುತ್ತಿದೆ. ಅದನ್ನು ಮೆಚ್ಚಿ ಪಕ್ಷಕ್ಕೆ ಸೇರಿದ್ದೇನೆ. ಏನು ಬಯಸುತ್ತೀರಿ ಎಂದು ಕೇಳಿದಾಗ ಒಳ್ಳೆಯ ಹುದ್ದೆ ನೀಡಿದರೆ ಕೆಲಸ ಮಾಡುತ್ತೇನೆ ಎಂದು ನಾಯಕರಿಗೆ ತಿಳಿಸಿದ್ದೆ' ಎಂದು ಹೇಳಿದರು.

'ನಾನು ಕಾಂಗ್ರೆಸ್‌ನಿಂದ ಬರುವುದಕ್ಕೆ ಬಿಜೆಪಿಯವರು ಹಣದ ಆಫರ್ ಕೊಟ್ಟಿದ್ದು ನಿಜ' ಎಂದು ಶ್ರೀಮಂತ ಪಾಟೀಲ ಅವರು ಕಾಗವಾಡ ತಾಲ್ಲೂಕಿನ ಐನಾಪುರದಲ್ಲಿ ಶನಿವಾರವಷ್ಟೇ ಹೇಳಿಕೆ ನೀಡಿದ್ದರು.

ಕಾಂಗ್ರೆಸ್‌ಗೆ ಕರೆದಿದ್ದೇನೆ –ಅಂಜಲಿ: 'ಅಣ್ಣ (ಶ್ರೀಮಂತ ಪಾಟೀಲ) ಅವರನ್ನು ಇಲ್ಲಿಗೆ (ಕಾಂಗ್ರೆಸ್) ಬನ್ನಿ ಎಂದು ಕರೆಯುತ್ತಿದ್ದೇನೆ. ಯಾವಾಗ ಬರುತ್ತಾರೋ ನೋಡಬೇಕು' ಎಂದು ಪಾಟೀಲರತ್ತ ನೋಡುತ್ತ ಖಾನಾಪುರ ಕಾಂಗ್ರೆಸ್ ಶಾಸಕಿ ಡಾ.ಅಂಜಲಿ ನಿಂಬಾಳ್ಕರ ಹೇಳಿದರು.

'ಹಣ ಕೊಡಲು ಬಂದಿದ್ದವರಾರು?' (ಅಥಣಿ ವರದಿ): 'ಕಾಂಗ್ರೆಸ್‌ನಿಂದ ಬರಲು ಬಿಜೆಪಿಯವರು ಹಣದ ಆಫರ್ ಕೊಟ್ಟಿದ್ದರು ಎಂದು ಶಾಸಕ ಶ್ರೀಮಂತ ಪಾಟೀಲ ಅವರ ಹೇಳಿಕೆ ಗಮನಿಸಿದ್ದೇನೆ. ಮಾತಿನ ಭರದಲ್ಲಿ ಹೀಗೆ ಹೇಳಿರಬಹುದು. ಸಿಕ್ಕಾಗ ಅವರೊಂದಿಗೆ ಚರ್ಚಿಸುತ್ತೇನೆ' ಎಂದು ವಿಧಾನಪರಿಷತ್ ಸದಸ್ಯ ಲಕ್ಷ್ಮಣ ಸವದಿ ಪ್ರತಿಕ್ರಿಯಿಸಿದರು.

'ಹಣ ಕೊಡಲು ಯಾರು ಬಂದಿದ್ದರು? ಆಮಿಷ ಒಡ್ಡಿದವರಾರು? ಎನ್ನುವುದನ್ನು ಅವರನ್ನೇ ಕೇಳುತ್ತೇನೆ' ಎಂದರು.

'ಆಲದಮರ' ಕ್ಲಬ್‌ಹೌಸ್ ಚರ್ಚೆಯಲ್ಲಿ ಪುರುಷೋತ್ತಮ ಬಿಳಿಮಲೆ ಅಭಿಮತ

'ಜಾನಪದದ ಮಹಿಳಾ ಧ್ವನಿ ಮತ್ತೆ ಮೊಳಗಲಿ'

ಪ್ರಜಾವಾಣಿ ವಾರ್ತೆ

ಪುರುಷೋತ್ತಮ ಬಿಳಿಮಲೆ



ಪಿಚ್ಚಳ್ಳಿ ಶ್ರೀನಿವಾಸ್

ಕಾಳೇಗೌಡ ನಾಗವಾರ

ವಿಶ್ವೇಶ್ವರಿ ಬಸವಲಿಂಗಯ್ಯ ಹಿರೇಮಠ

ಶಿಲ್ಪಾ ಮುಡಬಿ

ಬೆಂಗಳೂರು: 'ಮಹಿಳೆಯನ್ನು ಮತ್ತೆ ಮನೆಯೊಳಗೆ ದೂಡುವ, ಸಾರ್ವಜನಿಕ ಜೀವನದಿಂದ ಹೊರಗೆ ತಳ್ಳುವ ಮಾತುಗಳು ಬೇರೆ ಬೇರೆ ಕಡೆಯಿಂದ ಕೇಳಿಬರುತ್ತಿರುವ ಈ ಸಂದರ್ಭದಲ್ಲಿ, ಜಾನಪದ ಹಾಡು, ಕಥೆಗಳಲ್ಲಿನ ಮಹಿಳೆಯ ಧ್ವನಿಯನ್ನು ಮತ್ತೆ ಹೊರತರಬೇಕಾಗಿದೆ....'

– ಇದು 'ಜಾನಪದ ಮತ್ತು ಮಹಿಳೆ' ಎಂಬ ವಿಷಯದ ಕುರಿತು ಪ್ರಜಾವಾಣಿ 'ಆಲದಮರ'ದಡಿ ಭಾನುವಾರ ನಡೆದ ಮಾತುಕತೆಯಲ್ಲಿ ನಿವೃತ್ತ ಪ್ರಾಧ್ಯಾಪಕ ಪುರುಷೋತ್ತಮ ಬಿಳಿಮಲೆ ಅವರು ಕೇಳುಗರ ಮುಂದಿಟ್ಟ ಅಭಿಮತ.

ಈ ಮಾತು–ಕತೆ ಹಾಗೂ ಹಾಡಿನ ವೇದಿಕೆಯಲ್ಲಿ ಜಾನಪದ ವಿದ್ವಾಂಸರಾದ ಕಾಳೇಗೌಡ ನಾಗವಾರ, ಜಾನಪದ ಗಾಯಕರಾದ ಪಿಚ್ಚಳ್ಳಿ ಶ್ರೀನಿವಾಸ್, ಸಂಶೋಧಕಿ, ಗಾಯಕಿ ಶಿಲ್ಪಾ ಮುಡಬಿ ಹಾಗೂ ಜಾನಪದ ಕಲಾವಿದೆಯಾದ ವಿಶ್ವೇಶ್ವರಿ ಬಸವ ಲಿಂಗಯ್ಯ ಹಿರೇಮಠ ಅವರು ಭಾಗವಹಿಸಿದ್ದರು. ಮಾತುಕತೆಯ ಜೊತೆಗೆ ಜಾನಪದ ಹಾಡುಗಳ ರಸದೌತಣವೂ ವೇದಿಕೆಯಲ್ಲಿತ್ತು.

'ಜಾನಪದ ಮಹಿಳಾ ಕೇಂದ್ರಿತವಾದ ಭಾಷೆ. ಭಾಷೆ, ರೂಪಕ ಹಾಗೂ ಸಾಹಿತ್ಯದ ದೃಷ್ಟಿಯಿಂದ ನಮಗೆ ಜಾನಪದದಲ್ಲಿ ಮಹಿಳೆ ಒಂದು ದೊಡ್ಡ ಆಕರ ಸಾಮಗ್ರಿಯನ್ನು ಇಟ್ಟು ಆಕೆ ಮರೆಯಾಗಿದ್ದಾಳೆ. ಮರೆಯಾದ ಹೆಣ್ಣಿನ ಧ್ವನಿಯನ್ನು ಈಚೆ ತಂದು ನಾವು ಕರ್ನಾಟಕದ ಮಹಿಳಾ ಚರಿತ್ರೆಯನ್ನು ಕಟ್ಟಿದರೆ, ಅದರಿಂದ ಕರ್ನಾಟಕದ ಶೈಕ್ಷಣಿಕ ಕ್ಷೇತ್ರದಲ್ಲಿ ದೊಡ್ಡ ಬದಲಾವಣೆ ಸಾಧ್ಯವಿದೆ' ಎಂದರು ಬಿಳಿಮಲೆ.

'ಮಹಿಳೆ ಇಲ್ಲದೆ ಜಾನಪದ ಇಲ್ಲ. ಜಾನಪದ ಅಕಾಡೆಮಿ ಸೃಷ್ಟಿಯಾಗಿ ಕೆಲ ದಶಕಗಳೇ ಕಳೆದಿದ್ದರೂ ತಾಯಂದಿರಿಗೆ ಸಿಗಬೇಕಿದ್ದ ಆದ್ಯತೆ ಕಡಿಮೆ ಸಿಕ್ಕಿದೆ' ಎನ್ನುವ ಬೇಸರ ಹೊರಹಾಕಿದ ಪಿಚ್ಚಳ್ಳಿ, 'ನಮ್ಮ ತನ ಉಳಿಯಬೇಕಾದರೆ ಜಾನಪದ ಗೀತೆಗಳನ್ನು ಮೂಲ ಧಾಟಿಯಲ್ಲೇ ಹಾಡಬೇಕು. ಇತ್ತೀಚೆಗೆ 'ಕೋಲುಮಂಡೆ ಜಂಗಮದೇವ' ಹಾಡಿಗೆ ಆಧುನಿಕ ಸ್ಪರ್ಶ ನೀಡಿ, ಅರೆಬರೆಬಟ್ಟೆ ತೊಡಿಸಿ ವ್ಯಾಪಾರ ಉದ್ದೇಶದಿಂದ ಯೂಟ್ಯೂಬ್‌ನಲ್ಲಿ ಒಬ್ಬ ಹಾಕಿದ್ದ. ಮೂಲ ಉಳಿಸದೇ ಇದ್ದರೆ ಶಿವಶರಣ ಸಂಕಮ್ಮ ಹಾಡು ಹೀಗೇ ಇತ್ತೇನೋ ಎಂಬ ತಪ್ಪು ಸಂದೇಶವನ್ನು ಮುಂದಿನ ಪೀಳಿಗೆಗೆ ನೀಡಿದಂತಾಗುತ್ತದೆ' ಎಂದು ಕೇಳುಗರೊಬ್ಬರ ಪ್ರಶ್ನೆಗೆ ಉತ್ತರಿಸಿದರು.

ಪ್ರಜಾವಾಣಿ ಆಲದಮರ

ಶಿಲ್ಪಾ ಮುಡಬಿ ಮಾತನಾಡಿ, 'ಜಾನಪದ ಎನ್ನುವುದು ಸಮಕಾಲೀನ. ಬದುಕಿನೊಳಗೇ ಜಾನಪದವಿದೆ. ನಮ್ಮ ಅಜ್ಜಿಗೆ ಹೋಗಿ ನೀನು ಜಾನಪದ ಕಲಾವಿದೆ ಎಂದರೆ ನಗುತ್ತಿದ್ದರು. ಏಕೆಂದರೆ ಜಾನಪದ ಕಲಿಯಲು ಆಕೆ ಕಲಾವಿದೆಯಾಗಿರಬೇಕಾಗಿಲ್ಲ. ಆಕೆ ಅದರೊಳಗೆ ಏನು ಬೇಕಾದರೂ ಸೇರಿಸಬಹುದು, ಹೇಗಾದರೂ ಹಾಡಬಹುದು. ಇದನ್ನು ನಾವು ಯುವಜನತೆಗೆ ಕಲಿಸಲು ನಮಗೆಷ್ಟು ಮೂಲ ಗೊತ್ತಿದೆ ಎನ್ನುವುದು ಮುಖ್ಯ' ಎಂದರು.

'ಜಾನಪದ ಜೀವನ ಸಾಹಿತ್ಯ. ಜಾನಪದ ಎಂದರೆ ಮೊದಲು ಮನಸ್ಸಿಗೆ ಬರುವುದು ತಾಯಿ, ಮಹಿಳೆ. ಬೀಸುತ್ತಾ, ಕುಟ್ಟುತ್ತಾ, ಮಗುವನ್ನು ಮಲಗಿಸುತ್ತಾ ತನ್ನ ಜಾನಪದ ಸಂಪ್ರದಾಯ ಪದಗಳೊಳಗೆ ಅವಳ ಅದ್ಭುತವಾದ ಕಲ್ಪನಾ ಶಕ್ತಿಯನ್ನು ತೆರೆದಿಟ್ಟಳು' ಎಂದು ವಿಶ್ವೇಶ್ವರಿಯವರು ಹೇಳಿದರು.

'ಹೆಣ್ಣುಮಕ್ಕಳಿಗೆ ಸ್ವಾತಂತ್ರ್ಯ ಇರದ ಸಂದರ್ಭದಲ್ಲಿ ಮುಕ್ತ ಚರ್ಚೆ ಸಾಧ್ಯವಾಗುತ್ತಿರಲಿಲ್ಲ. ಇಂತಹ ಸಂದರ್ಭದಲ್ಲಿ ಬದುಕಿನ ಸರ್ವ ವಿವರಗಳನ್ನೂ, ಮಹಿಳೆಯರ ಅನುಭವಗಳನ್ನು ದಾಖಲಿಸಿದ್ದು ಜಾನಪದ. ಕವಿ ಬರೆಯುವುದು ವೈಯಕ್ತಿಕ, ಸಮುದಾಯ ಅನುಭವ ಜಾನಪದದಲ್ಲಿದೆ' ಎಂದು ಕಾಳೇಗೌಡ ನಾಗವಾರ ಅವರು ಹೇಳಿದರು.

ಶಿರಸಿಯ ನಯನ ಸಭಾಂಗಣದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಸಾಹಿತಿ ವಿಜಯನಳಿನಿ ರಮೇಶ (ಎಡದಿಂದ ಮೊದಲನೆಯವರು) ಅವರ ಪತಿ ಹೆಸರಿನಲ್ಲಿ ನೀಡುವ 'ಎಂ. ರಮೇಶ ಪ್ರಶಸ್ತಿ'ಯನ್ನು ಯಕ್ಷಗಾನ ಹಾಸ್ಯ ಕಲಾವಿದ ಶ್ರೀಧರ ಹೆಗಡೆ ಚಪ್ಪರಮನೆ ಅವರಿಗೆ ಪ್ರದಾನ ಮಾಡಲಾಯಿತು. ಶ್ರೀಧರ ಅವರ ಪತ್ನಿ ಸಾವಿತ್ರಿ ಹೆಗಡೆ, ಜಯಪ್ರಕಾಶ ಹೆಗಡೆ, ನಯನಾ ಫೌಂಡೇಷನ್ ಸ್ಥಾಪಕ ಡಾ.ಕೆ.ವಿ. ಶಿವರಾಂ, ಪತ್ರಕರ್ತ ಅಶೋಕ ಹಾಸ್ಯಗಾರ, ಚಿತ್ರ ನಟ ನೀರ್ನಳ್ಳಿ ರಾಮಕೃಷ್ಣ, ಗ್ರಾಮೀಣಾಭಿವೃದ್ಧಿ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಪ್ರಮೋದ ಹೆಗಡೆ, ಚಿಂತಕ ವಿ.ಪಿ. ಹೆಗಡೆ ಇದ್ದಾರೆ —ಪ್ರಜಾವಾಣಿ ಚಿತ್ರ

'ದೇಗುಲ ತೆರವುಗೊಳಿಸಿದರೆ ಜನಾಂದೋಲನ'

ಪ್ರಜಾವಾಣಿ ವಾರ್ತೆ

ಮೈಸೂರು: ಸಾರ್ವಜನಿಕ ಸ್ಥಳಗಳಲ್ಲಿರುವ ದೇಗುಲಗಳ ತೆರವು ಕಾರ್ಯಾಚರಣೆ ಮುಂದುವರಿಸಿದರೆ ದೇವಸ್ಥಾನ ಉಳಿಸಿ ಜನಾಂದೋಲನ ನಡೆಸಲಾಗುವುದು ಎಂದು ಸಂಸದ ಪ್ರತಾಪಸಿಂಹ ಎಚ್ಚರಿಕೆ ನೀಡಿದರು.

'ಸುಪ್ರೀಂ ಕೋರ್ಟ್ ಆದೇಶವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದ ಜಿಲ್ಲಾಡಳಿತ, ದೇಗುಲಗಳನ್ನಷ್ಟೇ ತೆರವುಗೊಳಿಸುತ್ತಿರುವುದು ಸರಿಯಲ್ಲ. ಈ ಕುರಿತು 2010ರಲ್ಲಿ ಹೊರಡಿಸಿದ್ದ ಆದೇಶವನ್ನು ವಾಪಸ್ ಪಡೆಯಬೇಕು' ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

'ಸಾರ್ವಜನಿಕ ಸ್ಥಳಗಳಲ್ಲಿ ಅಕ್ರಮವಾಗಿ ನಿರ್ಮಾಣ ಮಾಡಿರುವ ಧಾರ್ಮಿಕ ಕಟ್ಟಡಗಳನ್ನು ಪ್ರತ್ಯೇಕವಾಗಿ ಪರಿಗಣಿಸಿ ಬದಲಿ ಸ್ಥಳ ನೀಡುವುದು, ಸಾಧ್ಯವಾದರೆ ಸಕ್ರಮಗೊಳಿಸುವುದು ಸೇರಿ ವಿವಿಧ ಕ್ರಮಗಳ ಮೂಲಕ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಜಿಲ್ಲಾಡಳಿತ ಈ ಅಂಶ ಕೈಬಿಟ್ಟು ನಸುಕಿನಲ್ಲಿ ಬರುವ ಕಳ್ಳರಂತೆ ತೆರವು ಕಾರ್ಯಾಚರಣೆ ನಡೆಸುತ್ತಿದೆ' ಎಂದು ಹರಿಹಾಯ್ದರು.

'ಮೈಸೂರು ಜಿಲ್ಲಾಡಳಿತ 9 ದೇಗುಲಗಳನ್ನು ತೆರವುಗೊಳಿಸಿ, ಚರ್ಚ್, ಮಸೀದಿ, ದರ್ಗಾಗಳನ್ನು ಉಳಿಸಿದೆ. ಮುಂದೆ ತೆರವು ಮಾಡುವಂತಹ ಪಟ್ಟಿಯಲ್ಲಿ 90ಕ್ಕೂ ಹೆಚ್ಚು ದೇಗುಲಗಳಿದ್ದು, ಹಿಂದೂ ಧರ್ಮವನ್ನಷ್ಟೆ ಅಧಿಕಾರಿಗಳು ಗುರಿಯಾಗಿಸಿಕೊಂಡಿದ್ದಾರೆ' ಎಂದು ದೂರಿದರು.

'ಮೆಕ್ಕಾವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಮಸೀದಿ, ರೋಮ್ ಮನಸ್ಸಿನಲ್ಲಿ ಇಟ್ಟುಕೊಂಡು ಚರ್ಚ್‌ಗಳಲ್ಲಿ ಪ್ರಾರ್ಥಿಸಲಾಗುತ್ತದೆ. ದೇಗುಲದಲ್ಲಿ ವಿಗ್ರಹವನ್ನೇ ಮನಸ್ಸಿನಲ್ಲಿಟ್ಟುಕೊಂಡು ಪ್ರಾರ್ಥಿಸಲಾಗುತ್ತದೆ. ಮಸೀದಿ, ಚರ್ಚ್‌ಗಳನ್ನು ತೆರವು ಮಾಡಿದಂತೆ ದೇಗುಲಗಳನ್ನು ತೆರವುಗೊಳಿಸುವುದು ಸರಿಯಲ್ಲ' ಎಂದು ಹೇಳಿದರು.

'ಮಸೀದಿಗಳ ತಂಟೆಗೆ ಬಂದರೆ ನಾವೇನೂ ಬಳೆ ತೊಟ್ಟಿಲ್ಲ' ಎಂಬ ಶಾಸಕ ತನ್ವೀರ್ ಸೇಠ್ ಹೇಳಿಕೆಗೆ, 'ಈ ಹೇಳಿಕೆ ಮಹಿಳೆಯರಿಗೆ ತೋರುವ ಅಗೌರವ. ಅವರ ಧರ್ಮದಲ್ಲಿ ಮಹಿಳೆಗೆ ಬುರ್ಖಾ ಹಾಕಿ ಅಡುಗೆ ಮನೆಗೆ ಸೀಮಿತಗೊಳಿಸಲಾಗಿದೆ. ಸೋನಿಯಾ ಗಾಂಧಿ, ಇಂದಿರಾ ಗಾಂಧಿ, ಒನಕೆ ಓಬವ್ವ ಮಹಿಳೆಯರು ಎಂಬುದನ್ನು ಅವರು ಮರೆಯಬಾರದು' ಎಂದರು.

'ದೇಗುಲ ಒಡೆಯುವುದು ಎದೆಗೆ ಒದ್ದಂತೆ'

'ದೇಗುಲಗಳನ್ನು ಒಡೆಯುವುದು ಎದೆಗೆ ಒದ್ದಂತೆ' ಎಂದು ಶಾಸಕ ಜಿ.ಟಿ. ದೇವೇಗೌಡ ಅಸಮಾಧಾನ ವ್ಯಕ್ತಪಡಿಸಿದರು.

'ಕೆರೆಗಳ ಒತ್ತುವರಿ ತೆರವುಗೊಳಿಸುವುದು ಬಿಟ್ಟು, ದೇಗುಲ ತೆರವು ಮಾಡುವುದು ಸರಿಯಲ್ಲ. ತಾಳ್ಮೆಯನ್ನು ಪರೀಕ್ಷಿಸಬಾರದು, ಜನ ದಂಗೆ ಎದ್ದರೆ ಉಳಿಯಲಾಗದು. ಸುಪ್ರೀಂ ಕೋರ್ಟ್ ತೀರ್ಪನ್ನು ಅಧ್ಯಯನ ಮಾಡಿ ಸರಿಯಾದ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

'ಹಲವು ಡಿಎಸ್‌ಎಸ್ ಇವೆ, ಒಂದಾಗಬೇಕು'

ಬಸವಮೂರ್ತಿ ಸ್ವಾಮೀಜಿ

ದಾವಣಗೆರೆ: 'ನಾವು ಬಲ ಪಂಥದ ಬಗ್ಗೆ ಮಾತನಾಡುತ್ತೇವೆ. ಅವರು ಹುಟ್ಟುಹಾಕಿರುವ ಆರ್‌ಎಸ್‌ಎಸ್ ಸಂಘಟನೆ ಒಂದೇ ಇದೆ. ಆದರೆ ನಮ್ಮ ಡಿಎಸ್‌ಎಸ್ ಹಲವಾರು ಇವೆ. ಇವೆಲ್ಲವೂ ಒಂದಾಗಬೇಕು' ಎಂದು ಮಾದಾರ ಚನ್ನಯ್ಯ ಗುರುಪೀಠದ ಪೀಠಾಧ್ಯಕ್ಷ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಆಶಯ ವ್ಯಕ್ತಪಡಿಸಿದರು.

ಸ್ವಾಭಿಮಾನಿ ಎಸ್‌ಸಿ/ಎಸ್‌ಟಿ ಸಂಘಟನೆಗಳ ಒಕ್ಕೂಟದಿಂದ ಭಾನುವಾರ ನಗರದಲ್ಲಿ ನಡೆದ ವಿಚಾರ-ಸಂಕಿರಣದಲ್ಲಿ ಅವರು ಮಾತನಾಡಿದರು.

'ವಿಧಾನಸಭೆಯಲ್ಲಿ ಎಸ್‌ಸಿ, ಎಸ್‌ಟಿಯ 52 ಶಾಸಕರಿದ್ದಾರೆ. ಆದರೆ ರಾಜ್ಯದ ಚುಕ್ಕಾಣಿ ಹಿಡಿಯಲು ಆಗಲಿಲ್ಲ. ಬೇರೆ ಪಕ್ಷದಿಂದ ಬಂದ ಕೇವಲ 13 ಶಾಸಕರಿಂದ ಬಿ.ಎಸ್.ಯಡಿಯೂರಪ್ಪ ಸಿ.ಎಂ ಆದರು. ಎಸ್‌ಸಿಯಲ್ಲಿರುವ 101 ಜಾತಿ, ಎಸ್‌ಟಿಯಲ್ಲಿರುವ 50 ಜಾತಿಗಳು ಒಂದಾಗಬೇಕು. ಅದಕ್ಕಾಗಿ ಈ ಸಮುದಾಯಗಳ ಸ್ವಾಮೀಜಿಗಳು ಸೇರಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು' ಎಂದೂ ಸಲಹೆ ನೀಡಿದರು.

ಶಾಸಕರ 'ನಿಧಿ': ಸಿಎಂ ಅತೃಪ್ತಿ

ಒಂದನೇ ಪುಟದಿಂದ

'ಈ ಯೋಜನೆಯಡಿ ಪ್ರಸಕ್ತ ವರ್ಷದ (2021–22) ಎರಡು ಕಂತು (ಒಟ್ಟು ತಲಾ ₹1 ಕೋಟಿ) ಅನುದಾನವನ್ನು ಎಲ್ಲ ಶಾಸಕರ ಖಾತೆಗೆ ಈಗಾಗಲೇ ಬಿಡುಗಡೆ ಮಾಡಲಾಗಿದೆ. ಯೋಜನೆಯ ಮಾರ್ಗಸೂಚಿ ಅನ್ವಯ, ಪ್ರತಿ ವರ್ಷ ಜೂನ್ ತಿಂಗಳ ಒಳಗೆ ಎಲ್ಲ ಶಾಸಕರು ತಮ್ಮ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿ ತಲಾ ₹ 2 ಕೋಟಿವರೆಗಿನ ಪ್ರಸ್ತಾವನೆಗಳನ್ನು ಜಿಲ್ಲಾಧಿಕಾರಿಗಳಿಗೆ ನೀಡಬೇಕು ಮತ್ತು ಪ್ರಸ್ತಾವಿತ ಕಾಮಗಾರಿಯನ್ನು ಎರಡು ವರ್ಷದ ಒಳಗೆ ಪೂರ್ಣಗೊಳಿಸಬೇಕಾಗಿದೆ. ಆದರೂ ಸುಮಾರು ವರ್ಷಗಳಿಂದ ಬಾಕಿ ಇರುವ ಕಾಮಗಾರಿಗಳು ಪೂರ್ಣಗೊಳಿಸದೇ ಇರುವ ಪರಿಸ್ಥಿತಿ ಕಂಡುಬಂದಿದೆ' ಎಂದೂ ಬೊಮ್ಮಾಯಿ ಬೇಸರ ವ್ಯಕ್ತಪಡಿಸಿದ್ದಾರೆ.

ಅನುದಾನ ಕಡಿತ- ಹೊರಟ್ಟಿ ಸಭೆ: ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ ಬಿಡುಗಡೆ ಆಗಿರುವ ಅನುದಾನ ಜಿಲ್ಲಾಧಿಕಾರಿಗಳ ಖಾತೆಗಳಲ್ಲಿ ಬಳಕೆಯಾಗದೇ ಉಳಿದಿದ್ದರೂ, 2018-19, 2019-20 ಮತ್ತು 2020-21ನೇ ಸಾಲಿನಲ್ಲಿ ಅನುದಾನ ಕಡಿತ ಮಾಡಲಾಗಿದೆ ಎಂದು ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ನೇತೃತ್ವದಲ್ಲಿ ಇತ್ತೀಚೆಗೆ ಸಭೆ ಸೇರಿ ಪರಿಷತ್ ಸದಸ್ಯರು ಅಸಮಾಧಾನ ವ್ಯಕ್ತಪಡಿಸಿದ್ದರು!

ಹೀಗಾಗಿ, ಅನುದಾನ ಬಿಡುಗಡೆಗೆ ಆಡಳಿತಾತ್ಮಕ ಅಡ್ಡಿ ಸೇರಿದಂತೆ ವಿವಿಧ ಸಮಸ್ಯೆಗಳ ಬಗ್ಗೆ ಅಧ್ಯಯನ ನಡೆಸಿ ಮುಖ್ಯಮಂತ್ರಿಗೆ ಮನವರಿಕೆ ಮಾಡಿಕೊಡಲು ತಮ್ಮ ಅಧ್ಯಕ್ಷತೆಯಲ್ಲಿ ವಿವಿಧ ಪಕ್ಷಗಳ ಐವರು ಸದಸ್ಯರನ್ನು (ಕೆ.ಸಿ. ಕೊಂಡಯ್ಯ, ಎಸ್. ರವಿ, ತೇಜಸ್ವಿನಿ ಗೌಡ, ನಿರಾಣಿ ಹಣಮಂತ ರುದ್ರಪ್ಪ, ಅಪ್ಪಾಜಿಗೌಡ) ಒಳಗೊಂಡ ಸಮಿತಿಯನ್ನು ಹೊರಟ್ಟಿ ರಚಿಸಿದ್ದರು.

ಸಮಿತಿಯ ಸಭೆಯಲ್ಲಿ ಭಾಗವಹಿಸಿದ್ದ ಯೋಜನಾ ಮತ್ತು ಸಾಂಖ್ಯಿಕ ಇಲಾಖೆ ಅಧಿಕಾರಿಗಳು, '20018–19ರಲ್ಲಿ ₹ 127.69 ಕೋಟಿ, 2019– 20ರಲ್ಲಿ ₹ 303.91 ಕೋಟಿ ಬಿಡುಗಡೆಗೆ ಬಾಕಿ ಇದೆ. ಕಳೆದ ಸಾಲಿನಲ್ಲಿ (2020–21) ಪ್ರತಿ ಕ್ಷೇತ್ರಕ್ಕೆ ತಲಾ ₹ 1 ಕೋಟಿ ಮಾತ್ರ ಬಿಡುಗಡೆ ಮಾಡಿ ಸರ್ಕಾರ ಆದೇಶಿಸಿದ್ದರೂ ಪ್ರತಿ ಕ್ಷೇತ್ರಕ್ಕೆ ತಲಾ ₹ 2 ಕೋಟಿ ಬಿಡುಗಡೆ ಮಾಡಲಾಗಿದೆ. ಹೀಗೆ ಹೆಚ್ಚುವರಿಯಾಗಿ ಬಿಡುಗಡೆ ಮಾಡಿರುವ ಒಟ್ಟು ₹ 300 ಕೋಟಿಯನ್ನು, 2019–20ನೇ ಸಾಲಿನಲ್ಲಿ ಬಿಡುಗಡೆ ಮಾಡಲು ಬಾಕಿ ಇದ್ದ ₹ 300 ಕೋಟಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕು. ಅಲ್ಲದೆ, ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಪ್ರಸಕ್ತ ಲಭ್ಯವಿರುವ ಅನುದಾನ ಪೂರ್ಣವಾಗಿ ವೆಚ್ಚವಾದ ಬಳಿಕ ಪ್ರಸ್ತಾವನೆ ಸಲ್ಲಿಸಿದರೆ 2018–19ನೇ ಸಾಲಿನಲ್ಲಿ ಬಿಡುಗಡೆಗೆ ಬಾಕಿ ಇದ್ದ ₹ 127.69 ಕೋಟಿ ಬಿಡುಗಡೆ ಮಾಡಲು ಆರ್ಥಿಕ ಇಲಾಖೆ ಸಹಮತಿ ನೀಡಿದೆ' ಎಂದು ತಿಳಿಸಿದ್ದರು.

ಧರಣಿ, ಗದ್ದಲ ಇಲ್ಲ: ಮಾತಿನ 'ಕುಸ್ತಿ'

ಒಂದನೇ ಪುಟದಿಂದ

ಅಧಿವೇಶನ ಇದೇ 23 ರವರೆಗೆ ನಡೆಯಲಿದೆ.

ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಆದ ಬಳಿಕ ಎದುರಿಸುತ್ತಿರುವ ಮೊದಲ ಅಧಿವೇಶನ ಇದಾಗಿದೆ. ಈ ಹಿಂದೆ ಅವರು ಕಾನೂನು ಮತ್ತು ಸಂಸದೀಯ ಸಚಿವರಾಗಿ ಬಿ.ಎಸ್. ಯಡಿಯೂರಪ್ಪ ಸರ್ಕಾರವನ್ನು ಸಮರ್ಥಿಸುವ ಕೆಲಸ ಮಾಡಿದ್ದರು. ಈಗ ಆ ಜವಾಬ್ದಾರಿ ಸಚಿವ ಜೆ.ಸಿ. ಮಾಧುಸ್ವಾಮಿ ಅವರ ಹೆಗಲೇರಿದೆ.

ಕಾಂಗ್ರೆಸ್ ಕಾರ್ಯತಂತ್ರವೇನು:?

'ಈ ಹಿಂದಿನ ಅಧಿವೇಶನದಲ್ಲಿ ಗದ್ದಲ, ಸಭಾತ್ಯಾಗ, ಧರಣಿ ನಡೆದು ಗದ್ದಲದ ವಿಷಯಗಳೇ ಜನರಿಗೆ ತಲುಪುತ್ತಿದ್ದವು. ಸದನದಲ್ಲಿ ಪ್ರಸ್ತಾಪಿಸುತ್ತಿದ್ದ ಗಂಭೀರ ವಿಚಾರಗಳು ಜನರಿಗೆ ತಲುಪುತ್ತಿರಲಿಲ್ಲ. ಇಂತಹ ಪರಿಸ್ಥಿತಿಯ ಲಾಭ ಪಡೆದು ಸರ್ಕಾರವೂ ತನಗೆ ಬೇಕಾದ ಹಾಗೇ ಮಸೂದೆಗಳನ್ನು ಮಂಡಿಸಿ ಅಂಗೀಕಾರ ಪಡೆಯುತ್ತಿತ್ತು. ಈ ಬಾರಿ ಕಾರ್ಯತಂತ್ರ ಬದಲಿಸಲಾಗಿದೆ. ಪ್ರಮುಖ ವಿಷಯಗಳ ಬಗ್ಗೆ ನಿಲುವಳಿ ಸೂಚನೆ ಮಂಡಿಸಿ ಚರ್ಚೆಗೆ ಒತ್ತಾಯಿಸಲು ತೀರ್ಮಾನಿಸಲಾಗಿದೆ' ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

'ಸರ್ಕಾರದಿಂದ ಪ್ರಾಮಾಣಿಕ ಉತ್ತರ ಬಯಸುತ್ತೇವೆ. ಒಂದು ವೇಳೆ ಉತ್ತರ ಕೊಡದಿದ್ದರೆ ಜನರಿಗೆ ವಾಸ್ತವ ಅರ್ಥವಾಗುತ್ತದೆ. ಜನರಿಗೆ ಸಂಬಂಧಿಸಿದ ಸಂಕಷ್ಟಗಳನ್ನು ಎಳೆ ಎಳೆಯಾಗಿ ಬಿಡಿಸಿಡುತ್ತೇವೆ. ಎಲ್ಲ ಶಾಸಕರಿಗೂ ಅವರ ಆಸಕ್ತಿಯ ವಿಚಾರಗಳನ್ನು ಚರ್ಚಿಸಲು ಸಿದ್ಧತೆ ನಡೆಸಿಕೊಂಡು ಬರಲು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ' ಎಂದು ಮೂಲಗಳು ಹೇಳಿವೆ.

ಮೈಸೂರಿನಲ್ಲಿ ನಡೆದ ಅತ್ಯಾಚಾರ ಪ್ರಕರಣ, ಹಜ್ ಮತ್ತು ವಕ್ಫ್ ಸಚಿವೆ ಶಶಿಕಲಾ ಜೊಲ್ಲೆ ಮತ್ತು ಕೃಷಿ ಸಚಿವ ಬಿ.ಸಿ. ಪಾಟೀಲ ಅವರ ಮೇಲೆ ಭ್ರಷ್ಟಾಚಾರ ಆರೋಪಗಳ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಲು ಕಾಂಗ್ರೆಸ್ ನಿರ್ಧರಿಸಿದೆ.

ನೀತಿ ನಿರೂಪಣಾ ಸಮಿತಿ: ಪ್ರತಿ ಬಾರಿಯೂ ಗದ್ದಲ, ಧರಣಿ, ಸಭಾತ್ಯಾಗದ ಕಾರಣ ವಿಧಾನಸಭೆಯ ಕಲಾಪ ನಡೆಯದೇ ಇರುವುದರಿಂದ ಕಲಾಪ ಸುಗಮವಾಗಿ ನಡೆಸಲು ಪೂರಕವಾಗಿ ನೀತಿ ನಿರೂಪಣಾ ಸಮಿತಿಯೊಂದನ್ನು ರಚಿಸಲು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ನಿರ್ಧರಿಸಿದ್ದಾರೆ.

ಕಲಾಪದ ಅವಧಿಯಲ್ಲಿ ಮುಖ್ಯಮಂತ್ರಿ ಮತ್ತು ಎಲ್ಲ ಸಚಿವರು ಹಾಜರಿರುವುದನ್ನು ಕಡ್ಡಾಯಗೊಳಿಸಲಾಗಿದೆ. ಅಧಿವೇಶನದ ಅವಧಿಯಲ್ಲಿ ಯಾವುದೇ ಇತರ ಕಾರ್ಯಕ್ರಮ ನಿಗದಿಪಡಿಸಿಕೊಳ್ಳಬಾರದು. ಸಚಿವರು ರಜೆ ಅರ್ಜಿ ಸಲ್ಲಿಸಬಾರದು. ನೆಪ ಹೇಳಿ ಕಲಾಪಕ್ಕೆ ಗೈರಾಗುವಂತಿಲ್ಲ ಎಂಬುದಾಗಿ ಕಾಗೇರಿ ಸೂಚನೆ ನೀಡಿದ್ದಾರೆ.

ಈ ಅಧಿವೇಶನದಲ್ಲಿ 18 ಮಸೂದೆಗಳ ಕುರಿತು ಚರ್ಚೆ ನಡೆಯಲಿದೆ. 10 ಹೊಸ ಮಸೂದೆಗಳು. ನಾಲ್ಕು ಮಸೂದೆಗಳನ್ನು ವಿಧಾನಸಭೆಯಲ್ಲಿ ಮಂಡಿಸಿದ್ದು, ಅಂಗೀಕಾರಕ್ಕೆ ಬಾಕಿ ಇವೆ. ನಾಲ್ಕು ಸುಗ್ರೀವಾಜ್ಞೆಗಳನ್ನು ಹೊರಡಿಸಿದ್ದು, ಅವುಗಳಿಗೆ ಪೂರಕವಾದ ಮಸೂದೆಗಳು ಮಂಡನೆಯಾಗಲಿವೆ.

ಕೋಟ ಮೇಲ್ಮನೆ ಸಭಾನಾಯಕ: ಈ ಹಿಂದೆ ಮೇಲ್ಮನೆ ಸಭಾನಾಯಕರಾಗಿದ್ದ ಕೋಟ ಶ್ರೀನಿವಾಸ ಪೂಜಾರಿ ಅವರನ್ನೇ ಮೇಲ್ಮನೆ ಸಭಾನಾಯಕರನ್ನಾಗಿ ನೇಮಿಸಲಾಗಿದೆ.

ಎತ್ತಿನಗಾಡಿಯಲ್ಲಿ ವಿಧಾನಸೌಧಕ್ಕೆ

ಬೆಲೆ ಏರಿಕೆ ಸೇರಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಜನ ವಿರೋಧಿಸಿ ನೀತಿ ವಿರೋಧಿಸಿ ಪ್ರತಿಭಟನೆ ಹಮ್ಮಿಕೊಂಡಿರುವುದಾಗಿ ಕಾಂಗ್ರೆಸ್ ಪಕ್ಷ ತಿಳಿಸಿದೆ.

ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಇತರ ನಾಯಕರು ಪ್ರತಿಭಟನೆಯ ಅಂಗವಾಗಿ ಬೆಳಿಗ್ಗೆ 9ಕ್ಕೆ ಎತ್ತಿನಗಾಡಿಗಳ ಮೂಲಕ ವಿಧಾನಸೌಧಕ್ಕೆ ತೆರಳಲಿದ್ದಾರೆ.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು **'Deccan Herald--Prajavani Relief Trust'** ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು **dept.fnc@printersmysore.co.in** ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - **0404101200385**
IFSC code - **CNRB0000404**
MICR Code - **560015009**

ಸೂಚನೆ
ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	116.30	8,921	10,894
ಹಾರಂಗಿ	2,859	2,858.35	1,791	2,391
ಕಬಿನಿ	2,284	2,282.47	7,450	700
ಹೇಮಾವತಿ	2,922	2,915.46	5,667	5,222
ಲಿಂಗನಮಕ್ಕಿ	1,819	1,814.50	17,248	-
ಸೂಪಾ (ಮೀ)	564	555.98	9,003	3,298
ಮಾಣಿ	594.36	587.16	2,858	-
ತುಂಗಭದ್ರಾ	1,633	1,632.91	24,108	24,195
ಮಲಪ್ರಭಾ	2,079.50	2,079.35	4,725	1.994
ಘಟಪ್ರಭಾ	2,175	2,175	6,682	6,682
ಭದ್ರಾ	186	185.60	5,353	4,751
ಆಲಮಟ್ಟಿ (ಮೀ)	519.60	519.58	44,509	44,509
ನಾರಾಯಣಪುರ (ಮೀ)	492.25	491.89	44,000	49,500

* ನೆಲಮಟ್ಟದಿಂದ

ಗರೀಬ್ ಕಲ್ಯಾಣ್ ಯೋಜನೆ: ಹಣಕಾಸು– ಗ್ರಾಮೀಣಾಭಿವೃದ್ಧಿ ಸಚಿವಾಲಯದ ದತ್ತಾಂಶಗಳಲ್ಲಿ ವ್ಯತ್ಯಾಸ

ಫಲಾನುಭವಿ ಸಂಖ್ಯೆ: ಸರ್ಕಾರಕ್ಕೆ ಗೊಂದಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಕೋವಿಡ್ ಸಂದರ್ಭದಲ್ಲಿ ಗರೀಬ್ ಕಲ್ಯಾಣ್ ಯೋಜನೆಯಡಿ ಮೂರು ಕಂತುಗಳಲ್ಲಿ ತಲಾ ₹1,500 ಕೋಟಿ ನೆರವು ನೀಡಿದ ಫಲಾನುಭವಿ ಮಹಿಳೆಯರ ಸಂಖ್ಯೆ ಎಷ್ಟು?

ಕೇಂದ್ರ ಹಣಕಾಸು ಸಚಿವಾಲಯ ನೀಡಿದ ಹೇಳಿಕೆಗೂ, ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಅಡಿಯಲ್ಲಿ ಗ್ರಾಮೀಣಾಭಿವೃದ್ಧಿ ಸಚಿವಾಲಯ ನೀಡಿರುವ ಅಂಕಿ–ಅಂಶಗಳ ಮಧ್ಯೆ 1.26 ಲಕ್ಷ ವ್ಯತ್ಯಾಸ ಕಂಡುಬಂದಿದೆ. ಒಂದು ವರ್ಷದೊಳಗಿನ ಅವಧಿಯಲ್ಲಿ ಹಣಕಾಸು ಸಚಿವಾಲಯ ನೀಡಿದ ಎರಡು ಹೇಳಿಕೆಗಳೂ ಗಣನೀಯ ವ್ಯತ್ಯಾಸ ತೋರಿಸುತ್ತಿವೆ.

ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಯೋಜನೆಯಡಿ 20 ಕೋಟಿ ಮಹಿಳಾ ಜನ್‌ಧನ್ ಖಾತೆದಾರರಿಗೆ ಏಪ್ರಿಲ್, ಮೇ ಮತ್ತು ಜೂನ್ ತಿಂಗಳಲ್ಲಿ ತಲಾ ₹500 ನೀಡಲಾಗುವುದು ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2020ರ ಮಾರ್ಚ್ 26ರಂದು ಪ್ರಕಟಿಸಿದ್ದರು.

ಸಾಮಾಜಿಕ ಕಾರ್ಯಕರ್ತ ವೆಂಕಟೇಶ್ ನಾಯಕ್ ಅವರಿಗೆ ಗ್ರಾಮೀಣಾಭಿವೃದ್ಧಿ ಸಚಿವಾಲಯವು ಆಗಸ್ಟ್ 31ರಂದು ನೀಡಿದ ಆರ್‌ಟಿಐ ಮಾಹಿತಿ ಪ್ರಕಾರ, ಮೂರು ಕಂತುಗಳಲ್ಲಿ ತಲಾ ₹500 ಪಡೆದ ಫಲಾನುಭವಿಗಳ ಸಂಖ್ಯೆ 20.64 ಕೋಟಿ (20,64,26,947).

> **ಈ ಯೋಜನೆಯಡಿ ₹30,000 ಕೋಟಿ ಹಣ ಖರ್ಚು ಮಾಡುವಾಗ ಸರಿಯಾಗಿ ಲೆಕ್ಕ ಹಾಕಬೇಕು. ಇದು ಕಡಿಮೆ ಮೊತ್ತವೇನಲ್ಲ. ಸಾಲ ತಂದು ಯೋಜನೆಗೆ ಹಣ ಹೊಂದಿಸಲಾಗಿದೆ.**
> **ವೆಂಕಟೇಶ್ ನಾಯಕ್,** ಆರ್‌ಟಿಐ ಕಾರ್ಯಕರ್ತ

ಈ ಯೋಜನೆಯಡಿಯಲ್ಲಿ ₹30,945 ಕೋಟಿ ವಿತರಿಸಲಾಗಿದೆ ಎಂದು ಹಣಕಾಸು ಸಚಿವಾಲಯ ಆಗಸ್ಟ್ 28ರಂದು ಹೇಳಿಕೆ ನೀಡಿತ್ತು. ಸಚಿವಾಲಯವು ನಿಖರವಾದ ಸಂಖ್ಯೆಗಳನ್ನು ನೀಡದಿದ್ದರೂ, ವಿತರಿಸಿದ ಮೊತ್ತದ ಲೆಕ್ಕಾಚಾರ ಪ್ರಕಾರ, ಫಲಾನುಭವಿಗಳ ಸಂಖ್ಯೆ 20.63 ಕೋಟಿ. ಆದರೆ ಸಚಿವಾಲಯದ ಈ ಅಂಕಿ ಅಂಶಕ್ಕೂ ಮತ್ತು ಗ್ರಾಮೀಣಾಭಿವೃದ್ಧಿ ಸಚಿವಾಲಯ ನೀಡಿದ ದತ್ತಾಂಶದ ನಡುವೆ 1.26 ಲಕ್ಷ ಫಲಾನುಭವಿಗಳ ವ್ಯತ್ಯಾಸವಿದೆ ಎಂದು ನಾಯಕ್ ಹೇಳಿದ್ದಾರೆ.

ನಾಯಕ್ ಅವರು ಹಣಕಾಸು ಸಚಿವಾಲಯ ಹೊರಡಿಸಿದ ಎರಡು ಹೇಳಿಕೆಗಳಲ್ಲಿನ ಮತ್ತಷ್ಟು ವ್ಯತ್ಯಾಸಗಳ ಬಗ್ಗೆ ಗಮನ ಸೆಳೆದಿದ್ದಾರೆ. 2020ರ ಜೂನ್ 3ರಂದು ಹೊರಡಿಸಿದ್ದ ತನ್ನ ಮೊದಲ ಹೇಳಿಕೆಯಲ್ಲಿ 20.05 ಕೋಟಿ ಮಹಿಳೆಯರಿಗೆ (ಅಂದರೆ ಶೇ 98.33ರಷ್ಟು ಜನ್‌ಧನ್ ಖಾತೆದಾರರಿಗೆ) 2020ರ ಏಪ್ರಿಲ್‌ನಲ್ಲಿ ತಲಾ ₹ 500 ವರ್ಗಾಯಿಸಲಾಗಿದೆ ಎಂದು ತಿಳಿಸಿತ್ತು. ಆದರೆ ಈ ಸಂಖ್ಯೆಯನ್ನು 20.62 ಕೋಟಿಗೆ ಹೆಚ್ಚಿಸಿತ್ತು. ಶೇ 100 ಜನ್‌ಧನ್ ಖಾತೆದಾರ ಮಹಿಳೆಯರಿಗೆ ಈ ಯೋಜನೆ ತಲುಪಿದೆ ಎಂದು ತಿಳಿಸಿತ್ತು.

‘ಆದರೆ, ಆಗಸ್ಟ್ ತಿಂಗಳಲ್ಲಿ ಸಚಿವಾಲಯ ಹೊರಡಿಸಿದ್ದ ಮತ್ತೊಂದು ಹೇಳಿಕೆ ಪ್ರಕಾರ, ಮೇ ತಿಂಗಳಿಗೆ ಹೋಲಿಸಿದರೆ 2020ರ ಜೂನ್‌ನಲ್ಲಿ 2.26 ಲಕ್ಷ ಫಲಾನುಭವಿಗಳು ಹೆಚ್ಚಾಗಿದ್ದಾರೆ. ಒಂದು ವೇಳೆ ಈ ಮಾಹಿತಿ ನಿಜವಾಗಿದ್ದರೆ, ಮೇ ತಿಂಗಳಲ್ಲಿ ಎಲ್ಲ ಫಲಾನುಭವಿಗಳನ್ನು ತಲುಪಲಾಗಿದೆ ಎಂಬ ಸಚಿವಾಲಯದ ಹೇಳಿಕೆಯೇ ತಪ್ಪಾಗಿರುತ್ತದೆ. ಮೇಲಿನ ಅಂಕಿಗಳಲ್ಲಿ ಯಾವುದು ನಿಖರವಾಗಿದೆ ಎಂದು ಹಣಕಾಸು ಸಚಿವಾಲಯ ಸ್ಪಷ್ಟಪಡಿಸುವವರೆಗೆ, ಈ ವ್ಯತ್ಯಾಸ ಹಾಗೆಯೇ ಉಳಿಯುತ್ತದೆ’ ಎಂದು ನಾಯಕ್ ವಿವರಿಸಿದ್ದಾರೆ.

ಆರ್‌ಟಿಐ ಮಾಹಿತಿ ಪ್ರಕಾರ, ಲೆಕ್ಕಾಚಾರದಂತೆ ಪ್ರತಿ ಫಲಾನುಭವಿಗೆ ₹1,500 ಸಂಪೂರ್ಣ ಪಾವತಿ ಮಾಡಲು ಒಟ್ಟು ₹30,964 ಕೋಟಿ ಅಗತ್ಯವಿದೆ. ಆದರೆ ಹಣಕಾಸು ಸಚಿವಾಲಯದ ಆಗಸ್ಟ್ 28ರ ಹೇಳಿಕೆ ಪ್ರಕಾರ, ₹30,945 ಕೋಟಿ ಸಾಕು ‘ಇದರರ್ಥ ಎಲ್ಲಾ 20.64 ಕೋಟಿ ಮಹಿಳೆಯರು ಮೂರೂ ಕಂತುಗಳನ್ನು ಸ್ವೀಕರಿಸಿಲ್ಲ’ ಎಂದು ನಾಯಕ್ ಹೇಳಿದ್ದಾರೆ.

ಫಲಾನುಭವಿಗಳಿಗೆ ಹಣಕಾಸು ಸಚಿವಾಲಯ ಹಣ ಬಿಡುಗಡೆ ಮಾಡಿದ ಹೇಳಿಕೆಗಳನ್ನು ಗಮನಿಸಿದರೆ ವ್ಯತ್ಯಾಸಗಳು ಸ್ಪಷ್ಟವಾಗಿ ಕಾಣುತ್ತವೆ. 20.05 ಕೋಟಿ ಫಲಾನುಭವಿ ಮಹಿಳೆಯರಿಗೆ ಮೊದಲ ಕಂತಿನಲ್ಲಿ ₹10,029 ಕೋಟಿ ವಿತರಿಸಲಾಗಿದೆ. ಇಷ್ಟು ಹಣದಿಂದ ಶೇ 98.33ರಷ್ಟು ಫಲಾನುಭವಿಗಳನ್ನು ತಲುಪಲಾಗಿತ್ತು. ಮೇ ತಿಂಗಳಲ್ಲಿ 20.62 ಕೋಟಿ ಫಲಾನುಭವಿಗಳಿಗೆ ₹10,315 ಕೋಟಿ ವಿತರಿಸಿದೆ. ಈ ಹಣವು ಎಲ್ಲ ಫಲಾನುಭವಿಗಳನ್ನು ಒಳಗೊಂಡಿದೆ ಎಂದು ಮಾಹಿತಿ ನೀಡಿದೆ. ಮೂರನೇ ಕಂತಾಗಿ ₹10,601 ಕೋಟಿ ಪಾವತಿಸಲಾಗಿದೆ. ಅಂದರೆ ಎರಡನೇ ಕಂತಿನ ಪಾವತಿಗಿಂತ ₹286 ಕೋಟಿ ಹೆಚ್ಚು ಪಾವತಿಯಾಗಿರುವುದು ಕಂಡುಬಂದಿದೆ.

ಎಲ್ಲ ಫಲಾನುಭವಿಗಳನ್ನು ತಲುಪಲಾಗಿದೆ ಎಂದು ಕಳೆದ ವರ್ಷದ ಜೂನ್‌ನಲ್ಲಿ ಸಚಿವಾಲಯ ನೀಡಿದ್ದ ಹೇಳಿಕೆ ಬಹುಶಃ ಸರಿ ಅಲ್ಲ ಎಂದು ನಾಯಕ್ ಹೇಳಿದ್ದಾರೆ.

ಕರ್ನಾಟಕದ ಫಲಾನುಭವಿಗಳ ಸಂಖ್ಯೆ

ಬಾಗಲಕೋಟೆ	1,87,436	ಹಾಸನ	2,04,399
ಬೆಂ. ಗ್ರಾಮಾಂತರ	1,80,726	ಹಾವೇರಿ	1,20,433
ಬೆಂಗಳೂರು ನಗರ	5,65,382	ಕೊಡಗು	67,835
ಬೆಳಗಾವಿ	5,65,457	ಕೋಲಾರ	2,03,347
ಬಳ್ಳಾರಿ	3,42,060	ಕೊಪ್ಪಳ	2,00,107
ಬೀದರ್	3,26,434	ಮಂಡ್ಯ	2,33,364
ಬಿಜಾಪುರ	1,44,239	ಮೈಸೂರು	5,04,365
ಚಾಮರಾಜನಗರ	2,42,128	ರಾಯಚೂರು	2,36,119
ಚಿಕ್ಕಮಗಳೂರು	1,18,329	ಶಿವಮೊಗ್ಗ	2,53,830
ಚಿತ್ರದುರ್ಗ	2,31,803	ತುಮಕೂರು	3,43,567
ದಕ್ಷಿಣ ಕನ್ನಡ	1,99,674	ಉಡುಪಿ	1,06,554
ದಾವಣಗೆರೆ	3,29,025	ಉತ್ತರ ಕನ್ನಡ	2,53,846
ಧಾರವಾಡ	1,97,467	ಒಟ್ಟು	80,64,352
ಗದಗ	69,845		
ಗುಲಬರ್ಗಾ	3,84,186		

ಯೋಜನೆಯ ಫಲಾನುಭವಿಗಳು

- 3.2 ಕೋಟಿಗೂ ಹೆಚ್ಚು ಫಲಾನುಭವಿಗಳೊಂದಿಗೆ ಉತ್ತರ ಪ್ರದೇಶವು ಈ ಯೋಜನೆಯ ಅಗ್ರಸ್ಥಾನದಲ್ಲಿದೆ. ನಂತರದಲ್ಲಿ ಬಿಹಾರ (2.43 ಕೋಟಿ) ಮತ್ತು ಪಶ್ಚಿಮ ಬಂಗಾಳ (1.96 ಕೋಟಿ) ಇವೆ
- 80.64 ಲಕ್ಷ ಫಲಾನುಭವಿಗಳೊಂದಿಗೆ ಕರ್ನಾಟಕ ಹತ್ತನೇ ಸ್ಥಾನದಲ್ಲಿದೆ
- ಜಿಲ್ಲಾವಾರು ಪರಿಶೀಲಿಸಿದರೆ, ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಅತಿ ಹೆಚ್ಚು ಫಲಾನುಭವಿಗಳನ್ನು (17,10,775) ಹೊಂದಿದೆ

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಾಡ್‌ಕಾಸ್ಟ್: ಬೆಳಿಗ್ಗೆ 7 : ವಚನವಾಣಿ, ಬೆಳಿಗ್ಗೆ 7.30: ದಿನದ ಸೂಕ್ತಿ, ಬೆಳಿಗ್ಗೆ 8: ಪ್ರಜಾವಾಣಿ ವಾರ್ತೆ, ಬುಲೆಟಿನ್, ಬೆಳಿಗ್ಗೆ 9: ಪ್ರಚಲಿತ, ಬೆಳಿಗ್ಗೆ 9.30: ಸಂಪಾದಕೀಯ, ಮಧ್ಯಾಹ್ನ 2: ಪ್ರಜಾವಾಣಿ ವಾರ್ತೆ, ಬುಲೆಟಿನ್, ರಾತ್ರಿ 8: ಪ್ರಜಾವಾಣಿ ವಾರ್ತೆ, ಬುಲೆಟಿನ್
ಪ್ರಜಾವಾಣಿ ಕನ್ನಡ ಧ್ವನಿ
ನಾಳೆ
ಸಂವಾದ 14-9-2021 ಬೆಳಿಗ್ಗೆ 11ರಿಂದ 12
ಜಾತಿ ಜನಗಣತಿಯ ಗೊಂದಲ
ಭಾಗವಹಿಸುವವರು
ಡಾ.ಎಚ್.ಸಿ.ಮಹಾದೇವಪ್ಪ, ಮಾಜಿ ಸಚಿವ, ಕಾಂಗ್ರೆಸ್
ಬಿ.ಜೆ. ಪುಟ್ಟಸ್ವಾಮಿ, ಮಾಜಿ ಸಚಿವ, ಬಿಜೆಪಿ
ಎಚ್. ಕಾಂತರಾಜು, ಮಾಜಿ ಅಧ್ಯಕ್ಷ, ರಾಜ್ಯ ಹಿಂದುಳಿದ ವರ್ಗಗಳ ಆಯೋಗ
ರಾಜಲಕ್ಷ್ಮಿ ಅಂಕಲಗಿ, ಸಾಮಾಜಿಕ ಕಾರ್ಯಕರ್ತೆ

ಶ್ರೀನಗರ: ಉಗ್ರರಿಂದ ಪೊಲೀಸ್ ಅಧಿಕಾರಿ ಹತ್ಯೆ

ಶ್ರೀನಗರ: ಇಲ್ಲಿನ ಖಾನ್ಯಾರ್ ಪ್ರದೇಶದಲ್ಲಿ ಉಗ್ರರು ಪೊಲೀಸ್ ಅಧಿಕಾರಿಯೊಬ್ಬರನ್ನು ಭಾನುವಾರ ಗುಂಡಿಟ್ಟು ಹತ್ಯೆಗೈದಿದ್ದಾರೆ.

ಪ್ರೊಬೇಷನರಿ ಸಬ್ ಇನ್‌ಸ್ಪೆಕ್ಟರ್ ಅರ್ಷದ್ ಅಹಮ್ಮದ್ ಎಂಬುವವರನ್ನು ಉಗ್ರರು ಪಿಸ್ತೂಲಿನಿಂದ ಗುಂಡು ಹಾರಿಸಿ ಹತ್ಯೆಗೈದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಖಾನ್ಯಾರ್ ಪೊಲೀಸ್ ಠಾಣೆಯ ಸಮೀಪ ಅರ್ಷದ್ ಅಹಮ್ಮದ್ ಅವರ ಮೇಲೆ ಉಗ್ರರು ಗುಂಡು ಹಾರಿಸಿ ಪರಾರಿಯಾಗುತ್ತಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು.

ಗುಂಡಿನ ದಾಳಿಯಲ್ಲಿ ಗಾಯಗೊಂಡಿದ್ದ ಅರ್ಷದ್ ಅವರನ್ನು ಕೂಡಲೇ ಸೌರಾದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಅವರು ಮೃತಪಟ್ಟಿದ್ದಾರೆ. ಉಗ್ರರ ಪತ್ತೆಗಾಗಿ ಶೋಧಕಾರ್ಯ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನೀರಾಟ ಪಂಜಾಬ್‌ನ ಅಮೃತಸರದಲ್ಲಿ ಭಾನುವಾರ ಸುರಿದ ಭಾರಿ ಮಳೆಯ ನಂತರ ನೀರು ನಿಂತಿದ್ದ ಮೈದಾನದಲ್ಲಿ ಮಕ್ಕಳು ಫುಟ್‌ಬಾಲ್ ಆಡಿ ಸಂಭ್ರಮಿಸಿದರು /ಎಎಫ್‌ಪಿ –ಚಿತ್ರ

ಸ್ವಿಸ್ ಬ್ಯಾಂಕ್: ಭಾರತೀಯರ ಖಾತೆ ವಿವರ ಶೀಘ್ರ ಲಭ್ಯ

ನವದೆಹಲಿ/ಬೆರ್ನ್ (ಪಿಟಿಐ): ಸ್ವಿಸ್ ಬ್ಯಾಂಕ್‌ನಲ್ಲಿ ಖಾತೆಗಳನ್ನು ಹೊಂದಿರುವ ಭಾರತೀಯರ ಕುರಿತು ವಿವರಗಳಿರುವ ಮೂರನೇ ಪಟ್ಟಿ ಈ ತಿಂಗಳಾಂತ್ಯಕ್ಕೆ ಭಾರತದ ಕೈಸೇರಲಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. ‘ಸ್ವಿಟ್ಜರ್ಲೆಂಡ್‌ನಲ್ಲಿ ಭಾರತೀಯರು ಹೊಂದಿರುವ ರಿಯಲ್ ಎಸ್ಟೇಟ್ ಸ್ವತ್ತುಗಳ ಕುರಿತ ಮಾಹಿತಿ ಇದೇ ಮೊದಲ ಬಾರಿಗೆ ಲಭ್ಯವಾಗಲಿದೆ’ ಎಂದೂ ಅಧಿಕಾರಿಗಳು ತಿಳಿಸಿದ್ದಾರೆ.

ಉಭಯ ದೇಶಗಳ ನಡುವಿನ ‘ಸ್ವಯಂಚಾಲಿತ ಮಾಹಿತಿ ವಿನಿಮಯ ಒಪ್ಪಂದ’ದಡಿ ಈ ಮಾಹಿತಿಯನ್ನು ಒದಗಿಸಲಾಗುತ್ತಿದೆ.

‘ಭಾರತೀಯರು ಹೊಂದಿರುವ ಫ್ಲ್ಯಾಟ್‌ಗಳು, ಅಪಾರ್ಟ್‌ಮೆಂಟ್‌ಗಳು ಹಾಗೂ ಮನೆಗಳ ಸಂಪೂರ್ಣ ವಿವರ ಈ ತಿಂಗಳು ಸಿಗಲಿದೆ. ಈ ಸ್ವತ್ತುಗಳಿಂದ ಪಡೆಯುತ್ತಿರುವ ಆದಾಯದ ವಿವರ ಸಿಗಲಿದ್ದು, ಇದರಿಂದ ಈ ಆಸ್ತಿಗಳಿಗೆ ಸಂಬಂಧಿಸಿದ ತೆರಿಗೆ ಬಾಕಿಯನ್ನು ಲೆಕ್ಕ ಹಾಕಲು ಸಾಧ್ಯವಾಗುವುದು’ ಎಂದು ಅಧಿಕಾರಿಗಳು ಹೇಳಿದ್ದಾರೆ.

ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ, ಸ್ವಿಸ್ ಬ್ಯಾಂಕ್ ಖಾತೆಗಳ ವಿವರಗಳಿರುವ ಎರಡನೇ ಪಟ್ಟಿಯನ್ನು ಭಾರತಕ್ಕೆ ನೀಡಲಾಗಿತ್ತು.

ಕಣ್ಣೂರು ವಿ.ವಿ. ನಿರ್ಧಾರಕ್ಕೆ ಸಮರ್ಥನೆ

ಪಠ್ಯಕ್ರಮದಲ್ಲಿ ಸಾವರ್ಕರ್, ಗೋಲ್ವಾಲ್ಕರ್ ಪುಸ್ತಕ: ಶಶಿ ತರೂರ್ ಬೆಂಬಲ

ತಿರುವನಂತಪುರ: ಸ್ನಾತಕೋತ್ತರ ಪದವಿಯ 'ಆಡಳಿತ ಮತ್ತು ರಾಜಕೀಯ' ಕೋರ್ಸ್‌ನಲ್ಲಿ ಆರ್‌ಎಸ್‌ಎಸ್ ನಾಯಕ ಎಂ.ಎಸ್. ಗೋಲ್ವಾಲ್ಕರ್ ಮತ್ತು ಹಿಂದೂ ಮಹಾಸಭಾ ನಾಯಕ ವಿ.ಡಿ. ಸಾವರ್ಕರ್ ಅವರ ಪುಸ್ತಕಗಳನ್ನು ಸೇರಿಸುವ ಕಣ್ಣೂರು ವಿಶ್ವವಿದ್ಯಾಲಯದ ನಿರ್ಧಾರಕ್ಕೆ ಕಾಂಗ್ರೆಸ್ ನಾಯಕ ಶಶಿ ತರೂರ್ ಬೆಂಬಲ ವ್ಯಕ್ತಪಡಿಸಿದ್ದಾರೆ.

‘ಪಕ್ಷ ರಾಜಕೀಯ ಬಲಿ ನೀಡಲು ಬೌದ್ಧಿಕ ಸ್ವಾತಂತ್ರ್ಯ ತ್ಯಾಗ ಮಾಡಬಾರದು’ ಎಂದಿದ್ದಾರೆ.

ಈ ಬಗ್ಗೆ ಫೇಸ್‌ಬುಕ್‌ನಲ್ಲಿ ಬರೆದುಕೊಂಡಿರುವ ಸಂಸದ ಶಶಿ ತರೂರ್ ಅವರು, ‘ನಮ್ಮ ಸಮಾಜದಲ್ಲಿ ಬೌದ್ಧಿಕ ಸ್ವಾತಂತ್ರ್ಯ ಅತ್ಯಂತ ಮಹತ್ವ ಪಡೆದಿದೆ. ಯಾವುದೇ ವ್ಯಕ್ತಿಯ ಸಿದ್ಧಾಂತಗಳ ಬಗ್ಗೆ ತಿಳಿದುಕೊಳ್ಳದೇ ಅವರನ್ನು ಸೋಲಿಸುತ್ತೇವೆ ಎನ್ನುವುದು ಮೂರ್ಖತನದ ನಂಬಿಕೆಯಾಗುತ್ತದೆ’ ಎಂದು ಅವರು ಹೇಳಿದ್ದಾರೆ.

‘ಸಾವರ್ಕರ್ ಮತ್ತು ಗೋಲ್ವಾಲ್ಕರ್ ಅವರ ಹೇಳಿಕೆಗಳನ್ನು ನನ್ನ ಪುಸ್ತಕಗಳಲ್ಲಿಯೂ ಬರೆದಿದ್ದೇನೆ ಮತ್ತು ಅವುಗಳನ್ನು ತಿರಸ್ಕರಿಸಿದ್ದೇನೆ. ಕೆಲವು ಸ್ನೇಹಿತರು ನನ್ನ ನಿಲುವು ಒಪ್ಪಿಕೊಂಡಿಲ್ಲ. ನಾವು ಒಪ್ಪದೇ ಇರುವ ವಿಷಯಗಳು ಸೇರಿದಂತೆ ಪ್ರತಿಯೊಂದು ಅಂಶಗಳನ್ನು ಓದಲು ಮತ್ತು ಅರ್ಥ ಮಾಡಿಕೊಳ್ಳಲು ಶೈಕ್ಷಣಿಕ ಸ್ವಾತಂತ್ರ್ಯವು ಅವಕಾಶ ಕಲ್ಪಿಸುತ್ತದೆ’ ಎಂದಿದ್ದಾರೆ.

‘ಸಾವರ್ಕರ್ ಮತ್ತು ಗೋಲ್ವಾಲ್ಕರ್ ಅವರನ್ನು ಓದದೇ ಇದ್ದರೆ ಯಾವ ಅಂಶಗಳ ಆಧಾರದ ಮೇಲೆ ನಾವು ಅವರನ್ನು ವಿರೋಧಿಸಬೇಕು? ಕಣ್ಣೂರು ವಿಶ್ವವಿದ್ಯಾಲಯವು ಗಾಂಧಿ ಮತ್ತು ಟ್ಯಾಗೋರ್ ಅವರ ವಿಷಯಗಳ ಬಗ್ಗೆಯೂ ಬೋಧಿಸುತ್ತದೆ’ ಎಂದಿದ್ದಾರೆ.

ವಿಶ್ವವಿದ್ಯಾಲಯದ ನಿರ್ಧಾರಕ್ಕೆ ವಿದ್ಯಾರ್ಥಿ ಸಂಘಟನೆಗಳು ವಿರೋಧ ವ್ಯಕ್ತಪಡಿಸಿದ್ದು, ‘ಇದು ವಿಶ್ವವಿದ್ಯಾಲಯದ ಕೇಸರೀಕರಣ’ ಎಂದು ಟೀಕಿಸಿವೆ.

ಸಾವರ್ಕರ್ ಅವರ ‘ಹಿಂದುತ್ವ: ಹೂ ಇಸ್ ಹಿಂದೂ’? ಹಾಗೂ ಗೋಲ್ವಾಲ್ಕರ್ ಅವರ ‘ಬಂಚ್ ಆಫ್ ಥಾಟ್ಸ್’ ಕೃತಿಗಳನ್ನು ಎಂ.ಎ. ತರಗತಿಯ ಮೂರನೇ ಸೆಮಿಸ್ಟರ್‌ನ ‘ಆಡಳಿತ ಮತ್ತು ರಾಜಕೀಯ’ ವಿಷಯದಲ್ಲಿ ಸೇರಿಸಲಾಗಿದೆ ಎಂದು ವಿದ್ಯಾರ್ಥಿ ಸಂಘಟನೆಗಳು ಹೇಳಿವೆ.

ಸಮಿತಿ ನೇಮಕ: ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು, ‘ಸ್ವಾತಂತ್ರ್ಯ ಹೋರಾಟಕ್ಕೆ ಬೆನ್ನು ತೋರಿಸಿದ ನಾಯಕರು ಮತ್ತು ಅವರ ಸಿದ್ಧಾಂತಗಳನ್ನು ನಮ್ಮ ಸರ್ಕಾರ ವೈಭವೀಕರಿಸುವುದಿಲ್ಲ’ ಎಂದಿದ್ದಾರೆ.

‘ಪಠ್ಯಕ್ರಮದ ಬಗ್ಗೆ ಇಬ್ಬರು ಸದಸ್ಯರನ್ನು ಒಳಗೊಂಡ ತಜ್ಞರ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯ ಶಿಫಾರಸುಗಳ ಆಧಾರದ ಮೇಲೆ ಮುಂದಿನ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಗೋಡ್ಸೆ ಪ್ರತಿಮೆ ಸ್ಥಾಪನೆಗೆ ಹಿಂದೂ ಸೇನಾ ನಿರ್ಧಾರ

ಅಹಮದಾಬಾದ್: ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಹಂತಕ ನಾಥೂರಾಮ್ ಗೋಡ್ಸೆಯ ಪ್ರತಿಮೆಯನ್ನು ಸ್ಥಾಪಿಸುವುದಾಗಿ ಹಿಂದೂ ಸೇನಾ ಎಂಬ ಸಂಘಟನೆ ಘೋಷಿಸಿದೆ. ಗೋಡ್ಸೆ ಜನ್ಮದಿನವಾದ ನವೆಂಬರ್ 15ರಂದು ಸೌರಾಷ್ಟ್ರದ ಜಾಮ್‌ನಗರದಲ್ಲಿ ಪ್ರತಿಮೆ ಸ್ಥಾಪಿಸಲು ಉದ್ದೇಶಿಸಲಾಗಿದೆ. ಸಂಘಟನೆಯ ಮುಖ್ಯಸ್ಥ ಪ್ರತೀಕ್ ಭಟ್ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ದ್ವಾರಕಾಧೀಶ್ ದೇವಸ್ಥಾನದಲ್ಲಿ ಬುಧವಾರ ಸಭೆ ನಡೆಯಿತು. ಸಂಘಟನೆಯ ಪದಾಧಿಕಾರಿಗಳಾದ ಮಯೂರ್ ಪಟೇಲ್, ರಾಜ್‌ದೀಪ್ ಗೋಹಿಲ್, ಭವೇಶ್ ತುಮ್ಮರ್, ಯೋಗೇಶ್ ಅಮ್ರೇಲಿಯ, ಧಿರೇನ್ ನಂದಾ ಇತರರ ಸಮ್ಮುಖದಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಈ ಸಂಬಂಧ ಅಗತ್ಯ ವ್ಯವಸ್ಥೆಗಳನ್ನು ಮಾಡಿಕೊಳ್ಳಲು 30 ಸದಸ್ಯರ ಸಮಿತಿಯನ್ನು ರಚಿಸಲು ಸಭೆ ನಿರ್ಧರಿಸಿತು.

‘ನಮ್ಮ ಯುವಕರಿಗೆ ದೇಶಭಕ್ತಿಯ ಸಂದೇಶ ನೀಡಲು ಮಹಾತ್ಮ ಗೋಡ್ಸೆಯ ಪ್ರತಿಮೆಯನ್ನು ಸ್ಥಾಪಿಸಲು ನಾವು ಸಭೆಯಲ್ಲಿ ನಿರ್ಣಯಿಸಿದ್ದೇವೆ. ಇಂದಿನ ಯುವಕರಲ್ಲಿ ಸಾಕಷ್ಟು ಸಾಮರ್ಥ್ಯವಿದೆ. ಆದರೆ ಈ ಶಕ್ತಿಯನ್ನು ರಾಷ್ಟ್ರ ನಿರ್ಮಾಣಕ್ಕೆ ವರ್ಗಾಯಿಸುವ ಮಾರ್ಗದರ್ಶಕ ವ್ಯಕ್ತಿ ಇಲ್ಲ. ಗೋಡ್ಸೆ ಜೀವನದ ಕುರಿತು ಅನೇಕ ನಕಾರಾತ್ಮಕ ಮಾಹಿತಿಗಳು ಪ್ರಚಲಿತದಲ್ಲಿವೆ. ಆದ್ದರಿಂದ ನಾವು ಅವರ ನೆನಪಿನಲ್ಲಿ ಪ್ರತಿಮೆ ನಿರ್ಮಿಸಲು ನಿರ್ಧರಿಸಿದ್ದೇವೆ’ ಎಂದು ಭಟ್ ಅವರು ‘ಪ್ರಜಾವಾಣಿ’ಗೆ ದೂರವಾಣಿಯಲ್ಲಿ ಮಾಹಿತಿ ನೀಡಿದರು.

ಕಳೆದ ವರ್ಷ ಕೋಯಿಕ್ಕೋಡ್ ವಿಮಾನನಿಲ್ದಾಣದಲ್ಲಿ ಅವಘಡ

‘ಅಪಘಾತಕ್ಕೆ ಅಸ್ಪಷ್ಟ ಗೋಚರವೇ ಕಾರಣ’

ನವದೆಹಲಿ: ಮಳೆಯಿಂದಾಗಿ ಅಸ್ಪಷ್ಟ ಗೋಚರ ಹಾಗೂ ವಿಂಡ್‌ಶೀಲ್ಡ್ ವೈಪರ್‌ನ ಕಾರ್ಯಕ್ಷಮತೆ ಕುಂದಿದ್ದರಿಂದ ಪೈಲಟ್‌ಗೆ ತೊಂದರೆಯಾಗಿದೆ. ಕಳೆದ ವರ್ಷ ಕೋಯಿಕ್ಕೋಡ್‌ನ ವಿಮಾನನಿಲ್ದಾಣದಲ್ಲಿ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ ಅಪಘಾತಕ್ಕೀಡಾಗಲು ಈ ಅಂಶಗಳೇ ಕಾರಣವಾಗಿರಬಹುದು ಎಂದು ವಿಶ್ಲೇಷಿಸಲಾಗಿದೆ.

ಏರ್‌ಕ್ರಾಫ್ಟ್ ಆ್ಯಕ್ಸಿಡೆಂಟ್ ಇನ್ವೆಸ್ಟಿಗೇಷನ್ ಬ್ಯುರೊ (ಎಎಐಬಿ) ಸಿದ್ಧಪಡಿಸಿರುವ ವರದಿಯಲ್ಲಿ, ವಿಮಾನ (ಎಎಕ್ಸ್‌ಬಿ 1344) ಅಪಘಾತಕ್ಕೀಡಾಗಲು ಕಾರಣವಾಗಿರಬಹುದಾದ ಹಲವಾರು ಅಂಶಗಳನ್ನು ವಿವರಿಸಲಾಗಿದೆ.

ಮಳೆ ಬೀಳುತ್ತಿದ್ದ ಕಾರಣ, ಲ್ಯಾಂಡಿಂಗ್ ವೇಳೆ ಪೈಲಟ್‌ಗೆ ಸರಿಯಾಗಿ ರನ್‌ವೇ ಕಾಣಲಿಲ್ಲ. ಲ್ಯಾಂಡಿಂಗ್‌ಗೆ ಅಗತ್ಯವಿರುವ ಅಂತರ ಹಾಗೂ ಇತರ ಅಂಶಗಳ ಕುರಿತು ಇದು ತಪ್ಪುಗ್ರಹಿಕೆಗೆ ಕಾರಣವಾಯಿತು.

ಅಲ್ಲದೇ, ಪ್ರಮಾಣಿತ ಕಾರ್ಯಾಚರಣೆ ವಿಧಾನದಂತೆ (ಎಸ್‌ಒಪಿ) ವಿಮಾನ ಹಾರಾಟದ ಮೇಲೆ ನಿಗಾ ಇಡುವುದು, ಸೂಚನೆಗಳನ್ನು ನೀಡುವುದು ಹಾಗೂ ಕ್ರಮ ಕೈಗೊಳ್ಳುವುದು ಸಾಧ್ಯವಾಗಲಿಲ್ಲ. ಈ ಎಲ್ಲ ಅಂಶಗಳು ಅವಘಡಕ್ಕೆ ಕಾರಣವಾದವು ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

ಎಸ್‌ಒಪಿಯಂತೆ ಪೈಲಟ್ ಕಾರ್ಯಾಚರಣೆ ಮಾಡದೇ ಇದ್ದುದು ಸಹ ಅಪಘಾತಕ್ಕೆ ಕಾರಣ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಏರ್ ಇಂಡಿಯಾ ಎಕ್ಸ್‌ಪ್ರೆಸ್‌ನ ಈ ನತದೃಷ್ಟ ವಿಮಾನ, ಕಳೆದ ವರ್ಷ ಆಗಸ್ಟ್ 7ರಂದು ಲ್ಯಾಂಡಿಂಗ್ ಆಗುವ ವೇಳೆ, ರನ್‌ವೇಯಿಂದ ಮುಂದಕ್ಕೆ ಚಲಿಸಿ, 110 ಅಡಿ ಆಳದಲ್ಲಿ ಬಿದ್ದು, ಮೂರು ಹೋಳಾಗಿತ್ತು.

ಈ ಅಪಘಾತದಲ್ಲಿ, ಇಬ್ಬರು ಪೈಲಟ್ ಹಾಗೂ ಮೂರು ಶಿಶುಗಳು ಸೇರಿ 19 ಪ್ರಯಾಣಿಕರು ಮೃತಪಟ್ಟಿದ್ದರು. 190 ಜನ ಪ್ರಯಾಣಿಕರಿದ್ದ ಈ ವಿಮಾನ ದುಬೈನಿಂದ ಹೊರಟಿತ್ತು.



ಕೋಯಿಕ್ಕೋಡ್‌ನ ಅಂತರರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ರನ್‌ವೇ ದಾಟಿ, ಪ್ರಪಾತದಲ್ಲಿ ಬಿದ್ದು ಹೋಳಾಗಿರುವುದು (ಸಂಗ್ರಹ ಚಿತ್ರ) –ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸುದ್ದಿ

ಪೆಗಾಸಸ್: ಸ್ವತಂತ್ರ ತನಿಖೆ ಅರ್ಜಿಗಳ ವಿಚಾರಣೆ

ನವದೆಹಲಿ (ಪಿಟಿಐ): ಪೆಗಾಸಸ್ ಕುತಂತ್ರಾಂಶ ಬಳಸಿ, ಗೂಢಚಾರಿಕೆ ನಡೆಸಿದ ಆರೋಪಗಳ ಕುರಿತು ಸ್ವತಂತ್ರ ತನಿಖೆ ನಡೆಸುವಂತೆ ಆಗ್ರಹಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂಕೋರ್ಟ್ ಸೋಮವಾರ (ಸೆ. 13) ನಡೆಸಲಿದೆ.

ಮುಖ್ಯನ್ಯಾಯಮೂರ್ತಿ ಎನ್. ವಿ.ರಮಣ ನೇತೃತ್ವದ ಮೂರು ಸದಸ್ಯರನ್ನು ಒಳಗೊಂಡ ನ್ಯಾಯಪೀಠ ವಿಚಾರಣೆ ನಡೆಸುವುದು.

ಅರ್ಜಿಗಳಿಗೆ ಪ್ರತಿಕ್ರಿಯೆ ಸಲ್ಲಿಸಲು ಮತ್ತಷ್ಟು ಕಾಲಾವಕಾಶ ಅಗತ್ಯ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ತಿಳಿಸಿದ್ದರು. ಈ ವಾದವನ್ನು ಪುರಸ್ಕರಿಸಿದ್ದ ನ್ಯಾಯಪೀಠ, ಪ್ರತಿಕ್ರಿಯೆ ಸಲ್ಲಿಸಲು ಅವಕಾಶ ನೀಡಿ ಸೆ. 7ರಂದು ಆದೇಶಿಸಿತ್ತು.

ತಮಿಳುನಾಡು ಜೊತೆ ಇಂಗ್ಲಿಷ್‌ನಲ್ಲೇ ಸಂವಹನ: ಆದೇಶ

ಚೆನ್ನೈ: ತಮಿಳುನಾಡಿನ ಜೊತೆ ಸಂವಹನ ನಡೆಸುವ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಇಂಗ್ಲಿಷ್ ಮಾತ್ರ ಬಳಸಬೇಕು ಎಂದು ಮದ್ರಾಸ್ ಹೈಕೋರ್ಟ್‌ನ ಮದುರೈ ಪೀಠ ಆದೇಶಿಸಿದೆ.

‘ದಕ್ಷಿಣ ರಾಜ್ಯಗಳೊಂದಿಗೆ ಸಂವಹನ ನಡೆಸಲು ಕೇಂದ್ರ ಸರ್ಕಾರ ಇಂಗ್ಲಿಷ್ ಭಾಷೆಯನ್ನೇ ಬಳಸಬೇಕು. ಹಿಂದಿಯನ್ನು ಬಳಸಕೂಡದು’ ಎಂದು ಹೈಕೋರ್ಟ್‌ನ ಪೀಠವು ಆಗಸ್ಟ್‌ನಲ್ಲಿ ಆದೇಶ ಹೊರಡಿಸಿದೆ. ಈ ಆದೇಶದ ಪ್ರತಿಯನ್ನು ಇತ್ತೀಚೆಗಷ್ಟೆ ಬಹಿರಂಗಪಡಿಸಲಾಗಿದೆ.

ಈ ಸಂಬಂಧ, ಮದುರೈ ಸಂಸದ ಹಾಗೂ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸಾಹಿತಿ ಸು.ವೆಂಕಟೇಶನ್ ಅವರು ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ಪೀಠ ಈ ಆದೇಶ ಹೊರಡಿಸಿದೆ.

ಗಾರ್ಮೆಂಟ್ಸ್ ಕಾರ್ಮಿಕರ ಬದುಕು ಮೂರಾಬಟ್ಟೆ

ಒಂದನೇ ಪುಟದಿಂದ

ಮ್ಯಾಕ್ಸಿಕ್ಯಾಬ್ ಚಾಲಕನಾಗಿ ವೃತ್ತಿ ಆರಂಭಿಸಿ ಕೆಲ ವರ್ಷಗಳಲ್ಲಿ ಅದೇ ವಾಹನ ಖರೀದಿಸಿ ಹೊಸ ಬದುಕು ಆರಂಭಿಸಿದ್ದ ಹೊಳೆನರಸೀಪುರದ ಚಂದ್ರಶೇಖರ್ ಎಂಬುವರು ಬೆಂಗಳೂರಿನ ಗಾರ್ಮೆಂಟ್ಸ್ ಕಾರ್ಖಾನೆಯತ್ತ ಮುಖ ಮಾಡಿದ್ದು ಒಂದು ಕತೆಯಾದರೆ, ಕೋವಿಡ್ ಲಾಕ್‌ಡೌನ್ ಬಳಿಕ ಎದುರಿಸಿರುವ ಸಂಕಷ್ಟ ಇನ್ನೊಂದು ದುರಂತಮಯ ಕತೆ.

‘ವಾಹನ ಮಾಲೀಕನಾದ ಕೆಲವೇ ದಿನಗಳಲ್ಲಿ ಅಪಘಾತಕ್ಕೀಡಾಗಿ ಲಕ್ಷಾಂತರ ರೂಪಾಯಿ ಸಾಲ ತಲೆ ಮೇಲೆ ಬಂತು. ಸಾಲಗಾರರ ಕಾಟ ತಾಳಲಾರದೆ ರಾತ್ರೋರಾತ್ರಿ ಹೆಂಡತಿ–ಮಕ್ಕಳೊಂದಿಗೆ ಊರುಬಿಟ್ಟು ಬೆಂಗಳೂರಿಗೆ ಬಂದಿದ್ದೆ. ಗಂಡ–ಹೆಂಡತಿ ಇಬ್ಬರೂ ಗಾರ್ಮೆಂಟ್ಸ್ ಕಾರ್ಖಾನೆಗೆ ಸೇರಿಕೊಂಡು ಮೂರ್ನಾಲ್ಕು ವರ್ಷಗಳಲ್ಲಿ ಸಾಲ ತೀರಿಸಿದೆವು. ಜಿಂದಾಲ್ ಕಂಪನಿ ತೆರೆದಿರುವ ಶಾಲೆಯಲ್ಲಿ ಮಕ್ಕಳು ಕಲಿಯುತ್ತಿದ್ದರು. ಎಲ್ಲವೂ ಸರಿಯಾಯಿತು ಎನ್ನುವ ಸಂತಸ ಹೆಚ್ಚು ಕಾಲ ಉಳಿಯಲಿಲ್ಲ. ಕೋವಿಡ್ ಮೊದಲ ಅಲೆಯ ವೇಳೆ ಮನೆ ಖಾಲಿ ಮಾಡಿ ಊರು ಸೇರಿದೆವು. ಅಲ್ಲಿಗೆ 10 ವರ್ಷದ ಸುಂದರ ಬದುಕಿನ ಅಧ್ಯಾಯ ಮುಗಿಯಿತು’ ಎಂದು ರುಕ್ಮಿಣಿನಗರದಲ್ಲಿ ಮನೆ ಮಾಡಿಕೊಂಡಿದ್ದ ಹೊಳೆನಸೀಪುರದ ಚಂದ್ರಶೇಖರ್ ತಮ್ಮ ಬವಣೆಯನ್ನು ವಿವರಿಸಿದರು.

‘ಕೈಯಲ್ಲಿದ್ದ ಬಿಡಿಗಾಸು ಖಾಲಿ ಆಯಿತು. ಬೆಂಗಳೂರಿಗೆ ಮತ್ತೆ ಬಂದು ಬಾಡಿಗೆ ಮನೆ ಹಿಡಿದು ಮತ್ತೆ ಜೀವನ ಆರಂಭಿಸಲು ಕನಿಷ್ಠ ₹1 ಲಕ್ಷವಾದರೂ ಬೇಕು. ಆದ್ದರಿಂದ ಲಾಕ್‌ಡೌನ್ ತೆರವಾದರೂ ವಾಪಸ್ ಬರಲು ಸಾಧ್ಯವಾಗಲಿಲ್ಲ. ದುಡಿಮೆಗೆ ಬೇರೆ ದಾರಿ ಇಲ್ಲದೆ ಮನೆಯಲ್ಲೇ ಕದ್ದುಮುಚ್ಚಿ ಮದ್ಯ ಮಾರಾಟ ಆರಂಭಿಸಿದೆ. ಪೊಲೀಸರು ಕಣ್ಣಿಗೆ ಬಿದ್ದು ಜೈಲಿಗೆ ಹೋಗಿ ಬಂದೆ. ಇದೇ ಆಘಾತಕ್ಕೋ ಏನೋ ಹೃದಯಾಘಾತ ಆಗಿ ಮೈಸೂರಿನ ಜಯದೇವ ಆಸ್ಪತ್ರೆ ಸೇರಿದೆ. ಅದರಿಂದ ಚೇತರಿಸಿಕೊಂಡ ಕೆಲವೇ ದಿನಗಳಲ್ಲಿ ಬೈಕ್ ಅಪಘಾತಕ್ಕೀಡಾಗಿ ನಾನು ಸೊಂಟ ಮುರಿದುಕೊಂಡೆ, ಹೆಂಡತಿಯ ಬೆನ್ನು ಮೂಳೆ ಮುರಿಯಿತು’ ಎಂದು ಅವರು ಹೇಳುವಾಗ ಕಣ್ಣಾಲಿ ತುಂಬಿಕೊಂಡರು.

‘ಹಾಸಿಗೆಯಿಂದ ಮೇಲೇಳಲು ಇನ್ನೂ ಮೂರ್ನಾಲ್ಕು ತಿಂಗಳು ಬೇಕು. ಪ್ರೌಢಶಾಲೆ ಹಂತದಲ್ಲಿರುವ ಮಕ್ಕಳೇ ಈಗ ನಮಗೆ ತಂದೆ–ತಾಯಿಯಂತಾಗಿದ್ದಾರೆ. ಇಬ್ಬರೂ ಕೃಷಿ ಕೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಊಟಕ್ಕೆ ನ್ಯಾಯಬೆಲೆ ಅಂಗಡಿಯಲ್ಲಿ ಸಿಗುವ ದವಸವನ್ನೇ ನೆಚ್ಚಿಕೊಂಡಿದ್ದೇವೆ. ವೈದ್ಯಕೀಯ ವೆಚ್ಚಕ್ಕೆ ಮಕ್ಕಳ ದುಡಿಮೆಯೇ ಗತಿಯಾಗಿದೆ’ ಎಂದು ಹೇಳುವಾಗ ಚಂದ್ರಶೇಖರ್ ಗದ್ಗದಿತರಾದರು.

ರಾಜಗೋಪಾಲನಗರದ ಸುಜಾತಾ ಅವರದು ಇನ್ನೊಂದು ಕತೆ. ‘ಮನೆ ಬಿಟ್ಟು ಬಂದು ಮದುವೆ ಮಾಡಿಕೊಂಡು ಇಬ್ಬರೂ ಗಾರ್ಮೆಂಟ್ಸ್ ಸೇರಿ ಬದುಕು ಕಟ್ಟಿಕೊಂಡೆವು. ಕೋವಿಡ್ ಲಾಕ್‌ಡೌನ್ ವೇಳೆ ದುಡಿಮೆ ಇಲ್ಲದಂತಾಯಿತು. ಮನೆಯವರ ವಿರೋಧ ಕಟ್ಟಿಕೊಂಡು ಬೆಂಗಳೂರಿಗೆ ಬಂದಿದ್ದರಿಂದ ಮತ್ತೆ ಊರಿಗೆ ಹೋಗಲು ದಾರಿ ಇಲ್ಲವಾಗಿತ್ತು. ದಾನಿಗಳು ಕೊಡುತ್ತಿದ್ದ ಆಹಾರದ ಪೊಟ್ಟಣವೇ ಮೂವರ ಜೀವಕ್ಕೂ ಆಧಾರವಾಯಿತು. ಆ ಸಂಕಷ್ಟದ ದಿನಗಳಲ್ಲಿ ಜೀವನೋತ್ಸಾಹವೇ ಕಮರಿ ಹೋಗಿತ್ತು’ ಎಂದು ಕಣ್ಣೀರಿಟ್ಟರು.

ಹೀಗೆ ಕೋವಿಡ್ ಅಬ್ಬರದಲ್ಲಿ ಬದುಕು ಕಳೆದುಕೊಂಡ ಒಬ್ಬೊಬ್ಬ ಗಾರ್ಮೆಂಟ್ಸ್ ಕಾರ್ಮಿಕರ ಒಂದೊಂದು ಕತೆಗಳೂ ಕರುಣಾಜನಕವಾಗಿವೆ. ಗಾರ್ಮೆಂಟ್ಸ್ ಉದ್ಯಮ ಈಗ ಚೇತರಿಕೆ ಹಾದಿಯಲ್ಲಿದೆ. ದುಡಿಯುವ ಕೈಗಳಿಗೆ ಕಾರ್ಖಾನೆಗಳಲ್ಲಿ ಈಗ ಕೈತುಂಬ ಕೆಲಸವಿದೆ. ಸಾಕಷ್ಟು ಕಾರ್ಮಿಕರು ಇನ್ನೂ ವಾಪಸ್ ಆಗದಿರುವುದರಿಂದ ಉದ್ಯಮ ಕಾರ್ಮಿಕರ ಕೊರತೆ ಎದುರಿಸುತ್ತಿದೆ. ಬೆಂಗಳೂರಿಗೆ ಮಾತ್ರ ಸೀಮಿತವಾಗಿದ್ದ ಹೊರ ರಾಜ್ಯಗಳ ವಲಸೆ ಕಾರ್ಮಿಕರು ಈಗ ಮೈಸೂರು, ರಾಮನಗರ, ಹಾಸನ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲೂ ಕೆಲಸ ಪಡೆಯುತ್ತಿದ್ದಾರೆ. ಮೂರನೇ ಅಲೆಯ ಭಯದಲ್ಲಿರುವ ಕಾರ್ಮಿಕರಲ್ಲಿ ಎರಡು ಲಾಕ್‌ಡೌನ್ ಅವಧಿಯ ನೋವು ಮಾಸದ ಗಾಯವಾಗಿ ಉಳಿದು ಹೋಗಿದೆ.

ಅಂಕಿ-ಅಂಶಗಳು

950 ರಾಜ್ಯದಲ್ಲಿರುವ ಗಾರ್ಮೆಂಟ್ಸ್ ಕಾರ್ಖಾನೆಗಳ ಸಂಖ್ಯೆ	776 ಬೆಂಗಳೂರಿನಲ್ಲಿ ಇರುವ ಗಾರ್ಮೆಂಟ್ಸ್ ಕಾರ್ಖಾನೆಗಳು	776 ಬೆಂಗಳೂರಿನಲ್ಲಿ ಇರುವ ಗಾರ್ಮೆಂಟ್ಸ್ ಕಾರ್ಖಾನೆಗಳು
4 ಲಕ್ಷ ರಾಜ್ಯದ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಇರುವ ಒಟ್ಟು ಕಾರ್ಮಿಕರ ಸಂಖ್ಯೆ	3 ಲಕ್ಷ ಬೆಂಗಳೂರಿನ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿರುವ ನೌಕರರು	50 ಸಾವಿರ ಲಾಕ್‌ಡೌನ್ ವೇಳೆ ಊರಿಗೆ ಹೋಗಿ ವಾಪಸ್ ಬಾರದ ಕಾರ್ಮಿಕರು

> **ಲಾಕ್‌ಡೌನ್ ವೇಳೆ ಊರಿಗೆ ಹೋಗಿದ್ದವರಲ್ಲಿ ಕೆಲವರು ಇನ್ನೂ ವಾಪಸ್ ಬಂದಿಲ್ಲ. ಕಾರ್ಮಿಕರ ಕೊರತೆ ಇದೆ.**
> **ಗುರುಲಿಂಗಪ್ಪ (ರಾಜು),** ಗಾರ್ಮೆಂಟ್ಸ್ ಕಾರ್ಖಾನೆ ಮಾಲೀಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ

> **ಮೊದಲನೇ ಲಾಕ್‌ಡೌನ್ ವೇಳೆ ಮನೆಯಲ್ಲಿದ್ದ ಕಾರ್ಮಿಕರಿಗೆ ಕಾರ್ಖಾನೆಗಳು ವೇತನ ಪಾವತಿಸಿದವು. ಎರಡನೇ ಅವಧಿಯಲ್ಲಿ ಯಾವುದೇ ಬಾಕಿ ವೇತನ ಪಾವತಿಸಲಿಲ್ಲ.**
> **ಕೆ.ಆರ್.ಜಯರಾಂ,** ಗಾರ್ಮೆಂಟ್ ಆ್ಯಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್‌ನ ಸಲಹೆಗಾರ

ಸಾಲದ ಸುಳಿಯಲ್ಲಿ ಬಿಡಿಭಾಗ ಪೂರೈಕೆದಾರರು

ಗಾರ್ಮೆಂಟ್ಸ್ ಉದ್ಯಮ ಈಗ ಚೇತರಿಕೆ ಹಾದಿಗೆ ಮರಳಿದ್ದರೂ ಕೋವಿಡ್ ಎರಡೂ ಅಲೆಗಳು ಗಾರ್ಮೆಂಟ್ಸ್ ಕಾರ್ಖಾನೆಗಳಿಗೆ ಬಿಡಿಭಾಗ ಪೂರೈಸುವವರನ್ನು ಸಾಲದ ಸುಳಿಯಲ್ಲಿ ಸಿಲುಕಿಸಿವೆ.

ಬಿಡಿಭಾಗ ಸರಬರಾಜು ವಹಿವಾಟು ನಡೆಯುವುದು ಸಂಪೂರ್ಣ ಸಾಲದ ವ್ಯವಹಾರದ ಮೂಲಕ. ಗಾರ್ಮೆಂಟ್ಸ್ ಉದ್ದಿಮೆ ಚೆನ್ನಾಗಿ ನಡೆಯುತ್ತಿದ್ದಾಗ ಈ ವಹಿವಾಟು ಕೂಡ ಸರಾಗವಾಗಿಯೇ ನಡೆಯುತ್ತಿತ್ತು. ಲಾಕ್‌ಡೌನ್ ನಂತರ ಎಲ್ಲವೂ ತಲೆಕೆಳಗಾಗಿದೆ.

‘ನಾನು ಸುಮಾರು 150 ಗಾರ್ಮೆಂಟ್ಸ್ ಕಾರ್ಖಾನೆಗಳಿಗೆ ಬಿಡಿಭಾಗ ಪೂರೈಸುತ್ತಿದ್ದೆ. ಇವುಗಳಲ್ಲಿ 40 ರಿಂದ 50 ಗಾರ್ಮೆಂಟ್ಸ್ ಕಾರ್ಖಾನೆಗಳು ಇನ್ನೂ ಬಾಗಿಲು ತೆರೆದಿಲ್ಲ. ಒಬ್ಬೊಬ್ಬರಿಂದಲೂ ₹50 ಸಾವಿರದಿಂದ ₹3 ಲಕ್ಷ ತನಕ ಸಾಲ ಬಾಕಿ ಉಳಿದುಕೊಂಡಿದೆ. ಕನಿಷ್ಠ ₹40 ಲಕ್ಷ ಬಾಕಿ ಇದೆ. ವಸೂಲಿ ಮಾಡುವುದು ಹೇಗೆ ಎಂದೇ ಗೊತ್ತಾಗುತ್ತಿಲ್ಲ’ ಎಂದು ಗಾರ್ಮೆಂಟ್ಸ್ ಕಾರ್ಖಾನೆಗಳಿಗೆ ಬಿಡಿಭಾಗ ಪೂರೈಸುವ ರಮೇಶ್ ಪರಿಸ್ಥಿತಿ ವಿವರಿಸಿದರು.

ಮೊದಲ ಲಾಕ್‌ಡೌನ್ ವೇಳೆಯಲ್ಲೇ ಯಂತ್ರಗಳನ್ನು ಮಳಿಗೆಯಲ್ಲೇ ಬಿಟ್ಟು ಹೋದವರು ವಾಪಸ್ ಬರಲಿಲ್ಲ. ಪೊಲೀಸರ ಸಮ್ಮುಖದಲ್ಲೇ ಬಾಗಿಲು ತೆಗೆಸಿ ಕಟ್ಟಡಗಳ ಮಾಲೀಕರು ಹೊಲಿಗೆ ಯಂತ್ರಗಳನ್ನು ಮಾರಾಟ ಮಾಡಿ ಬಾಕಿ ಬಾಡಿಗೆಗೆ ಜಮಾ ಮಾಡಿಕೊಂಡಿದ್ದಾರೆ. ಈಗ ಗಾರ್ಮೆಂಟ್ಸ್ ಕಾರ್ಖಾನೆಯೇ ಇಲ್ಲವಾಗಿದ್ದು, ಯಾರ ಬಳಿ ಬಾಕಿ ವಸೂಲಿ ಮಾಡುವುದು ಎಂಬುದೇ ತಿಳಿಯುತ್ತಿಲ್ಲ ಎಂದರು.

‘ಲಾಕ್‌ಡೌನ್ ತೆರವಾದ ಬಳಿಕ ಆರಂಭವಾಗಿರುವ ಕಾರ್ಖಾನೆಗಳಿಗೆ ಬಿಡಿಭಾಗ ಪೂರೈಕೆ ಮಾಡುತ್ತಿದ್ದೇವೆ. ಆದರೆ, ಈ ಹಿಂದಿನಂತೆ ಯಾರಿಗೂ ಸಾಲ ನೀಡುತ್ತಿಲ್ಲ. ಸಾಲ ನೀಡುವ ಸ್ಥಿತಿಯಲ್ಲೂ ನಾವಿಲ್ಲ. ಆಗಿರುವ ನಷ್ಟ ಪರಿಹಾರಿಸಿಕೊಳ್ಳಲು ಯಾವುದೇ ದಾರಿ ಕಾಣಿಸುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಜಾವಾಣಿ
ಪ್ರಶ್ನೆಯ ಗುಟ್ಟು ಮಾಡಿರಿ ರಟ್ಟು
ಗಲಿಬಿಲಿ ಪ್ರಶ್ನೆ ನಮ್ಮದು, ಚುರುಕು ಉತ್ತರ ನಿಮ್ಮದು
ಗಡಿಬಿಡಿ ಆಗದೆ ಸರಿಯಾದ ಉತ್ತರವನ್ನು www.bit.ly/pvgutturattuಗೆ ಇಂದು ಸಂಜೆ 6ರ ಒಳಗೆ ಕಳುಹಿಸಿ ಆಕರ್ಷಕ ಬಹುಮಾನ ಗೆಲ್ಲಿ!
ಪ್ರಶ್ನೆ 1 ಕನ್ನಡ ಗೊತ್ತುಂಟಾ? ಹಾಗಾದರೆ ಕನ್ನಡದಲ್ಲಿ "ಕ" ಆದ ನಂತರ ಯಾವ ಅಕ್ಷರ ಬರುತ್ತದೆ?
ಪ್ರಶ್ನೆ 2 ಬಾ ಅಂದರೆ ಬರೋಲ್ಲ, ಹೋಗು ಅಂದರೆ ಹೋಗಲ್ಲ... ನಾನ್ಯಾರು?
ಬಂಪರ್ ಬಹುಮಾನ 1 ವಾಟರ್ ಪ್ಯೂರಿಫೈಯರ್
3D ಪಝಲ್ 3 ಸ್ಪೆಶಲ್ ಬಹುಮಾನ
ಗಿಫ್ಟ್ ವೌಚರ್ ₹500 ಪ್ರತಿ ದಿನ 10 ಅದೃಷ್ಟಶಾಲಿಗಳಿಗೆ
*ಷರತ್ತುಗಳು ಅನ್ವಯ
ಹಿಂದಿನ ಪ್ರಶ್ನೆಗೆ ಉತ್ತರ: 1) ಅ–ದ–ನ್ಮ 2) ನೆನ್ನೆ– ಇಂದು–ನಾಳೆ

ದೇಶ ತೊರೆಯುತ್ತಿರುವ ಅಫ್ಗನ್ ಕಲಾವಿದರು

ಪೇಶಾವರ (ಪಿಟಿಐ): ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಆಡಳಿತ ಶುರುವಾದ ನಂತರ ಸಂಗೀತಗಾರರಿಗೆ, ಸಂಗೀತ ಸಂಯೋಜಕರು ಹಾಗೂ ಕಲಾವಿದರಿಗೆ ಅಸ್ತಿತ್ವದ ಚಿಂತೆಯೊಂದಿಗೆ ಜೀವದ ಆತಂಕವೂ ಕಾಡುತ್ತಿದೆ.

ಜೀವ ಬೆದರಿಕೆ ಜೊತೆಜೊತೆಗೆ ಸಂಗೀತಕ್ಕೆ ಒದಗಬಹುದಾದ ವಿಪತ್ತನ್ನು ನೆನೆದು ಅವರು ದೇಶ ತೊರೆಯುತ್ತಿದ್ದಾರೆ. ತಮ್ಮ ಜೀವ ಹಾಗೂ ತಮ್ಮ ಜೀವದ ಜೀವವೇ ಆದ ಸಂಗೀತವನ್ನು ಉಳಿಸಿಕೊಳ್ಳುವ ದಾರಿ ಕಾಣದೇ ಪಲಾಯನ ಮಾಡುತ್ತಿದ್ದಾರೆ.

ನೂರಾರು ಸಂಗೀತ ಕಾರ್ಯಕ್ರಮಗಳು ರದ್ದಾಗಿದ್ದು, ಪಾಕಿಸ್ತಾನದ ಸಂಗೀತ ಪೋಷಕರು ಕಾಬೂಲ್‌ನಲ್ಲಿರುವ ತಮ್ಮ ಕಚೇರಿಗಳನ್ನು ಮುಚ್ಚುತ್ತಿದ್ದಾರೆ. ಬಹುತೇಕ ಕಾರ್ಯಕ್ರಮಗಳಿಗೆ ಮುಂಗಡವಾಗಿ ಹಣ ನೀಡಿದ್ದ ಅವರು ದಿವಾಳಿಯಾಗಿದ್ದಾರೆ.

ಅಫ್ಗಾನಿಸ್ತಾನವು ತಾಲಿಬಾನ್ ವಶಕ್ಕೆ ಬಂದಾಗಿನಿಂದ ಸಂಗೀತ ಕಲಾವಿದರು ತಮ್ಮ ವಾದ್ಯಪರಿಕರಗಳನ್ನು ಮನೆಗೆ ಒಯ್ದು ಇಟ್ಟಿದ್ದಾರೆ. ಹಲವು ಕಲಾವಿದರು ಹಾಗೂ ಹಾಡುಗಾರರು ಜೀವ ಉಳಿಸಿಕೊಳ್ಳುವುದಕ್ಕಾಗಿ ಪಾಕಿಸ್ತಾನಕ್ಕೆ ಬರುತ್ತಿದ್ದಾರೆ. ಈ ವೃತ್ತಿಯನ್ನು ಬಿಡದೇ ಹೋದರೆ ತಮಗೆ ಉಳಿಗಾಲವಿಲ್ಲ ಎನ್ನುತ್ತಾರೆ ಅಫ್ಗಾನಿಸ್ತಾನದ ಗಾಯಕ ಪಾಸುನ್ ಮುನಾವರ್. ಇನ್ನೊಬ್ಬ ಹಾಡುಗಾರ ಅಜ್ಮಲ್, ತಮ್ಮ ಪೋಷಾಕು ಬದಲಿಸಿ ಪಾಕಿಸ್ತಾನಕ್ಕೆ ತೆರಳಿದ್ದಾರೆ.

ಅಫ್ಗಾನಿಸ್ತಾನದವರು ಸಂಗೀತಪ್ರಿಯರು. ಅಲ್ಲಿ ಸಂಗೀತ ಕಾರ್ಯಕ್ರಮ ನೀಡಿದಾಗಲೆಲ್ಲ ತಮಗೆ ತುಂಬಾ ಗೌರವ ಸಿಕ್ಕಿದೆ ಎನ್ನುತ್ತಾರೆ ಪಾಕಿಸ್ತಾನದ ಕಲಾವಿದ ಷಾಜಹಾನ್. ಆತಂಕದಿಂದ ಇಲ್ಲಿಗೆ ಬಂದಿರುವ ಅಲ್ಲಿಯ ಕಲಾವಿದರನ್ನು ಸ್ವಾಗತಿಸುವುದಾಗಿಯೂ ಅವರು ಹೇಳಿದರು.

ಸಂಗೀತ ಕಾರ್ಯಕ್ರಮಗಳ ಮೇಲಿನ ನಿಷೇಧದಿಂದಾಗಿ, ಆ ದೇಶದ ಕಲಾವಿದರಿಗೆ ಮಾತ್ರವಲ್ಲದೇ ಪಾಕಿಸ್ತಾನದ ಕಲಾವಿದರಿಗೂ ತೊಂದರೆಯಾಗಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಶ್ರೀಮತಿ ಲಕ್ಷ್ಮಮ್ಮ
ನಿಧನ: 23–01–1973

ಶ್ರೀ ಪಾಪಣ್ಣ ರೆಡ್ಡಿ
ನಿಧನ: 08–07–1988

ಶ್ರೀ ಬಿ.ಪಿ. ಗೋಪಾಲರೆಡ್ಡಿ
ನಿಧನ: 20–09–2015

ನೀವುಗಳು ನಮ್ಮನ್ನು ಅಗಲಿದರೂ ನಿಮ್ಮ ಪ್ರೀತಿ, ತಾಳ್ಮೆ, ತ್ಯಾಗ, ಆದರ್ಶಮಯ ಜೀವನ ನಿಮ್ಮ ಮಾರ್ಗದರ್ಶನ ನಮ್ಮ ಬದುಕಿಗೆ ದಾರಿ ದೀಪವಾಗಿದೆ.

ಪ್ರತಿದಿನವೂ, ಪ್ರತಿಕ್ಷಣವೂ ನಿಮ್ಮಗಳ ನೆನಪಿನಲ್ಲಿರುವ
ಶ್ರೀಮತಿ ಶಾರದಮ್ಮ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಕುಟುಂಬದವರು.

ಭದ್ರತಾ ಪಡೆ, ಸಶಸ್ತ್ರ ಪಡೆಗಳಿಗೆ ಉನ್ನತ ಮಟ್ಟದ ತರಬೇತಿ

ತಾಲಿಬಾನ್ ಎದುರಿಸಲು ಹೊಸ ತಂತ್ರ

ನವದೆಹಲಿ (ಪಿಟಿಐ): ಭಯೋತ್ಪಾದನೆ ನಿಗ್ರಹ ಕಾರ್ಯಕ್ಕೆ ನಿಯೋಜನೆಗೊಂಡಿರುವ ಗಡಿ ಭದ್ರತಾ ಪಡೆಗಳು ಮತ್ತು ಸಶಸ್ತ್ರ ಪಡೆಗಳಿಗೆ ತಾಲಿಬಾನ್ ಮತ್ತು ಅದರ ಕಾರ್ಯಾಚರಣೆ ವಿಧಾನದ ಬಗ್ಗೆ ತರಬೇತಿ ನೀಡುವಂತೆ ಕೇಂದ್ರೀಯ ಭದ್ರತಾ ವ್ಯವಸ್ಥೆ ಸೂಚಿಸಿದೆ. ಅಫ್ಗಾನಿಸ್ತಾನವನ್ನು ತಾಲಿಬಾನ್ ಕೈವಶ ಮಾಡಿಕೊಂಡ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಗೆಲುವು ಭಾರತದ ಭದ್ರತೆ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಆದ್ದರಿಂದ ಭದ್ರತಾ ಪಡೆಗಳು ಮತ್ತು ಗುಪ್ತಚರ ಪಡೆಗಳಿಗೆ ತಂತ್ರ, ಕೌಶಲ ಮತ್ತು ಹೋರಾಟದ ಮಾದರಿಗಳನ್ನು ನವೀಕರಿಸುವಂತೆ ಹೇಳಲಾಗಿದೆ. ಮಧ್ಯ ಮತ್ತು ದಕ್ಷಿಣ ಏಷ್ಯಾದಲ್ಲಿ ಏರ್ಪಟ್ಟಿರುವ ಭೌಗೋಳಿಕ–ರಾಜಕೀಯ ಪರಿಸ್ಥಿತಿ ದೇಶದ ಗಡಿ ಮತ್ತು ಒಳನಾಡಿನಲ್ಲಿ ಭಾರಿ ಭದ್ರತಾ ಸಮಸ್ಯೆ ತಂದೊಡ್ಡುವ ಆತಂಕವಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದೇಶದ ಪಶ್ಚಿಮದಲ್ಲಿ ಪಾಕಿಸ್ತಾನದ ಗಡಿಯಿಂದ ಒಳನುಸುಳುವ ಉಗ್ರರು ಮತ್ತು ಪೂರ್ವದ ಗಡಿಯಿಂದ ದೇಶದ ಒಳಗೆ ನುಸುಳುವ ವಿದೇಶಿ ಉಗ್ರರ ಸಂಖ್ಯೆಯಲ್ಲಿ ಹೆಚ್ಚಳವಾಗಬಹುದು ಎಂದು ಈಗಾಗಲೇ ಭದ್ರತಾ ಪಡೆಗಳಿಗೆ ಸೂಚನೆ ನೀಡಲಾಗಿದೆ. ಅಫ್ಗಾನಿಸ್ತಾನದ ಬೆಳವಣಿಗೆಗಳಿಂದ ನೆರೆಯ ದೇಶಗಳಲ್ಲಿ ಹೊಸ ಸಮಸ್ಯೆಗಳು ಕಾಣಿಸಿಕೊಳ್ಳಬಹುದು ಎಂದು ಕೇಂದ್ರೀಯ ಭದ್ರತಾ ಪಡೆಗಳು ಮತ್ತು ಗುಪ್ತಚರ ದಳದ ಅಧಿಕಾರಿಗಳು ಹೇಳಿದ್ದಾರೆ.

ಗಡಿ ಭದ್ರತಾ ಪಡೆಗಳಾದ ಬಿಎಸ್ಎಫ್, ಎಸ್‌ಎಸ್‌ಬಿ, ರಾಜ್ಯ ಪೊಲೀಸ್ ಪಡೆಗಳು, ಭಯೋತ್ಪಾದನೆ ನಿಗ್ರಹ ಕಾರ್ಯದಲ್ಲಿ ತೊಡಗಿರುವ ಸಿಆರ್‌ಪಿಎಫ್ ಮತ್ತು ಜಮ್ಮು–ಕಾಶ್ಮೀರ ಪೊಲೀಸರಿಗೆ ಗಡಿ ನಿರ್ವಹಣೆಯ ಕಾರ್ಯವಿಧಾನವನ್ನು ಬದಲಿಸಿಕೊಳ್ಳಲು ಹೇಳಲಾಗಿದೆ. ಇದೇ ರೀತಿಯ ನಿರ್ದೇಶನವನ್ನು ಕೇಂದ್ರ ಮತ್ತು ರಾಜ್ಯ ಪೊಲೀಸ್ ಪಡೆಗಳಿಗೂ ನೀಡಲಾಗಿದೆ.

ತಾಲಿಬಾನ್, ಅದರ ನಾಯಕತ್ವ ಮತ್ತು ಅದರ ಕಾರ್ಯವಿಧಾನವನ್ನು ಎದುರಿಸಲು ಪೂರ್ಣ ಪ್ರಮಾಣದ ತರಬೇತಿ, ಗುಪ್ತಚರ ಮಾಹಿತಿ ಸಂಗ್ರಹ ಕಾರ್ಯತಂತ್ರ ಮತ್ತು ಪ್ರತಿದಾಳಿ ಕಾರ್ಯವಿಧಾನ ಸಿದ್ಧವಾಗುತ್ತಿದೆ. ಹಲವಾರು ನಿರ್ದಿಷ್ಟ ಪ್ರಕರಣಗಳ ಕುರಿತು ಅಧ್ಯಯನ ನಡೆಸಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗಡಿ ಠಾಣೆಯಲ್ಲಿ ಕೆಲಸ ಮಾಡುವ ಎಲ್ಲರಿಗೂ ತಾಲಿಬಾನ್ ಇತಿಹಾಸ ಮತ್ತು ಅದರ ತಂತ್ರಗಾರಿಕೆ ಕುರಿತು ಅರಿವಿರಬೇಕು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಕಚ್ಚಾ ಬಾಂಬ್ ಮತ್ತು ವಾಹನಗಳ ಮೂಲಕ ಸ್ಫೋಟದ ಕುರಿತು ಸಿಬ್ಬಂದಿಗಳ ತಿಳಿವಳಿಕೆಯನ್ನು ಹೆಚ್ಚಿಸುವ ದಿಸೆಯಲ್ಲಿ ಭದ್ರತಾ ಪಡೆಗಳು ತರಬೇತಿಯನ್ನು ಉನ್ನತೀಕರಿಸಿವೆ ಎಂದರು.

ಪುರುಷ–ಮಹಿಳೆ ಜತೆಗೂಡಿ ವ್ಯಾಸಂಗಕ್ಕೆ ಅವಕಾಶವಿಲ್ಲ

ಕಾಬೂಲ್ (ಎಎಫ್‌ಪಿ): ಮಹಿಳೆಯರಿಗೆ ಪ್ರತ್ಯೇಕ ವ್ಯವಸ್ಥೆ ಇದ್ದರೆ ಮಾತ್ರ ವಿಶ್ವವಿದ್ಯಾಲಯಗಳಲ್ಲಿ ಅವರ ಶಿಕ್ಷಣಕ್ಕೆ ಅವಕಾಶ ಇರಲಿದೆ. ಪುರುಷರು ಮತ್ತು ಮಹಿಳೆಯರು ಒಟ್ಟಾಗಿ ವಿದ್ಯೆ ಕಲಿಯುವಂತಿಲ್ಲ ಎಂದು ಹೊಸ ತಾಲಿಬಾನ್ ಸರ್ಕಾರದ ಉನ್ನತ ಶಿಕ್ಷಣ ಸಚಿವ ಅಬ್ದುಲ್ ಬಾಖಿ ಹಖ್ಖಾನಿ ಭಾನುವಾರ ಹೇಳಿದ್ದಾರೆ.

1996–2001ರ ತಾಲಿಬಾನ್ ಆಡಳಿತದಲ್ಲಿ ಅಫ್ಗಾನಿಸ್ತಾನದಲ್ಲಿ ಮಹಿಳೆಯರ ಹಕ್ಕುಗಳನ್ನು ತೀವ್ರವಾಗಿ ಮೊಟಕುಗೊಳಿಸಲಾಗಿತ್ತು. ಆದರೂ ಕಳೆದ ತಿಂಗಳು ಮತ್ತೆ ಅಫ್ಗನ್ ಅನ್ನು ಸ್ವಾಧೀನ ಪಡಿಸಿಕೊಂಡಿರುವ ತಾಲಿಬಾನ್ ಈ ಬಾರಿ ಕಡಿಮೆ ತೀವ್ರತೆಯ ನಿಯಮಗಳನ್ನು ಜಾರಿಗೆ ತರುವುದಾಗಿ ಹೇಳಿಕೊಂಡಿದೆ.

‘ಮಿಶ್ರ ತರಗತಿಗಳನ್ನು ಅಂತ್ಯಗೊಳಿಸುತ್ತಿರುವ ಹೊಸ ನಿಯಮದ ಬಗ್ಗೆ ನಮಗೆ ಯಾವುದೇ ಸಮಸ್ಯೆಗಳಿಲ್ಲ. ಮುಸ್ಲಿಮರು ಅದನ್ನು ಸ್ವೀಕರಿಸುತ್ತಾರೆ’ ಎಂದು ಹಖ್ಖಾನಿ ಹೇಳಿದರು.

ವಿಶ್ವವಿದ್ಯಾಲಯಗಳಲ್ಲಿ ಮಹಿಳೆಯರು ಮತ್ತೆ ಅಧ್ಯಯನ ಮಾಡಬಹುದು. ಆದರೆ ಅವರು ಅಬಯಾ ನಿಲುವಂಗಿ ಮತ್ತು ಮುಖವನ್ನು ಸಂಪೂರ್ಣ ಮುಚ್ಚುವ ನಿಖಾಬ್ ಧರಿಸಬೇಕು. ತರಗತಿಗಳಲ್ಲಿ ಪುರುಷರಿಂದ ಮಹಿಳೆಯರನ್ನು ಪ್ರತ್ಯೇಕಿಸಲು ಪರದೆಗಳನ್ನು ಅಳವಡಿಸಬೇಕು ಎಂದು ಈ ತಿಂಗಳ ಆರಂಭದಲ್ಲಿ ತಾಲಿಬಾನ್ ಘೋಷಿಸಿತ್ತು.

ಅಫ್ಗಾನಿಸ್ತಾನದ ಶಿಕ್ಷಣ ವ್ಯವಸ್ಥೆಯು ಈಗ ಬಹಳ ಬದಲಾಗಿದೆ. ಶಿಕ್ಷಣ ಸಂಸ್ಥೆಗಳ ಸಂಖ್ಯೆಯೂ ಹೆಚ್ಚಾಗಿದೆ. ಇದು ಸಮೃದ್ಧ ಅಫ್ಗಾನಿಸ್ತಾನದ ಭರವಸೆ ಮೂಡಲು ಕಾರಣವಾಗಿದೆ ಎಂದು ಹಖ್ಖಾನಿ ಹೇಳಿದ್ದಾರೆ.

ಮಹಿಳೆಯರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲು ವಿಶ್ವವಿದ್ಯಾಲಯಗಳಿಗೆ ಸಂಪನ್ಮೂಲ ಇಲ್ಲ. ಹಾಗಾಗಿ, ಹೊಸ ನಿಯಮವು ಮಹಿಳೆಯರ ಶಿಕ್ಷಣದ ಅವಕಾಶವನ್ನು ಕಸಿದುಕೊಳ್ಳಲಿದೆ ಎಂಬ ಆತಂಕವನ್ನು ಕೆಲವರು ವ್ಯಕ್ತಪಡಿಸಿದ್ದಾರೆ.

ಹೊಸ ನಿಯಮಗಳ ಪ್ರಕಾರ ಮಹಿಳೆಯರು ಇಸ್ಲಾಂ ತತ್ವಗಳ ಅನುಸಾರ ಕೆಲಸ ಮಾಡಬಹುದು ಎಂದು ತಾಲಿಬಾನ್ ಹೇಳಿದೆ. ಆದರೆ ಯಾವ ನಿಯಮಗಳು ಎಂಬ ಬಗ್ಗೆ ಇನ್ನೂ ಮಾಹಿತಿ ನೀಡಬೇಕಿದೆ.

‘ನೀಟ್’ ಪರೀಕ್ಷೆಗೆ ಮೊದಲೇ ಅಭ್ಯರ್ಥಿ ಆತ್ಮಹತ್ಯೆ

ಸೇಲಂ (ಪಿಟಿಐ): ವೈದ್ಯಕೀಯ ಶಿಕ್ಷಣ ಆಕಾಂಕ್ಷಿಯಾಗಿದ್ದ 19 ವರ್ಷದ ಯುವಕ ಧನುಷ್, ಮೂರನೇ ಬಾರಿಗೆ ‘ನೀಟ್’ ಪರೀಕ್ಷೆಗೆ ಹಾಜರಾಗುವ ಮೊದಲೇ ಮೆಟ್ಟೂರು ಸಮೀಪದ ಕೂಜಾಹೈಯುರುವಿನ ತನ್ನ ನಿವಾಸದಲ್ಲಿ ಭಾನುವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪರೀಕ್ಷೆ ಆರಂಭಕ್ಕೂ ಕೆಲವೇ ಗಂಟೆ ಮೊದಲು ಈ ಪ್ರಕರಣ ವರದಿಯಾಗಿದೆ.

ಆತ್ಮಹತ್ಯೆ ಮಾಡಿಕೊಂಡಿದ್ದನ್ನು ಮೊದಲು ಗುರುತಿಸಿದ ಯುವಕನ ತಾಯಿ ಈ ಬಗ್ಗೆ ಮಾಹಿತಿ ನೀಡಿದರು ಎಂದು ಪೊಲೀಸ್ ಅಧಿಕಾರಿ ತಿಳಿಸಿದರು. ಕೃತ್ಯಕ್ಕೂ ಮುನ್ನ ಪತ್ರ ಬರೆದಿಟ್ಟಿದ್ದಾರೆಯೇ ಎಂಬ ಪ್ರಶ್ನೆಗೆ ನಿರ್ದಿಷ್ಟ ಉತ್ತರ ನೀಡದ ಅವರು, ‘ನೀಟ್ ಪರೀಕ್ಷೆಗೆ ಮೂರನೇ ಬಾರಿಗೆ ಹಾಜರಾಗಬೇಕಿತ್ತು. ಕಳೆದೆರಡು ಬಾರಿ ವಿಫಲರಾಗಿದ್ದರು’ ಎಂದರು.

ಸತ್ತ ವದಂತಿಯ ಬಳಿಕ ಕಾಣಿಸಿದ ಅಲ್‌ಕೈದಾ ಮುಖ್ಯಸ್ಥ

ಬೈರೂತ್ (ಎಪಿ): ಅಮೆರಿಕದ ವರ್ಲ್ಡ್ ಟ್ರೇಡ್ ಸೆಂಟರ್ ಮೇಲಿನ ದಾಳಿಯ (9/11) 20ನೇ ವರ್ಷದ ಸಂದರ್ಭದಲ್ಲಿ ಬಿಡುಗಡೆ ಮಾಡಲಾದ ವಿಡಿಯೊವೊಂದರಲ್ಲಿ ಅಲ್ ಕೈದಾ ನಾಯಕ ಅಯ್ಮನ್ ಅಲ್ ಜವಾಹಿರಿ ಕಾಣಿಸಿಕೊಂಡಿದ್ದಾನೆ. ಕೆಲ ತಿಂಗಳ ಹಿಂದೆ ಈತ ಸತ್ತು ಹೋಗಿದ್ದಾನೆ ಎಂಬ ವದಂತಿ ಇತ್ತು.

ಈ ವಿಡಿಯೊ ಶನಿವಾರ ಬಿಡುಗಡೆಯಾಗಿದೆ ಎಂದು ಮೂಲಭೂತವಾದಿ ಸಂಘಟನೆಗಳ ವೆಬ್‌ಸೈಟ್‌ಗಳ ಮೇಲೆ ನಿಗಾ ಇರಿಸುವ ‘ಸೈಟ್’ ಎಂಬ ಗುಪ್ತಚರ ಸಂಸ್ಥೆಯು ತಿಳಿಸಿದೆ.

‘ಜೆರುಸಲೆಂ ಎಂದಿಗೂ ಯಹೂದಿಗಳ ಪಾಲಾಗದು’ ಎಂದು ವಿಡಿಯೊದಲ್ಲಿ ಜವಾಹಿರಿ ಹೇಳಿದ್ದಾನೆ. ಹಾಗೆಯೇ, ಅಲ್ ಕೈದಾ ನಡೆಸಿದ ಎರಡು ದಾಳಿಗಳನ್ನು ಆತ ಶ್ಲಾಘಿಸಿದ್ದಾನೆ. ರಷ್ಯಾ ಪಡೆಗಳ ಮೇಲೆ ಸಿರಿಯಾದಲ್ಲಿ ಈ ಜನವರಿಯಲ್ಲಿ ನಡೆಸಿದ ದಾಳಿ ಅದರಲ್ಲೊಂದು.

ಅಫ್ಗಾನಿಸ್ತಾನವನ್ನು ತಾಲಿಬಾನ್ ವಶಕ್ಕೆ ಪಡೆದಿರುವುದನ್ನು ಜವಾಹಿರಿ ಉಲ್ಲೇಖಿಸಿಲ್ಲ. ಆದರೆ, ಅಫ್ಗಾನಿಸ್ತಾನ ಯುದ್ಧದ 20ನೇ ವರ್ಷವನ್ನು ಪ್ರಸ್ತಾಪಿಸಿದ್ದಾನೆ. ಈ ವರ್ಷದ ಜನವರಿ 1ರ ಉಲ್ಲೇಖವೂ ಇದೆ.

ಅಮೆರಿಕದ ಸೇನೆ ಹಿಂಪಡೆತ ಒಪ್ಪಂದವು 2020ರ ಫೆಬ್ರುವರಿಯಲ್ಲಿಯೇ ಆಗಿತ್ತು. ಜವಾಹಿರಿ ಸತ್ತಿದ್ದಾನೆ ಎಂಬ ವದಂತಿ 2020ರ ಕೊನೆಯ ಹೊತ್ತಿಗೆ ಕೇಳಿ ಬಂದಿತ್ತು. 2021ರ ಆರಂಭದಲ್ಲಿ ಈ ವಿಡಿಯೊ ಚಿತ್ರೀಕರಣ ಆಗಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ ಎಂದು ‘ಸೈಟ್’ ಹೇಳಿದೆ.

‘2021ರ ಜನವರಿಯಲ್ಲಿ ಅಥವಾ ಅದರ ನಂತರ ಈ ವಿಡಿಯೊವನ್ನು ಚಿತ್ರೀಕರಿಸಿರಬಹುದು’ ಎಂದು ಸೈಟ್ ನಿರ್ದೇಶಕಿ ರೀಟಾ ಕಟ್ಜ್ ಹೇಳಿದ್ದಾರೆ.

ಅಲ್ ಕೈದಾ ಮುಖ್ಯಸ್ಥನಾಗಿದ್ದ ಒಸಾಮಾ ಬಿನ್ ಲಾದೆನ್‌ನನ್ನು ಅಮೆರಿಕದ ಪಡೆಯು 2011ರಲ್ಲಿ ಪಾಕಿಸ್ತಾನದ ಅಬೋಟಾಬಾದ್‌ನಲ್ಲಿ ಹತ್ಯೆ ಮಾಡಿದ ಬಳಿಕ, ಜವಾಹಿರಿಯು ಅಲ್‌ಕೈದಾ ನಾಯಕತ್ವ ವಹಿಸಿಕೊಂಡಿದ್ದ.

ಮೂರ್ತಿ ವಿಸರ್ಜನೆ ಗಣೇಶೋತ್ಸವದ ಅಂಗವಾಗಿ ಚೆನ್ನೈನಲ್ಲಿ ಮಹಿಳಾ ಪೊಲೀಸರಿಬ್ಬರು ಭಾನುವಾರ ಗಣಪತಿ ಮೂರ್ತಿಗಳನ್ನು ವಿಸರ್ಜನೆಗಾಗಿ ಕೊಂಡೊಯ್ದರು –ಎಎಫ್‌ಪಿ ಚಿತ್ರ

ಕಾಶ್ಮೀರ: ಪಾಕ್‌ನಿಂದ ದಾಖಲೆ ಬಿಡುಗಡೆ

ಇಸ್ಲಾಮಾಬಾದ್ (ಪಿಟಿಐ): ಜಮ್ಮು–ಕಾಶ್ಮೀರಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಒಳಗೊಂಡ ದಾಖಲೆಗಳನ್ನು ಪಾಕಿಸ್ತಾನ ಭಾನುವಾರ ಬಿಡುಗಡೆ ಮಾಡಿದೆ.

‘ಭಾರತದ ಅಧಿಕಾರಿಗಳಿಂದ ಕಾಶ್ಮೀರದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ’ ಎಂದು ಆರೋಪಿಸಿರುವ ಪಾಕಿಸ್ತಾನ, ತಾನು ಬಿಡುಗಡೆ ಮಾಡಿರುವ ದಾಖಲೆಗಳು ಈ ಕುರಿತ ವಿವರಗಳನ್ನು ಒಳಗೊಂಡಿವೆ ಎಂದು ತಿಳಿಸಿದೆ.

ಇಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ವಿದೇಶಾಂಗ ಸಚಿವ ಶಾ ಮಹಮೂದ್ ಖುರೇಷಿ, ರಾಷ್ಟ್ರೀಯ ಭದ್ರತಾ ಸಲಹೆಗಾರ ಮೊಯಿದ್ ಯೂಸಫ್ ಹಾಗೂ ಮಾನವ ಹಕ್ಕುಗಳ ಸಚಿವ ಶಿರಿನ್ ಮಝಾರಿ ಅವರು 131 ಪುಟಗಳ ಈ ದಾಖಲೆಯನ್ನು ಬಿಡುಗಡೆ ಮಾಡಿದರು.

‘ಅಂತರರಾಷ್ಟ್ರೀಯ ಮಾಧ್ಯಮಗಳಲ್ಲಿ ಪ್ರಕಟವಾಗಿರುವ 26 ವರದಿಗಳು, ಭಾರತದ 41 ಹಾಗೂ ಪಾಕಿಸ್ತಾನದ 14 ಚಿಂತಕರ ಅಭಿಪ್ರಾಯಗಳನ್ನು ಈ ದಾಖಲೆ ಒಳಗೊಂಡಿದೆ’ ಎಂದು ಸಚಿವ ಖುರೇಷಿ ತಿಳಿಸಿದರು.

ರಾಜ್ಯ ಕೋವಿಡ್ ಅಂಕಿ–ಅಂಶ

29,61,735 ▲ ಒಟ್ಟು ಸೋಂಕಿತರು (29,60,932 ನಿನ್ನೆಯ ವಿವರ)

16,656 ▼ ಸಕ್ರಿಯ ಪ್ರಕರಣಗಳು

29,07,548 ▲ ಗುಣಮುಖರಾದವರು

37,504 ▲ ಒಟ್ಟು ಸಾವು

ಪ್ರಜಾವಾಣಿ ಗ್ರಾಫಿಕ್ಸ್

ದಿನದ ಏರಿಕೆ		
ಹೊಸ ಪ್ರಕರಣ	803	▲
ಗುಣಮುಖ	802	▼
ಸಾವು	17	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

9/11ರ ಭಯೋತ್ಪಾದಕರ ದಾಳಿಯಲ್ಲಿ ಸೌದಿ ಭಾಗಿ?

ವಾಷಿಂಗ್ಟನ್ (ಎಪಿ): ಅಮೆರಿಕದಲ್ಲಿ 2001ರ ಸೆಪ್ಟೆಂಬರ್ 11ರಂದು ನಡೆದಿದ್ದ ಭಯೋತ್ಪಾದಕ ದಾಳಿಗೆ ಸಂಬಂಧಿಸಿದ 16 ಪುಟಗಳ ತನಿಖಾ ದಾಖಲೆಗಳನ್ನು ಎಫ್‌ಬಿಐ ಶನಿವಾರ ಬಿಡುಗಡೆಗೊಳಿಸಿದೆ. ವಿಮಾನ ಅಪಹರಣಕಾರರ ಜೊತೆಗೆ ಸೌದಿ ಭಾಗಿಯಾಗಿತ್ತು ಎಂಬ ಅನುಮಾನಗಳನ್ನು ಇದು ಬಲಪಡಿಸಿದೆ.

ಈ ದಾಖಲೆಯು ಒಮರ್ ಬಯೋಮಿ ಮತ್ತು ಶಂಕಿತ ಅಲ್ ಖೈದಾ ಕಾರ್ಯಕರ್ತರ ನಡುವಿನ ಸಂಪರ್ಕವನ್ನು ತಿಳಿಸುತ್ತದೆ. ವಿದ್ಯಾರ್ಥಿಯಾಗಿದ್ದ ಒಮರ್ ಬಯೋಮಿಯು ಸೌದಿ ಗುಪ್ತಚರ ಕಾರ್ಯಕರ್ತನಾಗಿರಬಹುದು ಎಂದು ಹೇಳಲಾಗಿದೆ. ನ್ಯೂಯಾರ್ಕ್ ಮತ್ತು ವಾಷಿಂಗ್ಟನ್‌ನಿಂದ ನಾಲ್ಕು ವಿಮಾನಗಳನ್ನು ಅಪಹರಿಸುವ ಪಿತೂರಿ ನಡೆಸಿದ್ದ ಶಂಕಿತ ಅಲ್‌ಖೈದಾ ಕಾರ್ಯಕರ್ತರ ಜತೆ ಸಂಪರ್ಕ ಹೊಂದಿದ್ದ ಎಂದು ದಾಖಲೆಗಳು ತಿಳಿಸುತ್ತವೆ.

ಕ್ಯಾಲಿಫೋರ್ನಿಯಾಕ್ಕೆ 2000ದಲ್ಲಿ ಬಂದಿದ್ದ ನವಾಫ್ ಅಲ್ ಹಜ್ಮಿ ಮತ್ತು ಖಾಲಿದ್ ಅಲ್ ಮಿಧರ್ (ಅಪಹರಣಕಾರರು) ಜೊತೆಗೆ ಬಯೋಮಿ ಸಂಪರ್ಕ ಹೊಂದಿದ್ದ ಮತ್ತು ಸಭೆಗಳನ್ನು ನಡೆಸಿದ್ದ ಎಂದು ದಾಖಲೆಗಳು ಹೇಳುತ್ತವೆ.

ತನ್ನ ಅಧಿಕೃತ ಗುರುತನ್ನು ಮರೆಮಾಚಿ, ವಿದ್ಯಾರ್ಥಿಯಾಗಿದ್ದ ಬಯೋಮಿ, ಸೌದಿ ಕಾನ್ಸುಲೇಟ್‌ನಲ್ಲಿ ಉನ್ನತ ಸ್ಥಾನ ಹೊಂದಿದ್ದ ಎಂದು ಮೂಲಗಳು ತಿಳಿಸಿರುವುದಾಗಿ ಎಫ್‌ಬಿಐ ದಾಖಲೆಗಳಲ್ಲಿ ಹೇಳಿದೆ.

ಬಯೋಮಿಯು ಹಜ್ಮಿ ಮತ್ತು ಮಿಧರ್‌ಗೆ ಅನುವಾದಕ್ಕೆ ನೆರವಾಗುತ್ತಿದ್ದ. ಅವರಿಗೆ ಪ್ರಯಾಣ, ವಸತಿ ಸೌಕರ್ಯ ಕಲ್ಪಿಸುವುದರ ಜತೆಗೆ ಆರ್ಥಿಕ ನೆರವನ್ನು ಒದಗಿಸುತ್ತಿದ್ದ ಎಂದು ದಾಖಲೆಗಳಲ್ಲಿ ಉಲ್ಲೇಖಿಸಲಾಗಿದೆ. ಬಯೋಮಿ ಆಗಾಗ್ಗೆ ‘ಜಿಹಾದ್’ ಬಗ್ಗೆ ಮಾತನಾಡುತ್ತಿದ್ದ ಎಂಬುದಾಗಿ ಆತನ ಪತ್ನಿ ಹೇಳುತ್ತಿದ್ದ ವಿಷಯವನ್ನೂ ಮೂಲಗಳ ಆಧರಿಸಿ ಎಫ್‌ಬಿಐ ಪ್ರಸ್ತಾಪಿಸಿದೆ.

ಆದರೆ ಅಪಹರಣಕಾರರ ನಡುವೆ ಸೌದಿ ಸರ್ಕಾರ ನೇರ ಸಂಪರ್ಕ ಹೊಂದಿತ್ತೇ ಎಂಬುದರ ಕುರಿತು ಸ್ಪಷ್ಟತೆ ಇಲ್ಲ ಎಂದು ದಾಖಲೆಗಳಲ್ಲಿ ತಿಳಿಸಲಾಗಿದೆ.

ದಾಖಲೆಗಳ ಬಿಡುಗಡೆಗೆ ಸಂಬಂಧಿಸಿದಂತೆ ಬೈಡನ್ ಅವರ ಮೇಲೆ ಸಂತ್ರಸ್ತರ ಕುಟುಂಬದಿಂದ ಇತ್ತೀಚೆಗೆ ಒತ್ತಡ ಹೆಚ್ಚಾಗಿತ್ತು.

ಅವರು ದಾಖಲೆಗಳ ಬಿಡುಗಡೆಗೆ ಒತ್ತಾಯಿಸಿ ನ್ಯೂಯಾರ್ಕ್‌ನಲ್ಲಿ ಮೊಕದ್ದಮೆಯನ್ನೂ ಹೂಡಿದ್ದರು. ಅಲ್ಲದೆ ಸೌದಿ ಹಿರಿಯ ಅಧಿಕಾರಿಗಳು ದಾಳಿಯಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪಿಸಿದ್ದರು.

ನಿಫಾ: ಇನ್ನೂ ಪತ್ತೆಯಾಗದ ಮೂಲ

ತಿರುವನಂತಪುರ (ಪಿಟಿಐ): ‘ನಿಫಾ ವೈರಸ್ ಸೋಂಕಿನಿಂದ ಕಳೆದ ವಾರ ಮೃತಪಟ್ಟ ಬಾಲಕನ ಸಂಪರ್ಕಕ್ಕೆ ಬಂದ ನಾಲ್ವರ ಮಾದರಿಗಳು ನೆಗೆಟಿವ್ ಎಂದು ದೃಢಪಟ್ಟಿವೆ. ಆದರೆ, ಮೂಲ ಇನ್ನೂ ಪತ್ತೆಯಾಗಿಲ್ಲ’ ಎಂದು ಕೇರಳದ ಆರೋಗ್ಯ ಸಚಿವೆ ವೀಣಾ ಜಾರ್ಜ್ ಭಾನುವಾರ ತಿಳಿಸಿದ್ದಾರೆ.

‘ನಾಲ್ಕ ಮಾದರಿಗಳನ್ನು ಮತ್ತೊಮ್ಮೆ ಪರೀಕ್ಷಿಸಲಾಯಿತು. ಎಲ್ಲರದ್ದೂ ನೆಗೆಟಿವ್ ಫಲಿತಾಂಶ ದೊರೆತಿದೆ. ಸಮೀಕ್ಷೆ ಕಾರ್ಯ ಮತ್ತು ಮಾದರಿಗಳ ಪರೀಕ್ಷೆಯೂ ಮುಂದುವರಿದಿವೆ. ಪುಣೆಯ ರಾಷ್ಟ್ರೀಯ ವೈರಾಣು ಸಂಸ್ಥೆಯ ತಂಡ ವಿವಿಧ ಪ್ರದೇಶಗಳಿಂದ ಮಾದರಿಗಳನ್ನು ಸಂಗ್ರಹಿಸುತ್ತಿದೆ. ಅತ್ಯಂತ ಅಪಾಯದ ಸಂಪರ್ಕದಲ್ಲಿದ್ದವರು ಎಂದು ಗುರುತಿಸಲಾದವರನ್ನು ಕೋಯಿಕ್ಕೋಡ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಪ್ರತ್ಯೇಕವಾಗಿರಿಸಲಾಗಿದ್ದು, ಅವರ ಆರೋಗ್ಯ ಸ್ಥಿರವಾಗಿದೆ’ ಎಂದು ಅವರು ತಿಳಿಸಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 9980295449, 9902839010

TVS, ವಿಡಿಯೋಕಾನ್, TOYOTA, ಬ್ರಿಟಾನಿಯಾ MNC ಕಂಪನಿಗಳಿಗೆ SSLC, PUC, Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) 17,800-56,000/- ವಸತಿಯೂಟವಿದೆ. 9611715755

ಮನೆ ಕೆಲಸಕ್ಕೆ, ಅಡುಗೆಗೆ, ಮಕ್ಕಳನ್ನು ಮತ್ತು ರೋಗಿಗಳನ್ನು ನೋಡಿಕೊಳ್ಳಲು ಮಹಿಳೆಯರು / ಹುಡುಗಿಯರು ಬೇಕಾಗಿದ್ದಾರೆ. ಉಚಿತ ಊಟ, ವಸತಿ ಸೌಲಭ್ಯವಿದೆ. ಸಂಬಳ: 15,000-20,000 ಸಾವಿರ ಸಂಪರ್ಕಿಸಿ: 9326447402, 9892396441

TOYOTA, ಟಾಟಾಮೋಟರ್ಸ್, ಬಿಗ್ ಬಜಾರ್ಸ್, ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000-60,000 /- ವಸತಿಯೂಟವಿದೆ. 7795837319, 9901312461

ರಾವ್ ಸಂಸ್ಥೆಗೆ ಅನುಭವವುಳ್ಳವರು ಆಫೀಸ್ ವರ್ಕ್,ಫೀಲ್ಡ್ ವರ್ಕ್ (Any Degree) ವಯಸ್ಸಾದವರನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು, ಹೋಂನರ್ಸ್ ಗಳು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ.10,000-15,000. 8951315839, 9880545002

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ12,000-15,000ವರೆಗೆ ಸಂಪಾದಿಸಿ.ಕನ್ನಡ/ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC,Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ 18,000-56,000/- ವಸತಿಯೂಟವಿದೆ. 7204853296, 7204396011

Part-Time Jobs

★ಮನೆಯಿಂದಲೇ ಮೆಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ.ತರಬೇತಿಗಾಗಿ: ಬೆಂಗಳೂರು.9060472077, ಶಿವಮೊಗ್ಗ.9008012895

CONNECT

Notice for Storage and Sale of 100 % Water Soluble Mixture of Fertilizers for use in Agriculture Please refer to the Order-Requirement No. 2900 (E) Dated 24th October 2015 in FCO 1985

Stalwart Agronomics Pvt Ltd., is pleased to inform the General public & the Farmers in particular that with reference to the Order No.2900 (E) dated 24th October 2015 issued by Ministry of Agriculture and Farmers We fare and amendment(s) thereafter, that we Import, Store & Sell following 100 % Water Soluble Fertilizers in the state of Karnataka

S. No	Composition	30-10-10	10-50-10	10-10-40	6-36-36	17-17-17	00-06-42	21-07-08	06-12-36	17-44-00
1	Total Nitrogen per cent by weight,. minimum	30.0	10.0	10.0	6.0	17.0	00	21	6.0	17
2	Water Soluble Phosphate as P205) per cent by weight., minimum.	10.0	50.0	10.0	36.0	17.0	6.0	7	12.0	44
3	Water soluble potash, per cent by weight, minimum.	10.0	10.0	40.0	36.0	17.0	42.0	8	36.0	00

Other specifications of the above NPK fertilizers

1.Moisture -0.5%	2.Total Chloride -1.5%	3.Matter Insoluble in water – 0.5%	4.Sodium as NaCl – 0.5%
5.Lead as Po-0.003%	6.Cadmium as Cd-0.0025%	7. Arsenic as As-0.01%	

STALWART AGRONOMICS PRIVATE LIMITED
A.O: 2/36 Duraisamy Layout, Pallapatti, Salem -636 009.Tamilnadu India.
B.O: 4G Floor Chiguru Nilaya, Aditya Enclave, Vijayapura Road, Devanhally, Bengaluru-562110 Karnataka
Customer care No: +91 70948 72972 Email: enquiry@stalwartagro.com web: www.stalwartagro.com

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಭವಿಷ್ಯ

Astrology

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

★॥ಶ್ರೀಶಾಕಾಂಬರಿದೇವಿ॥★ ಆರಾಧಕರು ಸ್ತ್ರೀ_ಪುರುಷ_ವಶೀಕರಣ, ಸಂಭೋಗ_ವಶೀಕರಣ ಇನ್ನೂಯಾವುದೇ ಕಠಿಣ,ಗುಪ್ತ ಸಮಸ್ಯೆಗಳಿಗೆ 11 ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9900222591

“ಉಚಿತ ಭವಿಷ್ಯ, ಕ್ಷಣದಲ್ಲಿ ಪರಿಹಾರ” ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ, ಧನವಶೀಕರಣ, ಶತ್ರುವಶೀಕರಣ, ಸ್ತ್ರೀಪುರುಷವಶೀಕರಣ, ನಿಮ್ಮಲ್ಲಿ ಸಮಸ್ಯೆಯೇ?? ಪರಿಹಾರವಾಗಬೇಕೆ?? ಒಂದೇಕರೆಯಲ್ಲಿ ವಶೀಕರಣದ ವಿಶೇಷತಾಂತ್ರಿಕರಾದ ಗುರುರಾಜನ್ “ನಂಬಿದವರ ಪಾಲಿನಬೆಳಕು” 9731309181

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

ಪ್ರವಾಸ

Travel

ಶ್ರೀರಾಜರಾಜೇಶ್ವರಿ ಟೂರ್ಸ್ 9743895346, 9739618243 11-10-2021, 10ದಿನಗಳ ದಸರಾ ಪ್ರಯುಕ್ತ ರಾಜಸ್ಥಾನ, ಕುಲ್‌ಭಾರ ವಿಲೇಜ್, ಸ್ಯಾಮ್ ಡೆಸೇರ್ಟ್, ನಾಥದ್ವಾರ ಪ್ರವಾಸ.

ಗೌರಿಗಣೇಶ ಹಬ್ಬದ ಶುಭಾಶಯಗಳು: 16.10.2021 7ದಿನಗಳ ತಮಿಳುನಾಡು, 24.10.2021 6ದಿನಗಳ ಕಾಶಿ,ಗಯಾ, 18.10.2021 12ದಿನಗಳ ಗುಜರಾತ್, ಮಧ್ಯಪ್ರದೇಶ, 18.10.2021,24.10.2021 10ದಿನಗಳ ಲೇಹ್‌ಲಡಾಕ್. ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್, 9342848791, 9880847001

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ Classifieds
EFFECTIVE FROM JUNE 3rd, 2020

DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಅಮೆರಿಕ ಓಪನ್: ಲೇಲಾ ಮಣಿಸಿ ದಾಖಲೆ ಬರೆದ ಎಮಾ ರಡುಕಾನು

ಬ್ರಿಟನ್ ಪೋರಿ; ಟೆನಿಸ್‌ನ ಯುವರಾಣಿ

ಲಂಡನ್/ನ್ಯೂಯಾರ್ಕ್ (ಎಎಫ್‌ಪಿ/ರಾಯಿಟರ್ಸ್): ಬ್ರಿಟನ್‌ನಾದ್ಯಂತ ಭಾನುವಾರ ಖುಷಿಯ ಅಲೆ. 18ರ ಹರೆಯದ ಎಮಾ ರಡುಕಾನು ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಪ್ರಶಸ್ತಿ ಗೆದ್ದು ದಾಖಲೆ ಬರೆದ ಹಿನ್ನೆಲೆಯಲ್ಲಿ ನಡೆದ ಸಂಭ್ರಮಾಚರಣೆಯ ಚುಕ್ಕಾಣಿ ಹಿಡಿಯಲು ರಾಣಿ, ಎರಡನೇ ಎಲಿಜಬೆತ್ ಅವರೇ ಮುಂದಾಗಿದ್ದರು.

ನ್ಯೂಯಾರ್ಕ್‌ನಲ್ಲಿ ಶನಿವಾರ ರಾತ್ರಿ ನಡೆದ ಮಹಿಳಾ ವಿಭಾಗದ ಫೈನಲ್ ಪಂದ್ಯದಲ್ಲಿ ಎಮಾ ರಡುಕಾನು ತಮಗಿಂತ ಒಂದು ವರ್ಷ ದೊಡ್ಡವರಾದ ಕೆನಡಾದ ಲೇಲಾ ಫರ್ನಾಂಡಸ್ ಅವರನ್ನು 6–4, 6–3ರಲ್ಲಿ ಮಣಿಸಿದ್ದರು. ಈ ಮೂಲಕ ಇತಿಹಾಸ ಬರೆದಿದ್ದರು.

1977ರ ವಿಂಬಲ್ಡನ್ ಟೂರ್ನಿಯ ಚಾಂಪಿಯನ್ ಆದ ವರ್ಜೀನಿಯಾ ವೇಡ್ ಅವರ ನಂತರ ಗ್ರ್ಯಾನ್‌ಸ್ಲಾಂ ಟೂರ್ನಿಯೊಂದರ ಪ್ರಶಸ್ತಿ ಗಳಿಸಿದ ಬ್ರಿಟನ್‌ನ ಮೊದಲ ಮಹಿಳೆ ರಡುಕಾನು. ಗ್ರ್ಯಾನ್‌ಸ್ಲಾಂ ಟೂರ್ನಿಯೊಂದರ ಅರ್ಹತಾ ಸುತ್ತಿನಲ್ಲಿ ಆಡಿ ಪ್ರಶಸ್ತಿ ಗಳಿಸಿದ ಮೊದಲ ಟೆನಿಸ್ ಪಟು ಎಂಬ ಹೆಗ್ಗಳಿಕೆಯೂ ರಡುಕಾನು ಅವರದಾಯಿತು.

ಬ್ರಿಟನ್‌ನ ಪತ್ರಿಕೆಗಳ ಮುಖಪುಟಗಳಲ್ಲಿ ಭಾನುವಾರ ರಡುಕಾನು ಅವರ ಚಿತ್ರಗಳೇ ರಾರಾಜಿಸಿದವು. ಮ್ಯಾಂಚೆಸ್ಟರ್ ಯುನೈಟೆಡ್ ಪರ ಎರಡು ಗೋಲುಗಳನ್ನು ಗಳಿಸಿದ ಯುವೆಂಟಸ್ ಮಾಜಿ ಆಟಗಾರ ಕ್ರಿಸ್ಟಿಯಾನೊ ಅವರನ್ನು ಹಿಂದಿಕ್ಕಿ ರಡುಕಾನು ಮುಖಪುಟಗಳಲ್ಲಿ ಸ್ಥಾನ ಗಳಿಸಿದ್ದರು.

ಪತ್ರಿಕೆಗಳಲ್ಲಿ ವೈವಿಧ್ಯಮಯ ಶೀರ್ಷಿಕೆಗಳು ಕೂಡ ಗಮನ ಸೆಳೆದವು. ಸಾಮಾಜಿಕ ತಾಣಗಳಲ್ಲಿ ರಡುಕಾನು ಸಂಚಲನ ಮೂಡಿಸಿದ್ದಾರೆ. ವಿವಿಧ ದೇಶಗಳ ಹೆಸರಾಂತ ಟೆನಿಸ್ ಪಟುಗಳು ಕೂಡ ರಡುಕಾನು ಅವರನ್ನು ಅಭಿನಂದಿಸಿದ್ದಾರೆ.

‘ಇಷ್ಟು ಸಣ್ಣ ವಯಸ್ಸಿನಲ್ಲಿ ಇಂಥ ಸಾಧನೆ ಮಾಡಿದ್ದು ನಿಮ್ಮ ಕಠಿಣ ಪರಿಶ್ರಮ ಮತ್ತು ಅರ್ಪಣಾ ಭಾವಕ್ಕೆ ಸಂದ ಫಲ. ನಿಮಗೆ ನನ್ನ ಅಭಿನಂದನೆಗಳು’ ಎಂದು ರಾಣಿ ಎಲಿಜಬೆತ್ ಹೇಳಿದ್ದಾರೆ.

ಪ್ರಧಾನಿ ಬೋರಿಸ್ ಜಾನ್ಸನ್ ‘ಎಂಥ ಅಮೋಘ ಪಂದ್ಯ... ಎಮಾ ನಿಮಗೆ ಅಭಿನಂದನೆಯ ಮಾಲೆಯನ್ನು ಅರ್ಪಿಸುತ್ತಿದ್ದೇನೆ. ದಿಟ್ಟ ಆಟದ ಮೂಲಕ ಪ್ರಸಸ್ತಿ ಗೆದ್ದುಕೊಂಡಿದ್ದೀರಾ. ಆ ಮೂಲಕ ನಮಗೆಲ್ಲ ಹೆಮ್ಮೆ ತಂದಿದ್ದೀರಾ’ ಎಂದು ಟ್ವೀಟ್ ಮಾಡಿದ್ದಾರೆ.

ಸೆಟ್ ವಿವರ

ಎಮಾ ರಡುಕಾನು	6	6
ಲೇಲಾ ಫರ್ನಾಂಡಸ್	4	3

ಎಮಾ ರಡುಕಾನು

ದೇಶ	: ಬ್ರಿಟನ್
ವಯಸ್ಸು	: 18
ರ‍್ಯಾಂಕಿಂಗ್	: 150
ಒಟ್ಟು ಜಯ	: 69
ಒಟ್ಟು ಸೋಲು	: 22

ಟೂರ್ನಿಗೆ ಬಣ್ಣ ತುಂಬಿದ ಯುವ ತಾರೆಯರು

ಲೇಲಾ ಫರ್ನಾಂಡಸ್

ಫಿಟ್‌ನೆಸ್ ಸಮಸ್ಯೆಯಿಂದಾಗಿ ಸೆರೆನಾ ವಿಲಿಯಮ್ಸ್ ದೂರ ಸರಿದಾಗ ಮತ್ತು ಮೂರನೇ ಸುತ್ತಿನಲ್ಲಿ ನವೊಮಿ ಒಸಾಕ ಹಾಗೂ ಆ್ಯಶ್ಲಿ ಬಾರ್ಟಿ ಹೊರಬಿದ್ದಾಗ ಈ ಬಾರಿಯ ಟೂರ್ನಿ ಮೇಲೆ ಟೆನಿಸ್ ಪ್ರಿಯರು ಅಸಕ್ತಿಯನ್ನೇ ಕಳೆದುಕೊಂಡಿದ್ದರು. ಆದರೆ ಯುವ ತಾರೆಯರಾದ ಎಮಾ ರಡುಕಾನು ಮತ್ತು ಲೆಯ್ಲಾ ಫರ್ನಾಂಡಸ್ ಆರಂಭದಿಂದಲೇ ಗಮನಾರ್ಹ ಆಟವಾಡುತ್ತ ಟೂರ್ನಿಗೆ ಬಣ್ಣ ತುಂಬಿದರು.

2002ರಲ್ಲಿ ಎರಡು ತಿಂಗಳ ಅಂತರದಲ್ಲಿ ಜನಿಸಿದ ಲೆಯ್ಲಾ ಮತ್ತು ಎಮಾ ಮಹಿಳಾ ಸಿಂಗಲ್ಸ್‌ನಲ್ಲಿ ಹೊಸ ಯುಗಕ್ಕೆ ನಾಂದಿ ಹಾಡಿದರು. ಫೈನಲ್ ಪಂದ್ಯ ವೀಕ್ಷಿಸಲು ಆರ್ಥರ್ ಆ್ಯಶೆ ಕ್ರೀಡಾಂಗಣದಲ್ಲಿ 23,000 ಪ್ರೇಕ್ಷಕರು ತುಂಬಿದ್ದರು. ಅದಕ್ಕಿಂತ ಎಷ್ಟೋ ಪಟ್ಟು ಕ್ರೀಡಾಪ್ರಿಯರು ಯುವ ಆಟಗಾರ್ತಿಯರ ಹಣಾಹಣಿಯಲ್ಲಿ ಜಯಿಸುವವರು ಯಾರು ಎಂಬ ಕುತೂಹಲದಿಂದ ಜಗತ್ತಿನಾದ್ಯಂತ ಪಂದ್ಯ ವೀಕ್ಷಿಸುತ್ತಿದ್ದರು.

ಈ ತಿಂಗಳಲ್ಲಿ 40ನೇ ವಯಸ್ಸಿಗೆ ಕಾಲಿಡಲಿರುವ ಸೆರೆನಾ ವಿಲಿಯಮ್ಸ್ ಎರಡು ದಶಕಗಳಿಂದ ಅಮೆರಿಕ ಓಪನ್ ಟೂರ್ನಿಯಲ್ಲಿ ಖ್ಯಾತಿಯನ್ನು ಉಳಿಸಿಕೊಂಡಿದ್ದಾರೆ. ಹೀಗಾಗಿ ಅವರು ಕಣಕ್ಕೆ ಇಳಿಯುವುದಿಲ್ಲ ಎಂದು ಘೋಷಿಸಿದಾಗ ಪ್ರೇಕ್ಷಕರು ನಿರಾಸೆಗೆ ಒಳಗಾಗಿದ್ದರು.

ಆದರೆ ಎರಡು ಬಾರಿ ಅಮೆರಿಕ ಓಪನ್ ಚಾಂಪಿಯನ್ ಆಗಿದ್ದ ನವೊಮಿ ಒಸಾಕ ಅವರನ್ನು ಲೆಯ್ಲಾ ಮೂರನೇ ಸುತ್ತಿನಲ್ಲಿ ಮಣಿಸಿದ್ದರು. 2019ರ ಅಮೆರಿಕ ಓಪನ್ ಚಾಂಪಿಯನ್ ಬಿಯಾಂಕ ಆ್ಯಂಡ್ರುಸ್ಕು ಮತ್ತು 2020ರ ಫ್ರೆಂಚ್ ಓಪನ್ ವಿಜೇತೆ ಇಗಾ ಸ್ವಾಟೆಕ್ ಅವರು ಚಾಂಪಿಯನ್ ಪಟ್ಟಕ್ಕೇರುವಾಗ ಅವರಿಗೆ 19 ವರ್ಷ ಆಗಿತ್ತು.

ಉದ್ವೇಗದಿಂದ ಶಾಂತಚಿತ್ತದತ್ತ...

ರಡುಕಾನು, ಜುಲೈನಲ್ಲಿ ನಡೆದ ವಿಂಬಲ್ಡನ್ ಟೂರ್ನಿಯಲ್ಲೂ ಪಾಲ್ಗೊಂಡಿದ್ದರು. ಆದರೆ ಉದ್ವೇಗವನ್ನು ತಡೆಯಲಾರದೆ ನಾಲ್ಕನೇ ಸುತ್ತಿನ ಅರ್ಧದಲ್ಲೇ ನಿವೃತ್ತಿ ಘೋಷಿಸಿ ಹೊರನಡೆದಿದ್ದರು. ಆದರೆ ಅಮೆರಿಕ ಓಪನ್‌ನ ಆರಂಭದಿಂದಲೇ ಶಾಂತಚಿತ್ತದಿಂದ ಆಡಿ ಪ್ರಬಲ ಎದುರಾಳಿಗಳನ್ನು ಮಣಿಸಿದ್ದರು.

ರಡುಕಾನು ಜನಿಸಿದ್ದು ಕೆನಡಾದಲ್ಲಿ. ಅವರ ತಂದೆ ರೊಮೇನಿಯಾ ಪ್ರಜೆ ಮತ್ತು ತಾಯಿ ಚೀನಾದವರು. ರಡುಕಾನು ಅವರಿಗೆ ಎರಡು ವರ್ಷ ಪ್ರಾಯವಾಗಿದ್ದ ಸಂದರ್ಭದಲ್ಲಿ ಪಾಲಕರು ಇಂಗ್ಲೆಂಡ್‌ಗೆ ತೆರಳಿದ್ದರು. ದಕ್ಷಿಣ ಲಂಡನ್‌ನ ಹೊರವಲಯದಲ್ಲಿ ವಾಸವಾಗಿದ್ದರು. ಚೀನಾದ ಪತ್ರಿಕೆಗಳಲ್ಲೂ ರಡುಕಾನು ಸಾಧನೆಯನ್ನು ಕೊಂಡಾಡಿ ಸುದ್ದಿಗಳು ಪ್ರಕಟವಾಗಿವೆ. ಸಣ್ಣ ವಯಸ್ಸಿನಲ್ಲಿ ಚೀನಾಗೆ ಭೇಟಿ ನೀಡಿದ್ದ ಚಿತ್ರಗಳು ಪತ್ರಿಕೆಗಳಲ್ಲಿ ರಾರಾಜಿಸಿವೆ.

ಪಂದ್ಯದ ವಿವರಗಳು ■ ರಡುಕಾನು ■ ಲೆಯ್ಲಾ

ಏಸ್‌ಗಳು	ಡಬಲ್ ಫಾಲ್ಟ್	ಬ್ರೇಕ್ ಪಾಯಿಂಟ್	ಗೆದ್ದ ಪಾಯಿಂಟ್‌ಗಳು
3-2	1-5	4/18 - 2/9	81 - 68

ಗೆದ್ದ ಗೇಮ್‌ಗಳು	ಸತತ ಹೆಚ್ಚು ಗೇಮ್ ಗೆಲುವು	ಸತತ ಹೆಚ್ಚು ಪಾಯಿಂಟ್ ಜಯ
12 - 7	4 - 2	6 - 5

ಟ್ರೋಫಿಯೊಂದಿಗೆ ಎಮಾ ರಡುಕಾನು ಸಂತಸ– ಎಎಫ್‌ಪಿ ಚಿತ್ರ

ಮುಂದೂಡಿದ ಟೆಸ್ಟ್: ಆತಂಕದಲ್ಲಿ ಆ್ಯಶಸ್ ಸರಣಿ

ಮ್ಯಾಂಚೆಸ್ಟರ್/ಲಂಡನ್ (ಎಎಫ್‌ಪಿ/ಪಿಟಿಐ): ಭಾರತ ಮತ್ತು ಇಂಗ್ಲೆಂಡ್ ನಡುವಿನ ಕೊನೆಯ ಟೆಸ್ಟ್ ಪಂದ್ಯವನ್ನು ಮುಂದೂಡಿದ್ದರಿಂದಾಗಿ ಇದೀಗ ಆ್ಯಶಸ್ ಸರಣಿ ಮೇಲೆಯೂ ಆತಂಕ ಛಾಯೆ ಮೂಡಿದೆ.

ಭಾರತ ತಂಡದ ಮುಖ್ಯ ಕೋಚ್ ರವಿಶಾಸ್ತ್ರಿ ಸೇರಿದಂತೆ ಸಿಬ್ಬಂದಿಯಲ್ಲಿ ಕೋವಿಡ್ ಸೋಂಕು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಐದನೇ ಮತ್ತು ಅಂತಿಮ ಟೆಸ್ಟ್ ಪಂದ್ಯವನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಲಾಗಿದೆ. ಈ ಪಂದ್ಯವನ್ನು ಯಾವಾಗ ಆಯೋಜಿಸಬೇಕು ಎಂಬುದರ ಬಗ್ಗೆ ಚರ್ಚೆಗಳು ನಡೆಯುತ್ತಿದೆ. ಇದೇ ವೇಳೆ ಆಸ್ಟ್ರೇಲಿಯಾದಲ್ಲಿ ಸದ್ಯ ಇರುವ ಕೋವಿಡ್ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಇಂಗ್ಲೆಂಡ್ ಆಟಗಾರರು ಆತಂಕ ವ್ಯಕ್ತಪಡಿಸಿದ್ದಾರೆ.

ಸರಣಿಯನ್ನು ಮುಂದೂಡುವುದರ ಬಗ್ಗೆ ಯೋಚನೆ ಮಾಡಿಲ್ಲ ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ಹೇಳಿದೆಯಾದರೂ ಸರಣಿ ಆರಂಭವಾಗುವ ಸಂದರ್ಭದಲ್ಲಿ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಹೇಳಲಾಗದು ಎನ್ನಲಾಗುತ್ತಿದೆ.

ಪಂದ್ಯಕ್ಕೆ ಸರಣಿಯ ಸಂಬಂಧವಿಲ್ಲ? ಮುಂದೂಡಲಾದ ಭಾರತ–ಇಂಗ್ಲೆಂಡ್ ನಡುವಿನ ಪಂದ್ಯವನ್ನು ಸರಣಿಯ ಜೊತೆ ಸೇರಿಸದೆ ಸ್ವತಂತ್ರ ಪಂದ್ಯವನ್ನಾಗಿ ಆಯೋಜಿಸುವ ಸಾಧ್ಯತೆ ಇದೆ ಎನ್ನಲಾಗಿದೆ. ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಗೆ ಈ ಕುರಿತು ಪತ್ರ ಬರೆಯಲಾಗಿದೆ ಎಂದು ಇಸಿಬಿ ತಿಳಿಸಿದೆ.

19ರಿಂದ ಯುಎಇಯಲ್ಲಿ ಐಪಿಎಲ್ ಕ್ರಿಕೆಟ್ ಟೂರ್ನಿ

ದುಬೈಗೆ ಡೆಲ್ಲಿ ಕ್ಯಾಪಿಟಲ್ಸ್ ಆಟಗಾರರು

ದುಬೈ (ಪಿಟಿಐ): ಡೆಲ್ಲಿ ಕ್ಯಾಪಿಟಲ್ಸ್ ತಂಡದಲ್ಲಿ ಆಡುವ ಭಾರತದ ಆಟಗಾರರು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಪಾಲ್ಗೊಳ್ಳಲು ಭಾನುವಾರ ದುಬೈಗೆ ಬಂದಿಳಿದರು. ಇಂಗ್ಲೆಂಡ್ ವಿರುದ್ಧದ ಸರಣಿಯಲ್ಲಿ ಈ ಆಟಗಾರರು ಭಾರತ ತಂಡದಲ್ಲಿದ್ದರು.

ಹೋದ ಏಪ್ರಿಲ್–ಮೇ ನಲ್ಲಿ ಐಪಿಎಲ್ ಟೂರ್ನಿಯ ಮೊದಲ ಹಂತವು ಭಾರತದಲ್ಲಿಯೇ ಆಯೋಜನೆಗೊಂಡಿತ್ತು. ಆದರೆ ಬಯೋಬಬಲ್ ವ್ಯವಸ್ಥೆಯಲ್ಲಿಯೇ ಕೊರೊನಾ ಸೋಂಕು ಹರಡಿ, ಕೆಲವು ಆಟಗಾರರು ಸೋಂಕಿತರಾಗಿದ್ದರು. ಅದರಿಂದಾಗಿ ಟೂರ್ನಿಯನ್ನು ಸ್ಥಗಿತಗೊಳಿಸಲಾಗಿತ್ತು. ಈಗ ಎರಡನೇ ಹಂತವು ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ (ಯುಎಇ) ಇದೇ 19ರಿಂದ ನಡೆಯಲಿದೆ.

‘ದುಬೈಗೆ ತಲುಪಿದ ರಿಷಭ್ ಪಂತ್, ರವಿಚಂದ್ರನ್ ಅಶ್ವಿನ್, ಅಜಿಂಕ್ಯ ರಹಾನೆ, ಇಶಾಂತ್ ಶರ್ಮಾ, ಅಕ್ಷರ್ ಪಟೇಲ್, ಪೃಥ್ವಿ ಶಾ ಮತ್ತು ಉಮೇಶ್ ಯಾದವ್ ಕೋವಿಡ್ ಪರೀಕ್ಷೆಗಳಿಗೆ ಒಳಗಾಗಿದ್ದಾರೆ. ಎಲ್ಲ ಆಟಗಾರರು ನಿಯಮಗಳ ಅನ್ವಯ ಆರು ದಿನಗಳ ಕ್ವಾರಂಟೈನ್‌ಗೆ ಒಳಗಾಗುವರು. ಈ ಅವಧಿಯಲ್ಲಿ ಮೂರು ಬಾರಿ ಅವರು ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲಿದ್ದಾರೆ’ ಎಂದು ಡೆಲ್ಲಿ ಕ್ಯಾಪಿಟಲ್ಸ್ ಫ್ರಾಂಚೈಸ್ ತಿಳಿಸಿದೆ.

ಕ್ವಾರಂಟೈನ್ ಬಳಿಕ ಈಗಾಗಲೇ ದುಬೈನಲ್ಲಿ ಇರುವ ತಂಡದ ಇನ್ನುಳಿದ ಆಟಗಾರರನ್ನು ಸೇರಿಕೊಳ್ಳಲಿದ್ದಾರೆ. ಕಳೆದ ಆವೃತ್ತಿಯ ಐಪಿಎಲ್ ಟೂರ್ನಿಯಲ್ಲಿ ಡೆಲ್ಲಿ ತಂಡವು ಮುಂಬೈ ಇಂಡಿಯನ್ಸ್ ಎದುರು ಸೋತು ರನ್ನರ್ ಅಪ್ ಆಗಿತ್ತು.



ಆರ್. ಅಶ್ವಿನ್– ಡೆಲ್ಲಿ ಕ್ಯಾಪಿಟಲ್ಸ್ ಟ್ವಿಟರ್ ಚಿತ್ರ

‘ಶ್ರೇಯಸ್ ಮರಳಿದ್ದರಿಂದ ತಂಡದ ಬಲ ವೃದ್ಧಿ’

ನಾಯಕ ಶ್ರೇಯಸ್ ಅಯ್ಯರ್ ಅವರು ಮರಳಿದ್ದರಿಂದ ತಂಡದ ಬಲ ವೃದ್ಧಿಸಿದ್ದು, ಈ ಬಾರಿಯ ಟೂರ್ನಿಯಲ್ಲಿ ಭರ್ಜರಿ ಆರಂಭದ ನಿರೀಕ್ಷೆಯಲ್ಲಿದ್ದೇವೆ ಎಂದು ಡೆಲ್ಲಿ ಕ್ಯಾಪಿಟಲ್ಸ್ ತಂಡದ ಆಟಗಾರ ಶಿಖರ್ ಧವನ್ ಹೇಳಿದ್ದಾರೆ.

‘ಟೂರ್ನಿಯ ಮೊದಲಾರ್ಧದಲ್ಲಿ ನಾವು ಲಯದಲ್ಲಿದ್ದೆವು. ಟೂರ್ನಿ ಸ್ಥಗಿತಗೊಳಿಸಿದ ನಂತರ ಆ ಲಯ ಕಳೆದುಹೋಗಿತ್ತು. ಆ ಬಲವನ್ನು ಮರಳಿ ಪಡೆಯಬೇಕಿದೆ’ ಎಂದು ಧವನ್ ಫ್ರಾಂಚೈಸ್‌ನ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾರ್ಚ್‌ನಲ್ಲಿ ಭಾರತ ಮತ್ತು ಇಂಗ್ಲೆಂಡ್ ನಡುವಿನ ಮೊದಲ ಏಕದಿನ ಪಂದ್ಯದ ವೇಳೆ ಗಾಯಗೊಂಡಿದ್ದ ಶ್ರೇಯಸ್, ಐಪಿಎಲ್‌ನ ಮೊದಲಾರ್ಧದಲ್ಲಿ ಆಡಿರಲಿಲ್ಲ.

ಗವರ್ನರ್ಸ್ ಕಪ್ ಗಾಲ್ಫ್ ಟೂರ್ನಿ: ವೃಶಾಂಕ್‌ಗೆ ಪ್ರಶಸ್ತಿ

ಬೆಂಗಳೂರು: ಉತ್ತಮ ಸಾಮರ್ಥ್ಯ ತೋರಿದ ವೃಶಾಂಕ್ ಬಾಲು ಅವರು ಗಗನ್ ವಿನೋದ್ ಅವರನ್ನು ಹಿಂದಿಕ್ಕಿ ಗವರ್ನರ್ಸ್ ಕಪ್ ಗಾಲ್ಫ್ ಟೂರ್ನಿಯಲ್ಲಿ ಪ್ರಶಸ್ತಿಯನ್ನು ಜಯಿಸಿದ್ದಾರೆ.

ಬೆಂಗಳೂರು ಗಾಲ್ಫ್ ಅಂಗಣದಲ್ಲಿ ನಡೆದ ಟೂರ್ನಿಯಲ್ಲಿ ಗಗನ್ ರನ್ನರ್‌ಅಪ್ ಸ್ಥಾನವನ್ನು ತಮ್ಮದಾಗಿಸಿಕೊಂಡರು.

ಬೆಂಗಳೂರಿನಲ್ಲಿ ಮಹಿಳಾ ಹಾಕಿ ಶಿಬಿರ ಇಂದಿನಿಂದ

ಬೆಂಗಳೂರು: ಭಾರತ ಮಹಿಳಾ ಹಾಕಿ ತಂಡದ ರಾಷ್ಟ್ರೀಯ ಶಿಬಿರವು ಸೋಮವಾರ ಇಲ್ಲಿ ಆರಂಭವಾಗಲಿದೆ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿದ ತಂಡದ ಸದಸ್ಯರು ಸೇರಿದಂತೆ 25 ಮಂದಿಯನ್ನು ಹಾಕಿ ಇಂಡಿಯಾ ಶಿಬಿರಕ್ಕೆ ಆಯ್ಕೆ ಮಾಡಿದೆ.

‘ಬೆಂಗಳೂರಿನಲ್ಲಿರುವ ಭಾರತ ಕ್ರೀಡಾ ಪ್ರಾಧಿಕಾರದ (ಸಾಯ್) ಆವರಣದಲ್ಲಿ ರಾಷ್ಟ್ರೀಯ ಶಿಬಿರವು ಅಕ್ಟೋಬರ್ 20ರವರೆಗೆ ನಡೆಯಲಿದೆ’ ಎಂದು ಹಾಕಿ ಇಂಡಿಯಾ ಪ್ರಕಟಣೆಯಲ್ಲಿ ತಿಳಿಸಿದೆ.

ರಾಣಿ ರಾಂಪಾಲ್

25 ಮಂದಿಯ ತಂಡದಲ್ಲಿ ಗಗನದೀಪ್ ಕೌರ್, ಮರಿಯಾನಾ ಕುಜುರ್, ಸುಮನ್ ದೇವಿ ತೌಡಮ್ ಮತ್ತು ಚೌಧರಿ ಇದ್ದು, ಇವರು ಜೂನಿಯರ್ ಹಂತದಿಂದ ಇವರು ಸೀನಿಯರ್ ತಂಡಕ್ಕೆ ಬಡ್ತಿ ಪಡೆದಿದ್ದಾರೆ.

ಅನುಭವಿ ಆಟಗಾರ್ತಿ ಲಿಲಿಮಾ ಮಿನ್ಜ್, ರಶ್ಮಿತಾ ಮಿನ್ಜ್, ಜ್ಯೋತಿ, ರಾಜ್ವಿಂದರ್ ಕೌರ್ ಮತ್ತು ಮನ್‌ಪ್ರೀತ್ ಕೌರ್ ಕೂಡ ಸ್ಥಾನ ಗಿಟ್ಟಿಸಿದ್ದಾರೆ

ಒಲಿಂಪಿಕ್ಸ್ ತಂಡದಲ್ಲಿದ್ದ ಸಲೀಮಾ ಟೆಟೆ, ಲಾಲ್‌ರೆಮ್ಸಿಯಾಮಿ, ಶರ್ಮಿಳಾ ಅವರು ಸಾಯ್ ಆವರಣದಲ್ಲೇ ನಡೆಯುತ್ತಿರುವ ಭಾರತ ಜೂನಿಯರ್ ತಂಡದ ತರಬೇತಿ ಶಿಬಿರದಲ್ಲಿ ಪಾಲ್ಗೊಳ್ಳಲಿದ್ದಾರೆ. ಜೂನಿಯರ್ ತಂಡವು ದಕ್ಷಿಣ ಆಫ್ರಿಕಾದಲ್ಲಿ ಈ ವರ್ಷದ ಕೊನೆಯಲ್ಲಿ ನಡೆಯಲಿರುವ ಎಫ್‌ಐಎಚ್ ಜೂನಿಯರ್ ಮಹಿಳಾ ವಿಶ್ವಕಪ್‌ಗೆ ತಯಾರಿ ನಡೆಸುತ್ತಿದೆ.

ಶಿಬಿರಕ್ಕೆ ಆಯ್ಕೆಯಾದವರು: ಸವಿತಾ, ರಜನಿ ಎತಿಮರ್ಪು, ದೀಪ್ ಗ್ರೇಸ್ ಎಕ್ಕಾ, ರೀನಾ ಖೋಖರ್, ಮನ್‌ಪ್ರೀತ್ ಕೌರ್, ಗುರ್ಜಿತ್ ಕೌರ್, ನಿಶಾ, ನಿಕ್ಕಿ ಪ್ರಧಾನ್, ಮೋನಿಕಾ, ನೇಹಾ, ಲಿಲಿಮಾ ಮಿನ್ಜ್, ಸುಶೀಲಾ ಚಾನು ಪುಕ್ರಂಬಮ್, ನಮಿತಾ ಟೊಪ್ಪೊ, ರಾಣಿ ರಾಂಪಾಲ್, ವಂದನಾ ಕಟಾರಿಯಾ, ನವಜೋತ್ ಕೌರ್, ನವನೀತ್ ಕೌರ್, ರಾಜ್ವಿಂದರ್ ಕೌರ್, ಉದಿತಾ, ರಶ್ಮಿತಾ ಮಿನ್ಜ್, ಜ್ಯೋತಿ, ಗಗನದೀಪ್ ಕೌರ್, ಮರಿಯಾನಾ ಕುಜೂರ್, ಸುಮನ್ ದೇವಿ ತೌಡಮ್, ಮಹಿಮಾ ಚೌಧರಿ.

ಟಿಟಿ: ಆಯುಷಿ, ಮೋಹನೀಶ್‌ಗೆ ಪ್ರಶಸ್ತಿ

ಬೆಂಗಳೂರು: ಉತ್ತಮ ಸಾಮರ್ಥ್ಯ ತೋರಿದ ಆಯುಷಿ ಬಾಲಕೃಷ್ಣ ಗೋಡ್ಸೆ ಹಾಗೂ ಮೋಹನೀಶ್ ನಂದಿ ನಾರಾ ಅವರು ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಕೆಡೆಟ್ ಬಾಲಕಿಯರ ಮತ್ತು ಬಾಲಕರ ವಿಭಾಗಗಳಲ್ಲಿ ಭಾನುವಾರ ಪ್ರಶಸ್ತಿ ಜಯಿಸಿದರು.

ಬಾಲಕಿಯರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಆಯುಷಿ 11-9, 11-5, 9-11, 11-9ರಿಂದ ಕೈರಾ ಬಾಳಿಗಾ ಎದುರು ಗೆದ್ದು ಬೀಗಿದರು. ಸೆಮಿಫೈನಲ್‌ನಲ್ಲಿ ಅವರು 11-5,11-9,6-11,11-4ರಿಂದ ವೃಶಾಲಿ ಕಿಣಿ ಅವರನ್ನು ಸೋಲಿಸಿದ್ದರು. ಬಾಲಕರ ಸಿಂಗಲ್ಸ್ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಮೋಹನೀಶ್ 11- 9, 11-9,6 -11, 9 -11, 11-7ರಿಂದ ತೇಶುಭ್ ದಿನೇಶ್ ಅವರನ್ನು ಸೋಲಿಸಿದರು. ನಾಲ್ಕರ ಘಟ್ಟದ ಪಂದ್ಯದಲ್ಲಿ ಮೋಹನೀಶ್ 11-8, 11-7, 14 -16, 11-4ರಿಂದ ಶೇಷನಾಥ್ ಅವರನ್ನು ಸೋಲಿಸಿದ್ದರು.

ಪ್ರಶಸ್ತಿಯೊಂದಿಗೆ ಆಯುಷಿ ಗೋಡ್ಸೆ (ಎಡ) ಹಾಗೂ ಮೋಹನೀಶ್ ನಂದಿ ನಾರಾ

ಎಂಎಫ್: ಲಾಭಕ್ಕೆ ‘ಪಂಚ’ ಸೂತ್ರ

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಯಾವುದೇ ಹೂಡಿಕೆಯಿರಲಿ ಕಲಿಕೆಯ ಅಡಿಪಾಯವಿದ್ದಾಗ ಮಾತ್ರ ಗಳಿಕೆಯ ಲಾಭ ಪಡೆಯಬಹುದು. ಹೌದು ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ ಮಾಡಿ ಲಾಭ ಗಳಿಸಬೇಕು ಅಂದ್ರೆ ಕೆಲ ಲೆಕ್ಕಾಚಾರಗಳನ್ನು ಅರ್ಥ ಮಾಡಿಕೊಳ್ಳುವುದು ಬಹಳ ಮುಖ್ಯ. ಹೂಡಿಕೆಗೂ ಮುನ್ನ, ನಿರ್ದಿಷ್ಟ ಮ್ಯೂಚುಯಲ್ ಫಂಡ್‌ನ ವಿವಿಧ ಅನುಪಾತಗಳು ಎಷ್ಟರಮಟ್ಟಿಗೆ ಉತ್ತಮವಾಗಿವೆ? ಮಾರುಕಟ್ಟೆ ಲಾಭಾಂಶಕ್ಕೆ ಹೋಲಿಕೆ ಮಾಡಿ ನೋಡಿದಾಗ ಆ ಫಂಡ್ ಎಷ್ಟು ಲಾಭಾಂಶ ಕೊಟ್ಟಿದೆ? ಹೀಗೆ ಹತ್ತಾರು ಲೆಕ್ಕಾಚಾರಗಳನ್ನು ಗಮನಿಸಿಕೊಳ್ಳುವುದು ಬಹಳ ಮುಖ್ಯ.

1) ಸ್ಟ್ಯಾಂಡರ್ಡ್ ಡೀವಿಯೇಷನ್(ಪ್ರಮಾಣಿತ ವಿಚಲನ): ನಿರ್ದಿಷ್ಟ ಮ್ಯೂಚುಯಲ್ ಫಂಡ್, ಹೂಡಿಕೆದಾರರಿಗೆ ಎಷ್ಟು ಲಾಭದ ಸ್ಥಿರತೆ ಒದಗಿಸಿದೆ ಎನ್ನುವುದನ್ನು ಅಳೆಯುವ ಸಾಧನವೇ ಪ್ರಮಾಣಿತ ವಿಚಲನ.

ಉದಾಹರಣೆಗೆ ‘ಎ’ ಎನ್ನುವ ಮ್ಯೂಚುಯಲ್ ಫಂಡ್ ಮೊದಲ ವರ್ಷದಲ್ಲಿ ಶೇ 13 ರಷ್ಟು, ಎರಡನೇ ವರ್ಷದಲ್ಲಿ ಶೇ -7 ರಷ್ಟು ಮತ್ತು ಮೂರನೇ ವರ್ಷದಲ್ಲಿ ಶೇ 25 ರಷ್ಟು ಲಾಭಾಂಶ ಕೊಟ್ಟಿದೆ ಎಂದು ಭಾವಿಸಿ. ‘ಬಿ’ ಎನ್ನುವ ಮ್ಯೂಚುಯಲ್ ಫಂಡ್ ಮೊದಲ ವರ್ಷದಲ್ಲಿ ಶೇ 10 ರಷ್ಟು, ಎರಡನೇ ವರ್ಷದಲ್ಲಿ ಶೇ 9 ರಷ್ಟು ಮತ್ತು ಮೂರನೇ ವರ್ಷದಲ್ಲಿ ಶೇ 12 ರಷ್ಟು ಲಾಭಾಂಶ ಕೊಟ್ಟಿದೆ ಎಂದುಕೊಳ್ಳಿ. ಈ ಎರಡು ಉದಾಹರಣೆಗಳನ್ನು ತೆಗೆದುಕೊಂಡಾಗ ‘ಬಿ’ ಮ್ಯೂಚುಯಲ್ ಫಂಡ್‌ನಲ್ಲಿ ಹೆಚ್ಚು ಸ್ಥಿರತೆ ಇರುವುದು ತಿಳಿಯುತ್ತದೆ. ಮ್ಯೂಚುಯಲ್ ಫಂಡ್ ಹೂಡಿಕೆ ವೇಳೆ ಹೆಚ್ಚು ರಿಸ್ಕ್ ತೆಗೆದುಕೊಳ್ಳಲು ಸಿದ್ಧವಿಲ್ಲ ಎನ್ನುವ ಹೂಡಿಕೆದಾರರು ಕಡಿಮೆ ಪ್ರಮಾಣಿತ ವಿಚಲನ ಇರುವ ಫಂಡ್‌ಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಹೆಚ್ಚು ರಿಸ್ಕ್ ತೆಗೆದುಕೊಳ್ಳುತ್ತೇವೆ ಎನ್ನುವವರು ಹೆಚ್ಚು ಪ್ರಮಾಣಿತ ವಿಚಲನ ಇರುವ ಫಂಡ್‌ಗಳನ್ನು ಪರಿಗಣಿಸಬಹುದು.

2) ಆಲ್ಫಾ: ಹಣಕಾಸು ಮಾರುಕಟ್ಟೆಯಲ್ಲಿ, ಸಾಮಾನ್ಯವಾಗಿ ಬಳಸುವ ಪ್ರಮುಖ ಮಾನದಂಡ ಆಲ್ಫಾ. ಷೇರು ಮಾರುಕಟ್ಟೆಯಲ್ಲಿ ಮ್ಯೂಚುವಲ್ ಫಂಡ್‌ನ ಕಾರ್ಯಕ್ಷಮತೆಯನ್ನು ಇದು ಪ್ರಮಾಣೀಕರಿಸುತ್ತದೆ. ಸಂವೇದಿ ಸೂಚ್ಯಂಕದ ಬೆಳವಣಿಗೆಗೆ ಹೋಲಿಸಿದಾಗ ಮ್ಯೂಚುಯಲ್ ಫಂಡ್ ಅನ್ನು ಲಾಭದಾಯಕವಾಗಿಸುವಲ್ಲಿ ಫಂಡ್ ಮ್ಯಾನೇಜರ್ ತೋರಿರುವ ಕಾರ್ಯಕ್ಷಮತೆಯನ್ನು ಆಲ್ಫಾ ಪ್ರತಿನಿಧಿಸುತ್ತದೆ. ಉದಾಹರಣೆಗೆ ಮಾರುಕಟ್ಟೆಯಿಂದ ಶೇ 10 ರಷ್ಟು ಲಾಭಾಂಶ ನಿರೀಕ್ಷೆ ಮಾಡಲಾಗಿತ್ತು ಎಂದು ಭಾವಿಸಿ. ಫಂಡ್ ಮ್ಯಾನೇಜರ್ ಶೇ 13 ರಷ್ಟು ಲಾಭಾಂಶ ತಂದುಕೊಟ್ಟರು ಎಂದುಕೊಳ್ಳಿ. ಆಗ (ಗಳಿಸಿರುವ ಲಾಭಾಂಶ ಮೈನಸ್ ನಿರೀಕ್ಷಿತ ಲಾಭಾಂಶ ಅಂದರೆ 13-10 = 3) ಆಲ್ಫಾ 3 ಎಂದಾಗುತ್ತದೆ.

ಉದಾಹರಣೆಗೆ ಮತ್ತೊಂದು ಮ್ಯೂಚುಯಲ್ ಫಂಡ್ ಒಂದರ ಆಲ್ಫಾ ಶೇ 2 ಎಂದು ಭಾವಿಸಿ, ಅಂದರೆ ಮಾರುಕಟ್ಟೆಗಿಂತ ಈ ಫಂಡ್ ಶೇ 2 ರಷ್ಟು ಉತ್ತಮ ಫಲಿತಾಂಶ ಕೊಟ್ಟಿದೆ ಎಂದು ಅರ್ಥ. ಒಂದೊಮ್ಮೆ ಮ್ಯೂಚುಯಲ್ ಫಂಡ್ ಒಂದರ ಆಲ್ಫಾ ಶೇ -2 ಎಂದುಕೊಳ್ಳಿ. ಆಗ ಆ ಮ್ಯೂಚುಯಲ್ ಫಂಡ್ ಮಾರುಕಟ್ಟೆಗಿಂತ ಶೇ 2 ರಷ್ಟು ಕಡಿಮೆ ಲಾಭ ಕೊಟ್ಟಿದೆ ಎಂದು ಅರ್ಥೈಸಿಕೊಳ್ಳಬೇಕು. ಸರಳವಾಗಿ ಹೇಳುವುದಾದರೆ ಆಲ್ಫಾ ಹೆಚ್ಚಿಗೆಯಿದ್ದಷ್ಟೂ ಹೂಡಿಕೆದಾರನಿಗೆ ಒಳ್ಳೆಯದು.

3) ಟ್ರೇನೋರ್ ರೇಶಿಯೋ (ಅನುಪಾತ): ನೀವು ಹೂಡಿಕೆಯಲ್ಲಿ ಎಷ್ಟು ರಿಸ್ಕ್ ತೆಗೆದುಕೊಳ್ಳುತ್ತಿದ್ದೀರಿ, ಅದಕ್ಕೆ ಎಷ್ಟು ಲಾಭಾಂಶ ಸಿಗುತ್ತಿದೆ ಎನ್ನುವುದರ ನಡುವಿನ ಸಂಬಂಧವನ್ನು ಟ್ರೇನೋರ್ ರೇಶಿಯೋ ಎನ್ನಬಹುದು. ಹೂಡಿಕೆದಾರರಿಗೆ ಪರಿಹಾರ ನೀಡುವಲ್ಲಿ ಹೂಡಿಕೆಯ ಯಶಸ್ಸು ಎಷ್ಟು ಎನ್ನುವುದನ್ನು ಇದು ತಿಳಿಸಿಕೊಡುತ್ತದೆ. ಅಮೆರಿಕದ ಅರ್ಥಶಾಸ್ತ್ರಜ್ಞ ಜಾಕ್ ಟ್ರೇನೋರ್ ಅನುಪಾತವನ್ನು ಕೊಟ್ಟಿದ್ದಾರೆ. ಹೂಡಿಕೆ ಮಾಡುವಾಗ ಟ್ರೇನೋರ್ ಅನುಪಾತ ಹೆಚ್ಚಿಗೆ ಇರುವ ಮ್ಯೂಚುಯಲ್ ಫಂಡ್‌ಗಳನ್ನು ಪರಿಗಣಿಸಬೇಕು.

4) ಶಾರ್ಪೇ ರೇಶಿಯೋ: ಮ್ಯೂಚುಯಲ್ ಫಂಡ್‌ನ ಅಪಾಯ-ಹೊಂದಾಣಿಕೆಯ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡಲು ಶಾರ್ಪೇ ರೇಶಿಯೋ ಬಳಸಲಾಗುತ್ತದೆ. ಮೂಲಭೂತವಾಗಿ, ಈ ಅನುಪಾತವು ಹೆಚ್ಚು ರಿಸ್ಕ್ ಇರುವ ಹೂಡಿಕೆಗಳನ್ನು ಹೊಂದಿರುವಾಗ ಹೂಡಿಕೆದಾರರು ಎಷ್ಟು ಹೆಚ್ಚುವರಿ ಆದಾಯ ಪಡೆಯುತ್ತಾರೆ ಎಂದು ಹೇಳುತ್ತದೆ. ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದ ನೊಬೆಲ್ ಪ್ರಶಸ್ತಿ ವಿಜೇತ ಮತ್ತು ಹಣಕಾಸು ವಿಭಾಗದ ಪ್ರಾಧ್ಯಾಪಕ ವಿಲಿಯಂ ಎಫ್ ಶಾರ್ಪ್ ಅವರ ಹೆಸರನ್ನು ಈ ಕ್ರಮಕ್ಕೆ ಇಡಲಾಗಿದೆ. ಶಾರ್ಪೇ ರೇಶಿಯೋ ಹೆಚ್ಚಿಗೆ ಹೊಂದಿರುವ ಮ್ಯೂಚುಯಲ್ ಫಂಡ್ ಆಯ್ಕೆ ಉತ್ತಮ.

5) ವೆಚ್ಚ ಅನುಪಾತ (ಎಕ್ಸ್‌ಪೆನ್ಸ್ ರೇಶಿಯೋ): ನೀವು ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ ಮಾಡಿದಾಗ ಅದರ ನಿರ್ವಹಣೆಗೆ ಮ್ಯೂಚುಯಲ್ ಫಂಡ್ ಸಂಸ್ಥೆ ವೆಚ್ಚಗಳನ್ನು ಮಾಡಬೇಕಾಗುತ್ತದೆ. ನಿರ್ವಹಣಾ ಶುಲ್ಕ, ಏಜೆಂಟ್ ಶುಲ್ಕ, ನೋಂದಣಿ ಶುಲ್ಕ, ಲೆಕ್ಕಪರಿಶೋಧನೆ ಶುಲ್ಕ, ಜಾಹೀರಾತು ಶುಲ್ಕ ಹೀಗೆ ಹಲವು ವೆಚ್ಚಗಳನ್ನು ಫಂಡ್ ಹೌಸ್ ಹೊರಬೇಕಾಗುತ್ತದೆ. ಈ ವೆಚ್ಚಗಳನ್ನು ನಿಭಾಯಿಸಲು ಹೂಡಿಕೆದಾರರಿಂದ ಪಡೆಯುವ ವಾರ್ಷಿಕ ಶುಲ್ಕವೇ ವೆಚ್ಚ ಅನುಪಾತ. ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಪ್ರತಿ ಮಾದರಿಯ ಮ್ಯೂಚುಯಲ್ ಫಂಡ್‌ಗೂ ಗರಿಷ್ಠ ವೆಚ್ಚ ಮಿತಿ ನಿಗದಿಪಡಿಸಿದೆ. ಈಕ್ವಿಟಿ ಫಂಡ್ ಆದರೆ ಶೇ 2.5, ಡೆಟ್ ಫಂಡ್ ಆದರೆ ಶೇ 2.25 ಮತ್ತು ಇಂಡೆಕ್ಸ್ ಫಂಡ್ ಆದರೆ ಶೇ 1.5 ರ ವರೆಗೆ ಶುಲ್ಕ ವಿಧಿಸಬಹುದು. ವೆಚ್ಚ ಅನುಪಾತ ಎಷ್ಟು ಕಡಿಮೆ ಇರುತ್ತದೋ ಹೂಡಿಕೆದಾರನಿಗೆ ಅಷ್ಟು ಲಾಭ.

(ಲೇಖಕ: ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಯಥಾಸ್ಥಿತಿಯಲ್ಲಿ ಸೂಚ್ಯಂಕಗಳು

ಸೆಪ್ಟೆಂಬರ್ 9ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಅಲ್ಪ ಮೊತ್ತದ ಗಳಿಕೆಯೊಂದಿಗೆ ವಹಿವಾಟು ಪೂರ್ಣಗೊಳಿಸಿವೆ. 58,305 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ಮತ್ತು 17,369 ಅಂಶಗಳಲ್ಲಿ ವಹಿವಾಟು ಮುಗಿಸಿದ ನಿಫ್ಟಿ ವಾರದ ಅವಧಿಯಲ್ಲಿ ಶೇ 0.30 ರಷ್ಟು ಮಾತ್ರ ಗಳಿಕೆ ಕಂಡಿವೆ. ನಿಫ್ಟಿಯಲ್ಲಿರುವ 25 ಕಂಪನಿಗಳು ಈ ವಾರ ನಕಾರಾತ್ಮಕ ಫಲಿತಾಂಶ ಕೊಟ್ಟಿವೆ.

ಜಾಗತಿಕ ವಿದ್ಯಮಾನಗಳು, ಷೇರುಪೇಟೆಯಲ್ಲಿ ಲಾಭ ಗಳಿಕೆಗಾಗಿ ಮಾರಾಟದ ಒತ್ತಡ, ದೇಶಿಯವಾಗಿ ಮಾರುಕಟ್ಟೆಗೆ ಪುಷ್ಟಿ ಕೊಡುವಂತಹ ಯಾವುದೇ ಬೆಳವಣಿಗೆಗಳು ಆಗದಿರುವುದು ಸೇರಿ ಇನ್ನು ಕೆಲ ಅಂಶಗಳು, ಸೂಚ್ಯಂಕಗಳು ಬಹುತೇಕ ಯಥಾಸ್ಥಿತಿಯಲ್ಲಿರಲು ಕಾರಣವಾಗಿವೆ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ಗ್ರಾಸಿಮ್ ಶೇ 1.34, ಏರ್‌ಟೆಲ್ ಶೇ 2.64, ಎಚ್‌ಡಿಎಫ್‌ಸಿ ಶೇ 2.59, ಎಚ್‌ಸಿಎಲ್ ಟೆಕ್ ಶೇ 2.03 ಮತ್ತು ಹಿಂದುಸ್ತಾನ್ ಯುನಿಲಿವರ್ ಶೇ 1.59 ರಷ್ಟು ಗಳಿಸಿವೆ. ಡಿವೀಸ್ ಲ್ಯಾಬ್ಸ್ ಶೇ 2.95, ಎನ್‌ಟಿಪಿಸಿ ಶೇ 2.09, ಸನ್ ಫಾರ್ಮಾ ಶೇ 1.66, ಬಜಾಜ್ ಆಟೋ ಶೇ 1.51 ಮತ್ತು ಟಿಸಿಎಸ್ ಶೇ 1.32 ರಷ್ಟು ಕುಸಿತ ಕಂಡಿವೆ.

ಮುನ್ನೋಟ: ಸದ್ಯ ಷೇರುಪೇಟೆಯಲ್ಲಿ ಗೂಳಿ ಓಟವಿರುವುದು ನಗದು ಲಭ್ಯತೆಯ ಕಾರಣದಿಂದ. ಬ್ಯಾಂಕ್‌ಗಳಲ್ಲಿ ಬಡ್ಡಿದರ ಕಡಿಮೆ ಇರುವುದರಿಂದ ಜಾಗತಿಕವಾಗಿ ಮತ್ತು ದೇಶಿಯವಾಗಿ ಷೇರುಪೇಟೆಗೆ ಹೆಚ್ಚು ಹೂಡಿಕೆ ಹರಿದುಬರುತ್ತಿದೆ. ಈ ಸನ್ನಿವೇಷದಲ್ಲಿ ಕಂಪನಿಗಳ ಆಂತರಿಕ ಮೌಲ್ಯದ ಆಧಾರದಲ್ಲಿ ಷೇರುಗಳ ಬೆಲೆ ಏರಿಕೆಯಾಗುತ್ತಿದೆ ಎಂದು ಹೇಳುವುದು ಕಷ್ಟ. ಸದ್ಯದ ಸ್ಥಿತಿಯಲ್ಲಿ ಷೇರುಪೇಟೆಯಲ್ಲಿ ಅನಿಶ್ಚಿತ ವಾತಾವರಣ ಮುಂದುವರಿಯುವುದರಿಂದ ಅಳೆದು ತೂಗಿ ಆಯ್ದ ಕಂಪನಿಗಳಲ್ಲಷ್ಟೇ ಹೂಡಿಕೆ ಮಾಡುವ ನಿರ್ಧಾರಕ್ಕೆ ಬರುವುದು ಸೂಕ್ತ.

17ರಿಂದ ದಿನಸಿ ಸೇವೆ ಸ್ಥಗಿತ: ಜೊಮ್ಯಾಟೊ

ನವದೆಹಲಿ (ಪಿಟಿಐ): ಜೊಮ್ಯಾಟೊ ಕಂಪನಿಯು ಸೆಪ್ಟೆಂಬರ್ 17ರಿಂದ ದಿನಸಿ ಸಾಮಗ್ರಿಗಳನ್ನು ಮನೆ ಬಾಗಿಲಿಗೆ ತಲುಪಿಸುವ ಸೇವೆಯನ್ನು ಸ್ಥಗಿತಗೊಳಿಸುವುದಾಗಿ ಹೇಳಿದೆ.

ಗ್ರಾಹಕರಿಗೆ ದಿನಸಿ ಸಾಮಗ್ರಿಗಳನ್ನು ಸಮಯಕ್ಕೆ ಸರಿಯಾಗಿ ಪೂರೈಸಲು ಸಾಧ್ಯವಾಗುತ್ತಿಲ್ಲ ಮತ್ತು ಅದು ಗ್ರಾಹಕರಲ್ಲಿ ಅಸಮಾಧಾನ ಮೂಡಿಸುತ್ತಿದೆ ಎನ್ನುವ ಕಾರಣಗಳಿಂದಾಗಿ ಈ ಸೇವೆಯನ್ನು ಸ್ಥಗಿತಗೊಳಿಸಲು ನಿರ್ಧರಿಸಿರುವುದಾಗಿ ಅದು ತಿಳಿಸಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹447

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹250-489
ದ್ವಿತಳಿ (ಬಿ.ವಿ)	₹271-544

ಹಣಕಾಸು ವರ್ಷದ ಎರಡನೇ ತ್ರೈಮಾಸಿಕ : ಫಿಕ್ಕಿ ಸಮೀಕ್ಷೆ

ತಯಾರಿಕೆ ಸುಧಾರಣೆ, ವೆಚ್ಚ ಹೆಚ್ಚಳ

ನವದೆಹಲಿ (ಪಿಟಿಐ): ದೇಶದಲ್ಲಿ ತಯಾರಿಕಾ ವಲಯದ ಚಟುವಟಿಕೆಯು ಪ್ರಸಕ್ತ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದಲ್ಲಿ ಸುಧಾರಿಸಲಿದೆ. ಆದರೆ, ವ್ಯಾಪಾರ ಮತ್ತು ತಯಾರಿಕಾ ವೆಚ್ಚಗಳು ಹೆಚ್ಚುತ್ತಲೇ ಇವೆ ಎಂದು ಭಾರತೀಯ ವಾಣಿಜ್ಯೋದ್ಯಮ ಮಹಾಸಂಘದ (ಫಿಕ್ಕಿ) ಸಮೀಕ್ಷೆಯು ತಿಳಿಸಿದೆ.

2021-22ರ ಏಪ್ರಿಲ್–ಜೂನ್ ಅವಧಿಯಲ್ಲಿ ಮಂದಗತಿಯ ಬೆಳವಣಿಗೆ ಕಂಡಿದ್ದ ವಲಯದ ಚಟುವಟಿಕೆಯು ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಸುಧಾರಿಸಿಕೊಂಡಂತೆ ಕಾಣುತ್ತಿದೆ. ಹೀಗಿದ್ದರೂ, ವ್ಯಾಪಾರ ಮತ್ತು ತಯಾರಿಕಾ ವೆಚ್ಚಗಳು ನಿರಂತರವಾಗಿ ಹೆಚ್ಚಾಗುತ್ತಿವೆ ಎನ್ನುವುದು ಸಮೀಕ್ಷೆಯ ವೇಳೆ ಗಮನಕ್ಕೆ ಬಂದಿದೆ ಎಂದು ಅದು ತಿಳಿಸಿದೆ.

ತಯಾರಿಕೆ ಮೇಲಿನ ವೆಚ್ಚವು ನಿರಂತರವಾಗಿ ಏರಿಕೆಯಾಗುತ್ತಲೇ ಇದೆ ಎಂದು ತಯಾರಿಕೆ ವಲಯದ ಬಹುಪಾಲು ಪ್ರತಿನಿಧಿಗಳು ಹೇಳಿರುವುದಾಗಿ ‘ಫಿಕ್ಕಿ’ ತನ್ನ ಈಚಿನ ಎರಡನೇ ತ್ರೈಮಾಸಿಕ ಸಮೀಕ್ಷೆಯಲ್ಲಿ ತಿಳಿಸಿದೆ.

ಲಾಕ್‌ಡೌನ್‌ನಿಂದಾಗಿ ತಯಾರಿಕಾ ಪ್ರಮಾಣದಲ್ಲಿ ಇಳಿಕೆ, ಸಾಗಣೆ ವೆಚ್ಚದಲ್ಲಿನ ಏರಿಕೆ, ಕಚ್ಚಾ ವಸ್ತುಗಳ ಬೆಲೆ ಏರಿಕೆ, ವಿದ್ಯುತ್ ವೆಚ್ಚ ಮತ್ತು ಹೆಚ್ಚಿನ ಬಡ್ಡಿ ದರಗಳು ಕೂಡ ಉತ್ಪಾದನಾ ವೆಚ್ಚದಲ್ಲಿ ಹೆಚ್ಚಳಕ್ಕೆ ಕಾರಣವಾಗುತ್ತಿವೆ ಎಂದು ಹೇಳಿದೆ.

ವಾರ್ಷಿಕ ವಹಿವಾಟು ಮೊತ್ತವು ₹ 2.7 ಲಕ್ಷ ಕೋಟಿಗಿಂತಲೂ ಹೆಚ್ಚಿಗೆ ಇರುವ ದೊಡ್ಡ, ಸಣ್ಣ ಮತ್ತು ಮಧ್ಯಮ ಗಾತ್ರದ ತಯಾರಿಕಾ ಘಟಕಗಳಿಂದ ಅಭಿಪ್ರಾಯ ಸಂಗ್ರಹಿಸಲಾಗಿದೆ ಎಂದು ಫಿಕ್ಕಿ ತಿಳಿಸಿದೆ

ಎರಡನೇ ತ್ರೈಮಾಸಿಕದಲ್ಲಿ ರಫ್ತು ವ್ಯಾಪಾರವು ಹೆಚ್ಚಾಗಲಿದೆ ಎಂದು ಶೇ 58 ರಷ್ಟು ಕಂಪನಿಗಳು ಹೇಳಿವೆ. ಈ ವಲಯದಲ್ಲಿ ನೇಮಕಾತಿಯು ಮಂದಗತಿಯಲ್ಲಿ ಸಾಗುತ್ತಿದ್ದು, ಮುಂದಿನ ಮೂರು ತಿಂಗಳುಗಳಲ್ಲಿ ಯಾವುದೇ ಹೆಚ್ಚುವರಿ ನೇಮಕಾತಿ ಮಾಡಿಕೊಳ್ಳುವುದಿಲ್ಲ ಎಂದು ಶೇ 68ರಷ್ಟು ಕಂಪನಿಗಳು ಹೇಳಿರುವುದಾಗಿ ಸಮೀಕ್ಷೆಯು ತಿಳಿಸಿದೆ.

ವರ್ಷದಲ್ಲಿ ಸಿಬ್ಬಂದಿ ಸಂಖ್ಯೆ 500ಕ್ಕೆ: ‘ಕೂ’

ನವದೆಹಲಿ (ಪಿಟಿಐ): ಒಂದು ವರ್ಷದಲ್ಲಿ ತನ್ನ ಸಿಬ್ಬಂದಿ ಸಂಖ್ಯೆಯನ್ನು 500ಕ್ಕೆ ಹೆಚ್ಚಿಸಿಕೊಳ್ಳುವ ನಿರೀಕ್ಷೆಯನ್ನು ಹೊಂದಿರುವುದಾಗಿ ದೇಶದ ಮೈಕ್ರೊಬ್ಲಾಗಿಂಗ್ ವೇದಿಕೆ ಆಗಿರುವ ‘ಕೂ’ ಹೇಳಿದೆ.

ಸದ್ಯ 200 ಮಂದಿ ಕೆಲಸ ಮಾಡುತ್ತಿದ್ದು, ಮುಂದಿನ ಒಂದು ವರ್ಷದಲ್ಲಿ ಇವರ ಸಂಖ್ಯೆಯು ಕನಿಷ್ಠ 500ಕ್ಕೆ ತಲುಪಲಿದೆ. ಎಂಜಿನಿಯರಿಂಗ್, ಉತ್ಪನ್ನ ಮತ್ತು ಸಮುದಾಯ ನಿರ್ವಹಣಾ ತಂಡಗಳ ವಿಭಾಗದಲ್ಲಿ ನೇಮಕಾತಿ ಮಾಡಿಕೊಳ್ಳಲಾಗುವುದು ಎಂದು ಕಂಪನಿಯ ಸಹ ಸ್ಥಾಪಕ ಅಪ್ರಮೇಯ ರಾಧಾಕೃಷ್ಣ ಅವರು ಭಾನುವಾರ ತಿಳಿಸಿದ್ದಾರೆ.

‘ಕೂ’ ಬಳಕೆದಾರರ ಸಂಖ್ಯೆಯು ಈಚೆಗಷ್ಟೇ 1 ಕೋಟಿಗೆ ತಲುಪಿದೆ.

ಪ್ರಜಾವಾಣಿ

ಇಷ್ಟ ಕಷ್ಟಗಳ ಅಷ್ಟವಿನಾಯಕ

ಸರ್ವರಿಗೂ ಗಣೇಶ ಹಬ್ಬದ ಶುಭಾಶಯಗಳು, ಈ ಸಂಭ್ರಮದ ಮೆರಗನ್ನು ಹೆಚ್ಚಿಸಲು 4 ದಿನಗಳ ಅಷ್ಟವಿನಾಯಕ ಸ್ಪರ್ಧೆಯಲ್ಲಿ ಪಾಲ್ಗೊಳ್ಳಿ ಹಾಗು ಆಕರ್ಷಕ ಬಹುಮಾನ ಗೆಲ್ಲಿ.

ಪ್ರ 5. ವರದವಿನಾಯಕನ ದೇವಸ್ಥಾನವನ್ನು ಯಾರು, ಯಾವಾಗ ಕಟ್ಟಿದರು?

ಪ್ರ 6. ಚಿಂತಾಮಣಿ ಗಣೇಶನಿರುವ ಥೆಯೂರ್‌ನ ಪ್ರಾಚೀನ ಹೆಸರೇನು?

www.bit.ly/pvastavinayakaಗೆ ಲಾಗಿನ್ ಆಗಿ, ನಿಮ್ಮ ಉತ್ತರವನ್ನು ಹಾಗು ಲಿಂಕ್‌ನಲ್ಲಿ ಕೊಡಲಾಗಿರುವ ಗಣಪನ ಚಿತ್ರಕ್ಕೆ (ಈ 4 ದಿನಗಳಲ್ಲಿ ಒಂದು ಬಾರಿ) ಬಣ್ಣ ತುಂಬಿ ರಾತ್ರಿ 8ರ ಒಳಗೆ ಕಳುಹಿಸಿ.

ಪ್ರ 3. ಉತ್ತರ–ಪಾಲಿ

ಪ್ರ 4. ಉತ್ತರ–ಲೇಣ್ಯಾದ್ರಿ

ಪ್ರತಿದಿನ 10 ಅದೃಷ್ಟಶಾಲಿಗಳಿಗೆ GIFT VOUCHER ₹500/-

ಬೆಳ್ಳಿ ನಾಣ್ಯ 4 ಅದೃಷ್ಟಶಾಲಿಗಳಿಗೆ

*ಷರತ್ತುಗಳು ಅನ್ವಯ.

ಹುಬ್ಬಳ್ಳಿಯಲ್ಲಿ ರಾಜ್ಯಮಟ್ಟದ ಪ್ಯಾರಾ ಶೂಟಿಂಗ್ ಚಾಂಪಿಯನ್‌ಷಿಪ್

ಜ್ಯೋತಿ, ನಾಗೇಂದ್ರ ಚಿನ್ನದ ಸಾಧನೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಮೈಸೂರಿನ ನಾಗೇಂದ್ರ ಎಂ.ಎಸ್ ಮತ್ತು ಹುಬ್ಬಳ್ಳಿಯ ಜ್ಯೋತಿ ಸಣ್ಣಕ್ಕಿ ಅವರು ಕರ್ನಾಟಕ ಶೂಟಿಂಗ್ ಪ್ಯಾರಾ ಸ್ಪೋರ್ಟ್ಸ್ ಸಂಸ್ಥೆ ಭಾನುವಾರ ಆಯೋಜಿಸಿದ್ದ ರಾಜ್ಯಮಟ್ಟದ ಪ್ಯಾರಾ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಪಡೆದರು.

ಪ್ಯಾರಾ ಶೂಟಿಂಗ್ ಸಂಸ್ಥೆ ರಾಜ್ಯ ಅಂಗವಿಕಲರ ಸಂಸ್ಥೆಯ ಮಾನ್ಯತೆ ಪಡೆದ ಬಳಿಕ ನಡೆದ ಮೊದಲ ಟೂರ್ನಿ ಇದಾಗಿತ್ತು. 7 ವಿಭಾಗಗಳಲ್ಲಿ ಸ್ಪರ್ಧೆಗಳು ನಡೆದಿದ್ದು, 25 ಪ್ಯಾರಾ ಶೂಟರ್‌ಗಳು ಪಾಲ್ಗೊಂಡಿದ್ದರು.

ಮಹಿಳೆಯರ ಏರ್ ರೈಫಲ್ ಸ್ಟ್ಯಾಂಡಿಂಗ್ ಎಸ್‌ಎಚ್ 1 ವಿಭಾಗದಲ್ಲಿ ಜ್ಯೋತಿ ಮಾತ್ರ ಭಾಗವಹಿಸಿದ್ದರಿಂದ ಅವರಿಗೆ ಚಿನ್ನದ ಪದಕ ಲಭಿಸಿತು. ಏರ್ ರೈಫಲ್ ಮಿಶ್ರ ಪ್ರೋನ್ ಎಸ್‌ಎಚ್ 1 ವಿಭಾಗದಲ್ಲಿ ಜ್ಯೋತಿ ಒಟ್ಟು 623.5 ಅಂಕಗಳನ್ನು ಗಳಿಸಿ ಎರಡನೇ ಚಿನ್ನ ಗೆದ್ದುಕೊಂಡರು.

ಈ ವಿಭಾಗದ ಬೆಳ್ಳಿ ರಾಕೇಶ ನಿಡಗುಂದಿ (617.4 ಅಂಕ), ಕಂಚು ಶಂಕರಲಿಂಗ ತವಳಿ (610.5) ಪಾಲಾಯಿತು. ಈ ಮೂವರೂ ಪ್ಯಾರಾ ಶೂಟರ್‌ಗಳು ಇಲ್ಲಿನ ಹುಬ್ಬಳ್ಳಿ ಸ್ಪೋರ್ಟ್ಸ್ ಶೂಟಿಂಗ್ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಫಲಿತಾಂಶಗಳು: ಪುರುಷರ ಏರ್ ಪಿಸ್ತೂಲ್ ಎಸ್‌ಎಚ್-1: ನಾಗೇಂದ್ರ ಎಂ.ಎಸ್. (ಮೈಸೂರು, 518 ಅಂಕ)-1, ವೇಣುಗೋಪಾಲ ಜಯಚಂದ್ರ (ಹುಬ್ಬಳ್ಳಿ, 505)-2, ಕೇಶವ ತೆಲಗು (ಹುಬ್ಬಳ್ಳಿ, 474). ಏರ್ ರೈಫಲ್ ಸ್ಟ್ಯಾಂಡಿಂಗ್ ಎಸ್‌ಎಚ್-1: ರಾಕೇಶ ನಿಡಗುಂದಿ (ಹುಬ್ಬಳ್ಳಿ, 556.2)-1, ಶಂಕರಲಿಂಗ ತವಳಿ (ಹುಬ್ಬಳ್ಳಿ, 514.2), ಮೊಹಮ್ಮದ್ ಇಮ್ರಾನ್ (ಹುಬ್ಬಳ್ಳಿ, 476.3)-3. ಓಪನ್ ಸೈಟ್: ನಾಗೇಶ ಜಿ.ಕೆ., (ಹಾಸನ, 270)-1, ಸಂತೋಷ ಎನ್. ಭಾಂಡಗೆ (ಗದಗ,267)-2, ಎಲ್. ನಂಜುಂಡರಾವ್ (ಬೆಂಗಳೂರು, 238)-3. ಮಹಿಳಾ ವಿಭಾಗದ ಓಪನ್ ಸೈಟ್: ಕಮಲಾಕ್ಷ್ಮಿ ಎಸ್.ಡಿ. (ಹಾಸನ, 211)-1, ಸಂಗಮ್ಮ ಬಿ. ಆಲದಗಿಡದ (ಹುಬ್ಬಳ್ಳಿ, 168), ಸುಧಾ ಎ., (ದಾವಣಗೆರೆ, 143)-3.

ಹುಬ್ಬಳ್ಳಿಯಲ್ಲಿ ಭಾನುವಾರ ನಡೆದ ರಾಜ್ಯಮಟ್ಟದ ಪ್ಯಾರಾ ಶೂಟಿಂಗ್ ಟೂರ್ನಿಯಲ್ಲಿ ಪದಕ ಗೆದ್ದವರು ಹಾಗೂ ಅತಿಥಿ. ನಿಂತವರು; ಎಡದಿಂದ: ನಾಗೇಶ ಜಿ.ಕೆ., ಕಮಲಾಕ್ಷ್ಮಿ ಎಸ್‌.ಡಿ, ಸಂತೋಷ ಭಾಂಡಗೆ, ಎಲ್‌. ನಂಜುಂಡರಾವ್‌, ನಾಗೇಂದ್ರ ಎಂ.ಎಸ್‌, ಕೇಶವ ತೆಲಗು, ಮಹಮ್ಮದ್ ಇಮ್ರಾನ್‌, ಜ್ಯೋತಿ ಸಣ್ಣಕ್ಕಿ. ಕುಳಿತವರು; ಸುಧಾ ಎ., ಶಂಕರಲಿಂಗ ತವಳಿ, ಸ್ವರೂಪ್ ಉನಲಕರ್ (ಪ್ಯಾರಾಲಿಂಪಿಯನ್) ರಾಕೇಶ ನಿಡಗುಂದಿ ಹಾಗೂ ಸಂಗಮ್ಮ ಬಿ. ಆಲದಗಿಡದ –ಪ್ರಜಾವಾಣಿ ಚಿತ್ರ

> **ದೃಢ ಮನಸ್ಸು ಮಾಡಿದರೆ ಯಾವುದೂ ಕಷ್ಟವಲ್ಲ. ಮುಂದಿನ ಪ್ಯಾರಾಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದು ನಿಮ್ಮ ಮುಂದೆ ಬರುವೆ**
>
> **ಸ್ವರೂಪ್ ಉನಲಕರ್**
> ಪ್ಯಾರಾಲಿಂಪಿಯನ್

ಅಂಗವಿಕಲರ ಸಂಸ್ಥೆ ಮಾನ್ಯತೆ

ಹುಬ್ಬಳ್ಳಿ: ರಾಜ್ಯದಲ್ಲಿ ಪ್ಯಾರಾ ಶೂಟರ್‌ಗಳಿಗೆ ಉತ್ತೇಜನ ನೀಡಲು ಕರ್ನಾಟಕ ಶೂಟಿಂಗ್ ಪ್ಯಾರಾ ಸ್ಪೋರ್ಟ್ಸ್ ಸಂಸ್ಥೆ ಆರಂಭಿಸಲಾಗಿದೆ. ಇದು ರಾಜ್ಯ ಅಂಗವಿಕಲರ ಸಂಸ್ಥೆಯ ಮಾನ್ಯತೆ ಹೊಂದಿದ್ದು, ಉದ್ಘಾಟನೆ ಭಾನುವಾರ ನೆರವೇರಿತು.

ರಾಜ್ಯ ಅಂಗವಿಕಲರ ಸಂಸ್ಥೆ ಅಧ್ಯಕ್ಷ ಎಂ. ಮಹದೇವ, ಪ್ಯಾರಾ ಶೂಟಿಂಗ್ ಸಂಸ್ಥೆ ಅಧ್ಯಕ್ಷ ಹಾಗೂ ಒಲಿಂಪಿಯನ್ ಪಿ.ಎನ್. ಪ್ರಕಾಶ, ಕಾರ್ಯದರ್ಶಿ ರವಿಚಂದ್ರ ಬಾಲೆಹೊಸೂರ, ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿದ್ದ ಸ್ವರೂಪ್ ಉನಲಕರ್ ಇದ್ದರು.

ಬ್ಲ್ಯಾಕ್ ಮೂನ್ ಎಫ್‌ಸಿ ತಂಡಕ್ಕೆ ಜಯ

ಬೆಂಗಳೂರು: ಬ್ಲ್ಯಾಕ್ ಮೂನ್ ಎಫ್‌ಸಿ ತಂಡದವರು ಇಲ್ಲಿ ನಡೆಯುತ್ತಿರುವ ಬೆಂಗಳೂರು ಪ್ರೊ ಫುಟ್‌ಬಾಲ್ ಲೀಗ್ ಟೂರ್ನಿಯಲ್ಲಿ ಶುಭಾರಂಭ ಮಾಡಿದ್ದಾರೆ. 'ಸಿ' ಡಿವಿಷನ್ ಮತ್ತು ಯೂತ್ ತಂಡಗಳಿಗಾಗಿ ಕೆಎಸ್‌ಎಫ್‌ಎ ಸಹಯೋಗದೊಂದಿಗೆ ಡ್ರೀಮ್ ಟೀಮ್ ಸ್ಪೋರ್ಟ್ಸ್ ಆಯೋಜಿಸಿರುವ ಟೂರ್ನಿಯಲ್ಲಿ ಭಾನುವಾರ 3-1ರಿಂದ ಬೆಂಗಳೂರು ಪ್ಯಾಂಥರ್ಸ್ ಎದುರು ಜಯ ಸಾಧಿಸಿದರು.

ವಿಜೇತ ತಂಡದ ಪರ ರಾಹುಲ್ (47ನೇ ಮತ್ತು 52ನೇ ನಿಮಿಷ) ಎರಡು ಗೋಲು ದಾಖಲಿಸಿದರು. ಕಾರ್ತಿಕ್ (55ನೇ ನಿ.) ಒಂದು ಗೋಲು ಹೊಡೆದರು. ಬೆಂಗಳೂರು ಪ್ಯಾಂಥರ್ಸ್ ತಂಡದ ರಾಜನ್ 26ನೇ ನಿಮಿಷದಲ್ಲಿ ಕಾಲ್ಚಳಕ ತೋರಿದರು.

ಮತ್ತೊಂದು ಪಂದ್ಯದಲ್ಲಿ ಬ್ಲ್ಯಾಕ್ ಪ್ಯಾಂಥರ್ಸ್ ತಂಡವು ಜೇಮ್ಸ್ (40ನೇ ನಿ.) ಗಳಿಸಿದ ಗೋಲಿನ ನೆರವಿನಿಂದ ರೆಬೆಲ್ಸ್ ಫೀನಿಕ್ಸ್ ಎಫ್‌ಸಿಯನ್ನು 1-0ಯಿಂದ ಮಣಿಸಿತು. ಮೈಸೂರು ವಿಜಯನಗರ ಎಫ್‌ಸಿ 1-0ಯಿಂದ ಬೆಂಗಳೂರು ಚಾಂಪ್ಸ್ ಎದುರು ಗೆದ್ದಿತು. ವಿಜೇತ ತಂಡದ ಅಭಿಷೇಕ್ (45ನೇ ನಿ.) ಗೋಲು ಗಳಿಸಿದರು. ಮತ್ತೊಂದು ಪಂದ್ಯದಲ್ಲಿ ರೂಟ್ಸ್ ಎಫ್‌ಸಿ 3-3ರಿಂದ ಸ್ಪೋರ್ಟ್ಸ್ ಸ್ಕೂಲ್ ತಂಡದೊಂದಿಗೆ ಡ್ರಾ ಸಾಧಿಸಿತು. ರೂಟ್ಸ್ ಪರ ಖಲೀಲ್ (21ನೇ ನಿ.), ಶಾಶ್ವತ್ (55ನೇ ನಿ.) ಮತ್ತು ಗಂಭೀರ್ (57ನೇ ನಿ.) ಗೋಲು ಹೊಡೆದರು. ಎದುರಾಳಿ ತಂಡದ ಸ್ವಯಂ ಜೈನ್ (12ನೇ ಮತ್ತು 38ನೇ ನಿ.) ಮತ್ತು ಕುಣಾಲ್ ರಾಘವ್ (60ನೇ ನಿ.) ಕಾಲ್ಚಳಕ ತೋರಿದರು.

ಫುಟ್‌ಬಾಲ್: ಜಯಶ್ರೀ 5 ಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯಶ್ರೀ ಅವರು ಗಳಿಸಿದ ಐದು ಸೊಗಸಾದ ಗೋಲುಗಳ ಬಲದಿಂದ ಯುನೈಟೆಡ್ ಎಫ್‌ಸಿ ಕೊಡಗು ತಂಡವು ಭರ್ಜರಿ ಜಯ ಗಳಿಸಿತು. ಕೆಎಸ್‌ಎಫ್‌ಎ ಸ್ಪೋರ್ಟಿಂಗ್ ಪ್ಲಾನೆಟ್ ಟ್ರೋಫಿ ಮಹಿಳೆಯರ 'ಎ' ಡಿವಿಷನ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಭಾನುವಾರ 6-0 ಗೋಲುಗಳಿಂದ ಯಂಗ್ ಸ್ಟಾರ್ ತಂಡವನ್ನು ಮಣಿಸಿತು.

'ಎ' ಗುಂಪಿನ ಈ ಪಂದ್ಯದಲ್ಲಿ ವಿಜೇತ ತಂಡದ ಪರ ಜಯಶ್ರೀ 13, 18, 22, 27 ಮತ್ತು 36ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ನಿಖಿತಾ (28ನೇ ನಿ.) ಒಂದು ಗೋಲು ದಾಖಲಿಸಿದರು.

ರೌಡಿ ಅರವಿಂದ್ ಹತ್ಯೆ ಹಿನ್ನೆಲೆಯಲ್ಲಿ ರೂಟ್ಸ್ ಎಫ್‌ಸಿ ಮತ್ತು ಜಿಆರ್‌ಕೆ ಎಫ್‌ಸಿ ಪಂದ್ಯವನ್ನು ಮುಂದೂಡಲಾಯಿತು. ಮುಂದಿನ ಸೂಚನೆಯ ವರೆಗೆ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಯಾವ ಪಂದ್ಯವನ್ನೂ ನಡೆಸಲಾಗುವುದಿಲ್ಲ ಎಂದು ತಿಳಿಸಲಾಗಿದೆ.

ಯುನೈಟೆಡ್ ಎಫ್‌ಸಿ ಕೊಡಗು ತಂಡದ ಜಯಶ್ರೀ (ಬಲ) ಚೆಂಡನ್ನು ಗೋಲುಪೆಟ್ಟಿಯತ್ತ ಸಾಗಿಸಿದರು– ಪ್ರಜಾವಾಣಿ ಚಿತ್ರ

ರಾಷ್ಟ್ರೀಯ ಕರಾಟೆ: ಚಿನ್ನ ಗೆದ್ದ ಕೆಂಗಾಪುರದ ತನುಜಾ

ಪ್ರಜಾವಾಣಿ ವಾರ್ತೆ

ಬಸವಾಪಟ್ಟಣ (ದಾವಣಗೆರೆ ಜಿಲ್ಲೆ): ಹಿಮಾಚಲಪ್ರದೇಶದ ಸೋಲಾನ್ ನಗರದಲ್ಲಿ ಈಚೆಗೆ ನಡೆದ ಕ್ಯುಡೊ ರಾಷ್ಟ್ರೀಯ ಕರಾಟೆ ಟೂರ್ನಿಯಲ್ಲಿ ಸಮೀಪದ ಕೆಂಗಾಪುರದ ಆರ್.ಎಸ್. ತನುಜಾ ಚಿನ್ನದ ಪದಕ ಗಳಿಸಿದ್ದಾರೆ. ಇವರು ಶಿಕ್ಷಕ ಎಚ್.ಆರ್. ಸತೀಶ್ ಮತ್ತು ಕವಿತಾ ದಂಪತಿಯ ಪುತ್ರಿ.

ಮೂರು ವರ್ಷ ದಿಡಗೂರ್ ಅಂಬೇಡ್ಕರ್ ಅವರಿಂದ ತರಬೇತಿ ಪಡೆದ ತನುಜಾ ಶಿವಮೊಗ್ಗದಲ್ಲಿ ನಡೆದ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದರು.

'ಕೆಂಗಾಪುರದ ರಾಮಲಿಂಗೇಶ್ವರ ಪ್ರೌಢಶಾಲೆಯ 10ನೇ ತರಗತಿ ವಿದ್ಯಾರ್ಥಿನಿ ತನುಜ ವೈದ್ಯೆಯಾಗಿ ಗ್ರಾಮೀಣ ಜನರ ಸೇವೆ ಮಾಡುವ ಆಸೆ ಹೊಂದಿದ್ದಾರೆ' ಎಂದು ಅಂಬೇಡ್ಕರ್ ತಿಳಿಸಿದ್ದಾರೆ.

ತನುಜಾ